ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

2ನೇ ವರ್ಷದ ವಿಶೇಷಾಂಕ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 2, ಸಂಚಿಕೆ 1
ನವೆಂಬರ್ 2023

SHRIDEVI ANTARANGA
Monthly Magazine

SHRIDEVI EDUCATION






ಪ್ರಧಾನ ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಕನ್ನಡಿಗರ ಮುಂದಿರುವ ಸವಾಲುಗಳೇನು?


**ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕದ ಏಕೀಕರಣ ಚಳವಳಿಗಳೆರಡೂ ಒಟ್ಟೊಟ್ಟಿಗೆ ನಡೆದವು. ಏಕೀಕರಣ ಚಳವಳಿ ಹೆಚ್ಚಾಗಿ ಮುಂಬೈ ಕರ್ನಾಟಕದಲ್ಲಿ ನಡೆದಿತ್ತು. 1890ರ ಜುಲೈ 20ರಂದು ಧಾರವಾಡದಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ' ಪ್ರಾರಂಭವಾಯಿತು.**

ನವೆಂಬರ್ 1 ಕನ್ನಡನಾಡು ಒಂದಾದ ಮತ್ತು ಹೊಸ ಹೆಸರನ್ನು ಪಡೆದ ದಿನ. ಅದಕ್ಕಾಗಿ ಎಲ್ಲೆಡೆ ರಾಜ್ಯೋತ್ಸವದ ಸಂಭ್ರಮ. ಇಂತಹ ಸಂಭ್ರಮ ಜನರಿಗೆ ಭಾಷೆಯನ್ನು ಪ್ರೀತಿಸಲು ಮತ್ತು ಭಾವನಾತ್ಮಕವಾಗಿ ಒಂದಾಗಲು ಸಹಾಯ ಮಾಡುತ್ತದೆ.

ಆದಿಲ್ ಶಾಹಿಗಳ ಪತನ ಮತ್ತು ಮೈಸೂರು ಸಂಸ್ಥಾನದ ಹೈದರ್ ಹಾಗೂ ಟಿಪ್ಪುವಿನ ಆಳ್ವಿಕೆ ಕೊನೆಗೊಂಡ ನಂತರ ಕರ್ನಾಟಕ ಎನ್ನುವ ಪ್ರದೇಶ ಅಕ್ಷರಶಃ ಹತ್ತೊಂಬತ್ತು ಭಾಗಗಳಾಗಿ ವಿಭಜನೆಗೊಂಡಿತ್ತು. ಮೈಸೂರು ಜಿಲ್ಲೆಗೆ ಕೊಳ್ಳೇಗಾಲ, ತುಮಕೂರು ಜಿಲ್ಲೆಗೆ ಮಡಕಸಿರಾ ಪಕ್ಕದಲ್ಲಿದ್ದರೂ, ಅಲ್ಲಿನವರು ನಮ್ಮ ಭಾಷೆಯನ್ನಾಡುತ್ತಿದ್ದರು, ಆಳ್ವಿಕೆಯ ದೃಷ್ಟಿಯಿಂದ ಅವರು ಬೇರೆ ರಾಜ್ಯದ ವ್ಯಾಪ್ತಿಗೆ ಬರುತ್ತಿದ್ದರು. ಕನ್ನಡನಾಡಿನ ಇಂತಹ ದುಃಸ್ಥಿತಿಯನ್ನು ಕಂಡು ಮರುಗಿದ ಸಾಹಿತಿಗಳು, ಕಲಾವಿದರು ಮತ್ತು ಸಾರ್ವಜನಿಕ ಕ್ಷೇತ್ರದ ಮುಖಂಡರು ಕನ್ನಡ ಭಾಷೆಯನ್ನಾಡುವ ಜನರೆಲ್ಲಾ ಒಂದುಗೂಡಬೇಕು ಎಂಬ ಕನಸು ಕಂಡರು.

ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕದ ಏಕೀಕರಣ ಚಳವಳಿಗಳೆರಡೂ ಒಟ್ಟೊಟ್ಟಿಗೆ ನಡೆದವು. ಏಕೀಕರಣ ಚಳವಳಿ ಹೆಚ್ಚಾಗಿ ಮುಂಬೈ ಕರ್ನಾಟಕದಲ್ಲಿ ನಡೆದಿತ್ತು. 1890ರ ಜುಲೈ 20ರಂದು ಧಾರವಾಡದಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ' ಪ್ರಾರಂಭವಾಯಿತು. ಏಕೀಕರಣದ ಧ್ವನಿಯನ್ನು ಸಮರ್ಥವಾಗಿ ಮೊಳಗಿಸಿದ ಕೀರ್ತಿ ಈ ಸಂಸ್ಥೆಗಿದೆ. ಈ ಪ್ರದೇಶವು ಮುಂಬೈ ಪ್ರಾಂತ್ಯದ ಆಳ್ವಿಕೆಗೊಳಪಟ್ಟಿತ್ತು. ಮರಾಠಿ ಭಾಷೆಯ ಪ್ರಭಾವ ಈ ಪ್ರದೇಶದ ಮೇಲೆ ಹೆಚ್ಚಾಗಿತ್ತು. ನಾನು ನವಲಗುಂದದ ತುಪ್ಪದಕುರಹಟ್ಟಿಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪಡೆಯುತ್ತಿದ್ದಾಗ ನಮಗೆ ಮರಾಠಿಯಿಂದ ಅನುವಾದಗೊಂಡ ಕತೆಗಳನ್ನೇ ಪಠ್ಯವಿಷಯವಾಗಿ ಬೋಧಿಸಲಾಗುತ್ತಿತ್ತು. ಮೇಲ್ವರ್ಗದವರ ಮನೆ ಮಾತು ಹೆಚ್ಚು ಕಡಿಮೆ ಮರಾಠಿಯಾಗಿತ್ತು.

ಆ ಭಾಗದಲ್ಲಿ ಸ್ವಾತಂತ್ರ್ಯ ಚಳವಳಿ ಮತ್ತು ಏಕೀಕರಣ



ಚಳವಳಿ ಒಟ್ಟಿಗೇ ನಡೆದವು. 1924ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಮಹಾತ್ಮ ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಏಕೈಕ ಅಧಿವೇಶನವದು. 1924ರಲ್ಲೇ ಏಕೀಕರಣಕ್ಕಾಗಿ 'ಕರ್ನಾಟಕ ಏಕೀಕರಣ ಸಂಘ' ಪ್ರಾರಂಭವಾಯಿತು. ಸ್ವಾತಂತ್ರ್ಯ ಚಳವಳಿ ನಡೆಯುವ ಎಲ್ಲಾ ಸಂದರ್ಭದಲ್ಲೂ ಏಕೀಕರಣದ ಬೇಡಿಕೆಗೆ ಅಂದಿನ ರಾಷ್ಟ್ರೀಯ ನಾಯಕರು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದರು. 1947ರ ಆಗಸ್ಟ್‌ನಲ್ಲಿ ಸ್ವಾತಂತ್ರ್ಯ ಬಂದ ತಕ್ಷಣ ನಮ್ಮ ಏಕೀಕರಣದ ಬೇಡಿಕೆ ಅನುಷ್ಠಾನವಾಗುತ್ತದೆ ಎನ್ನುವ ಕನಸನ್ನು ಕನ್ನಡಿಗರು ಕಂಡಿದ್ದರು. ಆದರೆ ಈ ವಿಚಾರದಲ್ಲಿ ಕೆಲಸ ನಿರೀಕ್ಷಿತ ಮಟ್ಟದಲ್ಲಿ ನಡೆಯಲಿಲ್ಲ.

1952ರಲ್ಲಿ ಆಂಧ್ರಪ್ರದೇಶ ರಾಜ್ಯದ ನಿರ್ಮಾಣಕ್ಕಾಗಿ ಪೊಟ್ಟಿ ಶ್ರೀರಾಮುಲು ಉಪವಾಸ ಸತ್ಯಾಗ್ರಹ ಮಾಡಿ ಮರಣ ಹೊಂದಿದರು. ಆಗ ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು 1953ರ ಡಿಸೆಂಬರ್‌ನಲ್ಲಿ ಭಾಷೆಯ ಆಧಾರದ ಮೇಲೆ ರಾಜ್ಯವನ್ನು ಪುನರ್ ರಚಿಸಲು ಸಲಹೆ ಕೊಡುವಂತೆ 'ಸೈಯದ್ ಫಜಲ್ ಅಲಿ ಆಯೋಗ'ವನ್ನು ನೇಮಿಸಿತು. ಈ ಆಯೋಗ 1955ರ ಅಕ್ಟೋಬರ್‌ನಲ್ಲಿ ತನ್ನ ವರದಿ ನೀಡಿತು. ಆಯೋಗದ ವರದಿ ಅನ್ವಯ, 1956ರ ನವೆಂಬರ್ 1ರಂದು 19 ಜಿಲ್ಲೆಗಳನ್ನೊಳಗೊಂಡ 'ವಿಶಾಲ ಮೈಸೂರು ರಾಜ್ಯ' ನಿರ್ಮಾಣವಾಯಿತು.

ಹೈದ್ರಾಬಾದ್-ಕರ್ನಾಟಕ, ಮುಂಬೈ- ಕರ್ನಾಟಕ, ಕರಾವಳಿ ಭಾಗ, ಉತ್ತರ ಕನ್ನಡ, ಕೊಡಗು, ಬಳ್ಳಾರಿ, ಕೊಳ್ಳೇಗಾಲ ಮುಂತಾದ ಭಾಗಗಳು ಮೈಸೂರು ಸಂಸ್ಥಾನದೊಡನೆ ಸೇರ್ಪಡೆಯಾದವು. ಇಷ್ಟಾದರೂ ಕಾಸರಗೋಡು, ಹೊಸೂರು, ಅದೋನಿ, ಮಂತ್ರಾಲಯ, ಮಡಕಸಿರಾ, ಸೋಲಾಪುರ, ಕೊಲ್ಲಾಪುರ, ಉಮ್ಮರಗ, ಆಲೂರು, ಅಕ್ಕಲಕೋಟೆ ಮುಂತಾದ ಅಚ್ಚ ಕನ್ನಡ ಪ್ರದೇಶಗಳು ಈಗಲೂ ರಾಜ್ಯದ ಹೊರಗಿವೆ. ಇನ್ನು ಕರ್ನಾಟಕದ ಭಾಗವಾಗಿರುವ ಸ್ಥಳಗಳನ್ನು ಪಕ್ಕದ ರಾಜ್ಯದವರು ನಮಗೆ ಸೇರಬೇಕು ಎಂದು ವ್ಯವಸ್ಥಿತವಾಗಿ ತಗಾದೆ ಮಾಡುತ್ತಿದ್ದಾರೆ.

ಕರ್ನಾಟಕದ ಹೊರಗಿದ್ದೂ ಭಾವನಾತ್ಮಕವಾಗಿ ನಮ್ಮೊಡನಿರುವ ಮಡಕಸಿರಾ ತಾಲ್ಲೂಕಿನ ಜನತೆಯನ್ನು ಪ್ರತಿದಿನ ನಾನು ನೋಡುತ್ತಿದ್ದೇನೆ. ಅಲ್ಲಿಂದ ನಮ್ಮ ಆಸ್ಪತ್ರೆಗೆ ನಿರಂತರವಾಗಿ ಪೇಶೆಂಟ್‌ಗಳು ಬರುತ್ತಿರುತ್ತಾರೆ.

▶▶ 2ನೇ ಪುಟಕ್ಕೆ...

## ಕೌಶಲ್ಯತೆಯಿಂದ ಉತ್ತಮ ಉದ್ಯೋಗ ಸಾಧ್ಯ

"ದೇಶದ ವಿಶ್ವವಿದ್ಯಾಲಯಗಳಿಂದ ಹೊರಬರುತ್ತಿರುವ ವಿದ್ಯಾರ್ಥಿಗಳಲ್ಲಿ ಶೇ.20ರಷ್ಟು ಜನರು ಮಾತ್ರವೇ ಉದ್ಯೋಗಕ್ಕೆ ಅರ್ಹರಿದ್ದಾರೆ. ಕೌಶಲ್ಯವಿಲ್ಲದೆ ಕೇವಲ ಪದವಿ ಪಡೆದವರಿಗೆ ಉದ್ಯೋಗಾವಕಾಶಗಳು ದುರ್ಲಭ. ಇಂದು ಜಗತ್ತು ಅತ್ಯಂತ ವೇಗದಲ್ಲಿ ಬದಲಾವಣೆಯಾಗುತ್ತಿದೆ. ಅದೇ ರೀತಿ ಜ್ಞಾನದ ವಿವಿಧ ಶಾಖೆಗಳು ಸಹ ಬೆಳೆಯುತ್ತಿವೆ. ಅದಕ್ಕೆ ಕಾರಣ ಸಂವಹನ ವ್ಯವಸ್ಥೆಯಲ್ಲಿ ಆಗಿರುವ ಕ್ರಾಂತಿಕಾರಕ ಬದಲಾವಣೆಗಳು. ಇಂಟರ್‌ನೆಟ್ ಎಲ್ಲಾ ಕ್ಷೇತ್ರಗಳಲ್ಲಿ ತೀವ್ರ ಬದಲಾವಣೆ ತಂದಿದೆ. ಯುವಜನಾಂಗ ಕೇವಲ ಪಠ್ಯ ವಿಷಯವನ್ನು ನಂಬಿ ನಡೆಯಬಾರದು. ತಮ್ಮ ಕೌಶಲ್ಯದ ಅಭಿವೃದ್ಧಿ ಕುರಿತು ಚಿಂತಿಸಬೇಕು" ಎಂದು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಾದ ಡಾ.ಶರಣ್‌ಪ್ರಕಾಶ್ ಪಾಟೀಲ್ ಅವರು ಶ್ರೀದೇವಿ ಶಿಕ್ಷಣ ಸಂಸ್ಥೆಗಳ ವೈದ್ಯಕೀಯ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಡ್ವಾನ್ಸ್‌ಡ್ ಮೆಡಿಕಲ್ ಸ್ಕಿಲ್ ಆ್ಯಂಡ್ ಸೈಮುಲೇಷನ್, ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಎಮರ್ಜಿಂಗ್ ಟೆಕ್ನಾಲಜೀಸ್, ಐಡಿಯಾಲ್ಯಾಬ್ ಮತ್ತು ತಾಯಿ ಶಿಶು ಆರೋಗ್ಯ ಭಾಗ್ಯ ಯೋಜನೆಗಳನ್ನು ನವೆಂಬರ್ 10ರಂದು ಉದ್ಘಾಟಿಸಿ ಮಾತನಾಡುತ್ತಾ ಹೇಳಿದರು.

ಅವರು ಮುಂದುವರಿದು ಮಾತನಾಡುತ್ತಾ "ಪದವೀಧರರಿಗೆ ವಿಷಯಗಳ ಅರಿವಿದ್ದರೂ, ಶೈಕ್ಷಣಿಕವಾಗಿ ಉತ್ತಮ ಫಲಿತಾಂಶ ಪಡೆದಿದ್ದರೂ, ಕಾರ್ಯಕ್ಷೇತ್ರಗಳಲ್ಲಿ ಉದ್ಯೋಗಕ್ಕೆ ಬೇಕಾದ ಕೌಶಲ್ಯಗಳನ್ನು ರೂಢಿಸಿಕೊಳ್ಳಲು ಕುಟುಂಬದಲ್ಲಿ ಸಂಪನ್ಮೂಲ, ಮೂಲಸೌಕರ್ಯ, ಪರಿಣತ ಬೋಧಕರುಗಳ ಕೊರತೆಯಿಂದಾಗಿ ಸಂದರ್ಶನಗಳಲ್ಲಿ ವಿಫಲರಾಗುತ್ತಿದ್ದಾರೆ. ಅದಕ್ಕಾಗಿ ಕರ್ನಾಟಕ ಸರ್ಕಾರದಿಂದ ಕೌಶಲ್ಯಾಭಿವೃದ್ಧಿಗೆ ಅಪಾರ ಉತ್ತೇಜನ ಮತ್ತು ಪ್ರೋತ್ಸಾಹ ನೀಡಲಾಗುತ್ತಿದೆ.

▶▶ 2ನೇ ಪುಟಕ್ಕೆ...




ಚಿತ್ರದಲ್ಲಿ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಾದ ಡಾ.ಶರಣ್‌ಪ್ರಕಾಶ್ ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ.ಎಂ.ಆರ್.ಹುಲಿನಾಯ್ಕರ್, ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಟ್ರಸ್ಟಿಗಳಾದ ಅಂಬಿಕಾ ಹುಲಿನಾಯ್ಕರ್, ಡಾ.ಲಾವಣ್ಯ ರಮಣ್, ಆಡಳಿತಾಧಿಕಾರಿ ಟಿ.ವಿ.ಬ್ರಹ್ಮದೇವಯ್ಯ, ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್, ಶ್ರೀದೇವಿ ವೈದ್ಯಕೀಯ ಅಧೀಕ್ಷಕರಾದ ಡಾ.ಮೋಹನ್‌ಕುಮಾರ್, ಶ್ರೀದೇವಿ ಆಸ್ಪತ್ರೆಯ ಸಿ.ಇ.ಓ. ಡಾ. ಪ್ರದೀಪ್‌ಕುಮಾರ್ ಮತ್ತು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ರಿಸರ್ಚ್ ಡೀನ್ ಡಾ.ದಿನೇಶ್.

# ಕನ್ನಡಿಗರ ಮುಂದಿರುವ ಸವಾಲುಗಳೇನು?

▶▶ ಮೊದಲನೇ ಪುಟದಿಂದ...

ಮಧುಗಿರಿ–ಪಾವಗಡ ತಾಲ್ಲೂಕಿನ ಮಧ್ಯೆ ಬರುವ 'ಮಡಕಸಿರಾ' ಎಲ್ಲ ದೃಷ್ಟಿಯಿಂದಲೂ ಅಚ್ಚ ಕನ್ನಡದ ಪ್ರದೇಶ. ಅಲ್ಲಿ ಕಾಣುವುದು ಕನ್ನಡ ಸಂಸ್ಕೃತಿ ಮಾತ್ರ. ಇಲ್ಲಿನ ಜನರ ಆಡುಭಾಷೆ ಕನ್ನಡವೇ ಆಗಿದೆ. ಈ ತಾಲ್ಲೂಕಿನ ವ್ಯವಹಾರವೆಲ್ಲಾ ಮಧುಗಿರಿ ಮತ್ತು ತುಮಕೂರುಗಳಲ್ಲಿ ಜರುಗುತ್ತದೆ. ಹೆಸರಿಗೆ ಮಾತ್ರ ಈ ತಾಲ್ಲೂಕು ಆಂಧ್ರಪ್ರದೇಶಕ್ಕೆ ಸೇರಿದೆ. ಹಿಂದೆ ಈ ಜನರು ರಾಜ್ಯದ ರಾಜಧಾನಿಗೆ ಹೋಗಬೇಕಾದರೆ ಹೈದ್ರಾಬಾದ್‌ಗೆ ಹೋಗಬೇಕಾಗಿತ್ತು. ಇಲ್ಲಿ ಕುಂಚಿಟಿಗ, ಗೊಲ್ಲ, ಕುರುಬ, ವಾಲ್ಮೀಕಿಯಂತಹ ಹಿಂದುಳಿದ ಸಮುದಾಯಗಳೇ ಅಧಿಕವಾಗಿವೆ. ಅವರ ಸಂಬಂಧವೆಲ್ಲಾ ತುಮಕೂರು ಜಿಲ್ಲೆಯೊಡನಿದೆ. ಅಭಿವೃದ್ಧಿ ದೃಷ್ಟಿಯಿಂದಲೂ ಈ ತಾಲ್ಲೂಕು ಸಾಕಷ್ಟು ಹಿಂದುಳಿದಿದೆ.

ಏಕೀಕರಣವಾಗಿ ಏಳು ದಶಕಗಳಾದರೂ ಅನೇಕ ಭಾಗಗಳು ಏಕೀಕರಣದ ಪೂರ್ವಸ್ಥಿತಿಯಲ್ಲೇ ಇರುವುದು ಕನ್ನಡಿಗರಿಗೆ ದುರ್ದೈವದ ಸಂಗತಿ. ಇದಕ್ಕೆ ನಮ್ಮನ್ನಾಳುವ ರಾಜಕೀಯ ನಾಯಕರಲ್ಲಿ ಇಚ್ಛಾಶಕ್ತಿಯ ಕೊರತೆ ಇರುವುದು ಕಾರಣ ಎಂದರೆ ತಪ್ಪಿಲ್ಲ. ಆಧುನಿಕ ಕಾಲದಲ್ಲಿ ನಮ್ಮ ರಾಜ್ಯವು ಗಡಿ, ನೀರು ಹಾಗೂ ಇತರ ವಿಚಾರಗಳಿಗೆ ಸಂಬಂಧಪಟ್ಟಂತೆ ನೆರೆಹೊರೆಯವರೊಡನೆ ಕಾಳಗ ಮಾಡಬೇಕಾಗಿಲ್ಲ. ಸ್ವಲ್ಪ ಮುತ್ಸದ್ದಿತನ ತೋರಿದರೆ ಸಾಕು ಆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಮತ್ತೊಂದು ದುರ್ದೈವದ ವಿಚಾರವೆಂದರೆ, ರಾಜ್ಯದ ಜನತೆಗೆ ಈ ವಿಚಾರದಲ್ಲಿ ಆಸಕ್ತಿಯಿಲ್ಲ. ಇದಕ್ಕೆ ಹೋರಾಡುವವರನ್ನು ಬೆಂಬಲಿಸುವುದಿಲ್ಲ. ಬೆಂಗಳೂರಿನ ಎಷ್ಟು ಜನ ನಾಗರಿಕರಿಗೆ ತಾವು ಕುಡಿಯುವ ನೀರು ಕಾವೇರಿ ನದಿಯಿಂದ ಬರುತ್ತದೆ ಎಂಬ ವಿಚಾರ ತಿಳಿದಿದೆ? ಕಾವೇರಿ ನದಿಯ ನೀರನ್ನು ಪಡೆದುಕೊಳ್ಳಲು ಹೋರಾಟಗಾರರು ಪ್ರಯತ್ನ ಮಾಡುವಾಗ ಅವರಿಗೆ ಬೆಂಗಳೂರಿನ ಬಹುಸಂಖ್ಯಾತರು ಬೆಂಬಲ ಕೊಡುವುದಿಲ್ಲ, ತಟಸ್ಥರಾಗುತ್ತಾರೆ. ಕನ್ನಡಿಗರ ಇಂತಹ ಧೋರಣೆಯಿಂದಾಗಿ ನಿರಂತರವಾಗಿ ಅವರು ಶೋಷಣೆಗೊಳಗಾಗುತ್ತಿದ್ದಾರೆ.

ಏಕೀಕರಣವಾದ 17 ವರ್ಷಗಳ ನಂತರ ಮುಖ್ಯಮಂತ್ರಿ ದೇವರಾಜ ಅರಸು ಅವರು ಈ ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿದರು. 1973ರ ನವೆಂಬರ್ 1ರಂದು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಿ ದೇವರಾಜ ಅರಸು ಅವರು ಇತಿಹಾಸ ಪುರುಷರಾದರು.

ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ನಾಡು, ನುಡಿಗಳ ವಿಚಾರದಲ್ಲಿದ್ದ ಬದ್ಧತೆಗೆ ನನ್ನ ವಿದ್ಯಾರ್ಥಿ ಜೀವನದ ಘಟನೆಯೊಂದನ್ನು ಹೇಳಿದರೆ ಮತ್ತಷ್ಟು ಪುಷ್ಟಿ ದೊರೆಯುತ್ತದೆ ಎಂದು ಭಾವಿಸುತ್ತೇನೆ. ನಾನು ಆಗಲೇ ಹೇಳಿದಂತೆ, ಏಕೀಕರಣದ ನಂತರ ಬೆಳಗಾವಿ ನಮಗೆ ಸೇರಿದ್ದರೂ ಪ್ರತಿದಿನ ಅಲ್ಲಿ ಮರಾಠಿಗರಿಂದ ಗಲಾಟೆ ನಡೆಯುತ್ತಿತ್ತು. ಜಿಲ್ಲಾಕೇಂದ್ರವಾದ ಬೆಳಗಾವಿ ನಗರದಲ್ಲಿ ಎಲ್ಲಿ ನೋಡಿದರೂ ಮರಾಠಿ ಭಾಷೆಯ ಬೋರ್ಡ್ ಕಾಣಿಸುತ್ತಿತ್ತು. 1969ರಲ್ಲಿ ನಾನು ಹುಬ್ಬಳ್ಳಿಯ ಕೆ.ಎಂ.ಸಿ. ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್ ಮುಗಿಸಿ 1974ರಲ್ಲಿ ಹೌಸ್‌ಸರ್ಜನ್ ಮಾಡಲು ಬೆಳಗಾವಿ ಸರ್ಕಾರಿ ಜಿಲ್ಲಾಸ್ಪತ್ರೆಗೆ ಹೋಗಿದ್ದೆ. ನಾನು ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿಯಾಗಿದ್ದಾಗ, ಬೆಳಗಾವಿಯಲ್ಲಿದ್ದ ಮರಾಠಿಗರ ವಿರುದ್ಧ ಪ್ರತಿದಿನವೂ ಪ್ರತಿಭಟನೆ ಮಾಡುತ್ತಿದ್ದೆವು. ಇದಕ್ಕೆ ಮುಖ್ಯಮಂತ್ರಿ ದೇವರಾಜ ಅರಸು ಅವರು ಪರಿಹಾರ ಕಂಡುಕೊಳ್ಳಲು ನಿರ್ಧಾರ ಮಾಡಿದರು. ಬೆಳಗಾವಿ ನಗರದಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಾದರೆ ಮರಾಠಿಗರು ತಮ್ಮ ಅಟಾಟೋಪಗಳನ್ನು ಕಡಿಮೆ ಮಾಡಬಹುದು ಎಂದವರು ಭಾವಿಸಿದರು. ಆತನಕ ಧಾರವಾಡದಲ್ಲಿದ್ದ ಡಿವಿಜನಲ್ ಕಮಿಷನರ್ ಕಚೇರಿಯನ್ನು ಬೆಳಗಾವಿಗೆ ಸ್ಥಳಾಂತರ ಮಾಡಿದರು. ಮುಂಬೈ ಕರ್ನಾಟಕದ ಆರೇಳು ಜಿಲ್ಲೆಯವರು ಬೆಳಗಾವಿಗೆ ಹೋಗಬೇಕಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಅಧಿಕಾರಿಗಳು ಅಲ್ಲಿಗೆ ಬಂದರು. ಕೆ.ಎಲ್.ಇ. ಶಿಕ್ಷಣ ಸಂಸ್ಥೆಯು ವಿವಿಧ ಕೋರ್ಸ್‌ಗಳನ್ನು ಪ್ರಾರಂಭ ಮಾಡಿತು. ಎಪ್ಪತ್ತರ ದಶಕದಲ್ಲಿ ಡಿವಿಜನಲ್ ಕಮಿಷನರ್ ಕಚೇರಿಗೆ ತುಂಬಾ ಮಹತ್ವವಿತ್ತು. ಎಲ್ಲಾ ಅಭಿವೃದ್ಧಿ ಕೆಲಸಗಳೂ ಅಲ್ಲಿಂದಲೇ ಪ್ರಾರಂಭವಾಗುತ್ತಿದ್ದವು. ಬೆಳಗಾವಿ ನಗರದಲ್ಲಿ ಸದಾಶಿವನಗರ, ಮಹಾಂತೇಶ ಬಡಾವಣೆ ಮೊದಲಾದ ಹೊಸ ಜನವಸತಿ ಪ್ರದೇಶಗಳು ಕಾಣಿಸಿಕೊಂಡವು. ಕಿತ್ತೂರು, ಬೈಲಹೊಂಗಲ, ಗೋಕಾಕ, ಸವದತ್ತಿ ಮೊದಲಾದ ಕಡೆಯಿಂದ ಕನ್ನಡದ ಕುಟುಂಬಗಳು ಬೆಳಗಾವಿಗೆ ಬಂದು ನೆಲೆಸಿದವು. ಮುಖ್ಯಮಂತ್ರಿ ದೇವರಾಜ ಅರಸು ಅವರ ಆ ಕೆಲಸದಿಂದ ಬೆಳಗಾವಿಯಲ್ಲಿ ಕನ್ನಡದ ವಾತಾವರಣ ಚೆನ್ನಾಗಿ ಬೆಳೆಯತೊಡಗಿತು.



ಈಗ ಬೆಳಗಾವಿಯಲ್ಲಿ ಸುವರ್ಣಸೌಧ ನಿರ್ಮಾಣವಾಗಿದೆ. ಚಳಿಗಾಲದ ಅಧಿವೇಶನ ನಡೆಯುತ್ತದೆ. ಹಿಂದೆ ಬೆಳಗಾವಿಯಲ್ಲಿನ ಕೆಲವು ಸ್ಥಳಗಳಿಗೆ ಹೋದರೆ, ಮಹಾರಾಷ್ಟ್ರದಲ್ಲಿ ಇದ್ದೇವೇನೋ ಎಂಬ ಭಾವನೆ ಬರುತ್ತಿತ್ತು. ನಮ್ಮ ಆಸ್ಪತ್ರೆಗೆ ಬರುತ್ತಿದ್ದ ಮರಾಠಿ ಪೇಶೆಂಟ್‌ಗಳನ್ನು ಮಾತನಾಡಿಸಬೇಕಾದರೆ ಹರಸಾಹಸ ಪಡಬೇಕಾಗಿತ್ತು. ಆಗ ಆಸ್ಪತ್ರೆಯ ಮುಖ್ಯಸ್ಥರಾಗಿದ್ದ ಡಾ. ಸಂಗಪ್ಪ ದೇಸಾಯಿ ಅವರು ವೈದ್ಯರಾಗಿ ಪೇಶೆಂಟ್‌ಗಳನ್ನು ಒಲಿಸಿಕೊಳ್ಳುವ ರೀತಿಯನ್ನು ನಮಗೆ ಹೇಳಿಕೊಡುತ್ತಿದ್ದರು. ಬೆಳಗಾವಿಯಲ್ಲಿ ಕನ್ನಡಿಗರಿಗೆ ಧ್ವನಿ ಕೊಟ್ಟ ಕೀರ್ತಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರಿಗೆ ಸಲ್ಲುತ್ತದೆ.

1980ರಲ್ಲಿ ಮುಂಬೈ ಕರ್ನಾಟಕದ ಹುಬ್ಬಳ್ಳಿ–ಧಾರವಾಡದಲ್ಲಿ ಮೊತ್ತಮೊದಲ ಬಾರಿಗೆ, ಕನ್ನಡ ಭಾಷೆಗೆ ಪ್ರಥಮ ಆದ್ಯತೆ ದೊರೆಯಬೇಕು ಎಂಬ ಉದ್ದೇಶದಿಂದ 'ಗೋಕಾಕ ಚಳವಳಿ' ಪ್ರಾರಂಭವಾಯಿತು. ಡಾ. ಪಾಟೀಲ ಪುಟ್ಟಪ್ಪ, ಡಾ. ಎಂ.ಚಿದಾನಂದಮೂರ್ತಿ ಮೊದಲಾದವರ ಒತ್ತಾಯದಿಂದ ಡಾ. ರಾಜ್‌ಕುಮಾರ್ ಈ ಚಳವಳಿಗೆ ಧುಮುಕಿದರು.

ಗೋಕಾಕ ಚಳವಳಿ ಕನ್ನಡದ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರೇರಣೆ ನೀಡಿತು. ಮುಂದೆ ಅಧಿಕಾರಕ್ಕೆ ಬಂದ ಜನತಾಪಕ್ಷ ನೇತೃತ್ವದ ಸರ್ಕಾರದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಆಗ ಶಾಸಕರಾಗಿದ್ದ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ 'ಕನ್ನಡ ಕಾವಲು ಸಮಿತಿ' ರಚನೆ ಮಾಡಿದರು. ಶ್ರೀ ಸಿದ್ದರಾಮಯ್ಯ ಅವರ ನೇತೃತ್ವದ ಸಮಿತಿ ನೀಡಿದ ವರದಿ ಕನ್ನಡದ ಅನೇಕ ಸಮಸ್ಯೆಗಳಿಗೆ ಪರಿಹಾರ ನೀಡಿತು.

ಉದಾಹರಣೆಗೆ ಹೇಳುವುದಾದರೆ, ಶಿಕ್ಷಣದಲ್ಲಿ ಕನ್ನಡ ಭಾಷೆಗೆ ಪ್ರಥಮ ಸ್ಥಾನ ದೊರಕಿದೆ. ಇನ್ನು ಆಡಳಿತದಲ್ಲಿ ಶೇಕಡ 80ರಷ್ಟು ಕನ್ನಡ ಭಾಷೆ ಬಳಕೆಯಲ್ಲಿದೆ.

ಇಷ್ಟಾದರೂ ಉನ್ನತ ಶಿಕ್ಷಣ ಮತ್ತು ನ್ಯಾಯಾಂಗ ಕ್ಷೇತ್ರದಲ್ಲಿ ಪೂರ್ಣ ಪ್ರಮಾಣದಲ್ಲಿ ಕನ್ನಡ ಭಾಷೆ ಬಳಕೆಯಾಗುತ್ತಿಲ್ಲ. 1992ರಿಂದ ದೇಶದಲ್ಲಿ ಹೊಸ ಆರ್ಥಿಕ ನೀತಿಗಳಾದ 'ಜಾಗತೀಕರಣ' 'ವಿಶ್ವ ವ್ಯಾಪಾರೀಕರಣ'ದ ಅನ್ವಯ ಹೊಸ ವ್ಯವಸ್ಥೆ ಜಾರಿಗೆ ಬರುತ್ತಿದೆ. ಕನ್ನಡವು ಕ್ರಮೇಣ ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುತ್ತಿದೆ ಎಂದರೆ ತಪ್ಪಿಲ್ಲ.

ಎಂಬತ್ತರ ದಶಕದಲ್ಲಿದ್ದಂತೆ ಇಂದು ಜನರು ಭಾಷೆಯ ವಿಚಾರದಲ್ಲಿ ಭಾವುಕರಾಗಿಲ್ಲ. ಮಾಹಿತಿ ತಂತ್ರಜ್ಞಾನ ಅಂದರೆ I.T.ಯಿಂದಾಗಿ ಸಮುದಾಯದ ಚಿಂತನೆಯಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿದೆ. ಶಾಲಾ ಶಿಕ್ಷಣವು ಪೋಷಕರ ಇಚ್ಛೆಗೆ ಅನುಗುಣವಾಗಿ ಇಂಗ್ಲಿಷ್ ಭಾಷೆಯಲ್ಲಿ ನಡೆಯುತ್ತಿದೆ. ಹಿಂದಿ–ಇಂಗ್ಲಿಷ್ ಭಾಷೆಗಳು ಕನ್ನಡ ಭಾಷೆಯ ಸ್ಥಾನವನ್ನು ಆಕ್ರಮಿಸುತ್ತಿವೆ ಎಂದು ಪ್ರಜ್ಞಾವಂತರಿಗೆ ಅನಿಸಿದರೆ ಆಶ್ಚರ್ಯವಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಮತ್ತು ಕಾರ್ಯಾಂಗದ ನೀತಿ ನಿರೂಪಕರು ವಾಸ್ತವ ನೆಲೆಗಟ್ಟಿನಲ್ಲಿ ಯೋಚಿಸಬೇಕು. ಶಾಲಾ ಶಿಕ್ಷಣದಲ್ಲಿ ಹಿಂದೆ ಸರ್ಕಾರಿ ಶಾಲೆಗಳು ತುಂಬಾ ಮಹತ್ವದ ಪಾತ್ರ ವಹಿಸುತ್ತಿದ್ದವು. ಈಗ ಅಲ್ಲಿಗೆ ಮಕ್ಕಳೇ ಬರುತ್ತಿಲ್ಲ. ಜನಸಮುದಾಯದ ಇಚ್ಛೆಗೆ ವಿರುದ್ಧವಾಗಿ ಶಾಲಾ ಶಿಕ್ಷಣವನ್ನು ರೂಪಿಸುವುದು ಹೇಗೆ? ಖಾಸಗಿ ಕ್ಷೇತ್ರದಲ್ಲೇ ಉದ್ಯೋಗ ಅವಕಾಶಗಳಿರುವುದು. ಎಲ್ಲರೂ ವೃತ್ತಿಶಿಕ್ಷಣವನ್ನು ಬಯಸುತ್ತಿದ್ದಾರೆ. ಅಂದಮೇಲೆ ಯುವಜನಾಂಗದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ವಿಚಾರಗಳನ್ನು ಬಿತ್ತುವುದು ಹೇಗೆ? ಎಷ್ಟೇ ಅಭಿಮಾನದ ಮಾತುಗಳನ್ನು ನವೆಂಬರ್ ತಿಂಗಳಲ್ಲಿ ಆಡಿದರೂ ವಾಸ್ತವ ಸ್ಥಿತಿ ಬೇರೆಯಿದೆ. ಗ್ರಾಮೀಣ ಪ್ರದೇಶದ ಮಕ್ಕಳಲ್ಲೂ ಇಂತಹ ಸವಾಲುಗಳಿವೆ.

ಇಂತಹ ಪರಿಸ್ಥಿತಿಯಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದಿದೆಯಲ್ಲ ಅದೊಂದು ಸವಾಲಿನ ವಿಷಯ. ನಮ್ಮನ್ನಾಳುವವರು ಈ ವಿಚಾರದಲ್ಲಿ ಚಿಂತಿಸಿದಂತೆ ಕಾಣುತ್ತಿಲ್ಲ. ತಾತ್ಕಾಲಿಕವಾಗಿ ಏನು ಬೇಕೋ ಅದನ್ನು ಮಾಡುವ ಮನಃಸ್ಥಿತಿ ಅವರದು.

ಕೇವಲ ನವೆಂಬರ್ ತಿಂಗಳಲ್ಲಿ ಮಾತ್ರ ಕನ್ನಡ ಭಾಷೆ ಮತ್ತು ಸಂಸ್ಕೃತಿ ವಿಚಾರದಲ್ಲಿ ತಲೆ ಕೆಡಿಸಿಕೊಳ್ಳುತ್ತೇವೆ ಎಂದರೆ ಅದೊಂದು ಆತ್ಮದ್ರೋಹದ ಕೆಲಸ. ಮುಂದಿನ ದಿನಗಳಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿ ದೊಡ್ಡ ಅಪಾಯಕ್ಕೆ ಸಿಲುಕಿದರೆ ಆಶ್ಚರ್ಯ ಪಡಬೇಕಾಗಿಲ್ಲ.

■ **ನಿರೂಪಣೆ: ಶ್ರೀವತ್ಸ**

---

# ಕೌಶಲ್ಯತೆಯಿಂದ ಉತ್ತಮ ಉದ್ಯೋಗ ಸಾಧ್ಯ

▶▶ ಮೊದಲನೇ ಪುಟದಿಂದ...

ಈ ನಿಟ್ಟಿನಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆ ಕೈಗೊಂಡಿರುವ ಚಟುವಟಿಕೆಗಳು ಶ್ಲಾಘನೀಯ. ಈ ಸಂಬಂಧ ಈ ಸಂಸ್ಥೆ ಸಲ್ಲಿಸಲಾದ ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ನ್ಯಾಯ ಒದಗಿಸಲಾಗುವುದು" ಎಂದರು.

ಸಮಾರಂಭದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು "ಪದವೀಧರರಲ್ಲಿ ಅಗತ್ಯವಾಗಿ ಬೇಕಾದ ಕೌಶಲ್ಯ ಪಡೆಯಲಿ, ತರಬೇತಿಗಾಗಿ ಉತ್ತಮ ಮೂಲಭೂತ ಸೌಕರ್ಯ, ಪರಿಣತ ಉಪನ್ಯಾಸಕರು ಮತ್ತು ತರಬೇತುದಾರರನ್ನು ಸಂಸ್ಥೆ ಒದಗಿಸುತ್ತಿದೆ. ಹೊಸ ಸಂಶೋಧನಾ ವಿಷಯಗಳ ಅರಿವು ಮೂಡಿಸುವ ವಾತಾವರಣ ಕಲ್ಪಿಸಿಕೊಡುವಲ್ಲಿ ಟ್ರಸ್ಟ್ ಪ್ರಯತ್ನ ನಡೆಸಿದೆ. ವಿದ್ಯಾರ್ಥಿಗಳು ಇದನ್ನು ಸದುಪಯೋಗಪಡಿಸಿಕೊಂಡು ಉತ್ತಮ ಉದ್ಯೋಗಗಳನ್ನು ಪಡೆದುಕೊಳ್ಳಬೇಕು" ಎಂದು ನುಡಿದರು.

ತಾಯಿ ಶಿಶು ಆರೋಗ್ಯ ಭಾಗ್ಯ ಯೋಜನೆಯಡಿಯಲ್ಲಿ ಆರೋಗ್ಯ ಸಂಬಂಧಿ ವಿಚಾರಗಳ ಬಗ್ಗೆ ಶ್ರೀದೇವಿ ಮೆಡಿಕಲ್ ಕಾಲೇಜಿನ ಉಪಪ್ರಾಂಶುಪಾಲರಾದ ಡಾ. ರೇಖಾಗುರುಮೂರ್ತಿ ಅವರು ಬಾಣಂತಿಯರಿಗೆ ಒದಗಿಸಲಾಗಿರುವ ವಿಶೇಷ ಸೌಲಭ್ಯಗಳನ್ನು ವಿವರಿಸಿ, ಮೆಡಿಕಲ್ ಕಿಟ್‌ಗಳನ್ನು ವಿತರಿಸಿದರು.

ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಸಿದ ಹತ್ತು ದಿನದ ಸ್ಕಿಲ್ ಕಾನ್‌ಕ್ಲೇವ್ ಕಾರ್ಯಕ್ರಮದಲ್ಲಿ ಹ್ಯಾಕಥಾನ್ ಮತ್ತು ಐಡಿಯಾಥಾನ್ ಸ್ಪರ್ಧೆಗಳಲ್ಲಿ ವಿಜೇತರಾದ ತಂಡದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

■ **ವರದಿ: ಎನ್.ಆನಂದ**

**ಪತ್ರಿಕೆಯ ಬಳಗ**

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**


ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**




ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ವಿವಿಧ ಅಧ್ಯಯನ ವಿಷಯಗಳ ಮುಖ್ಯಸ್ಥರು. ಎಡಗಡೆಯಿಂದ ಡಾ.ಆನಂದಿ, ಪ್ರಾಂಶುಪಾಲರು, ಫಿಜಿಯೋಥೆರಪಿ. ಡಾ.ಗೋಪಾಲಕೃಷ್ಣ ಪ್ರಾಂಶುಪಾಲರು, ಫಾರ್ಮಸಿ. ಡಾ.ಕೃಷ್ಣ, ಪ್ಯಾರಾ ಮೆಡಿಕಲ್ ಪ್ರಾಂಶುಪಾಲರು. ಡಾ.ರೇಖಾ ಗುರುಮೂರ್ತಿ, ಉಪ ಪ್ರಾಂಶುಪಾಲರು, ಶ್ರೀದೇವಿ ವೈದ್ಯಕೀಯ ಕಾಲೇಜು. ಡಾ.ಮೋಹನ ಕುಮಾರ್, ಮೆಡಿಕಲ್ ಸೂಪರಿಂಟೆಂಡೆಂಟ್. ಡಾ.ಎಂ.ಆರ್.ಹುಲಿನಾಯ್ಕರ್, ಸಂಸ್ಥಾಪಕ ಅಧ್ಯಕ್ಷರು, ಶ್ರೀದೇವಿ ಶಿಕ್ಷಣ ಸಂಸ್ಥೆ. ಪ್ರೊ.ನರೇಂದ್ರ ವಿಶ್ವನಾಥ, ಪ್ರಾಂಶುಪಾಲರು ಇಂಜಿನಿಯರಿಂಗ್ ಕಾಲೇಜು. ಡಾ.ಲೋಕೇಶ್ ಬಿ.ಎಸ್., ಪ್ರಾಂಶುಪಾಲರು, ಪಾಲಿಟೆಕ್ನಿಕ್ ಕಾಲೇಜು. ಪ್ರೊ.ಮುಬಾರಕ್, ಪ್ರಾಂಶುಪಾಲರು, ಪದವಿ ಕಾಲೇಜು. ಪ್ರೊ.ದಯಾನಂದ, ಪ್ರಾಂಶುಪಾಲರು, ಶ್ರೀ ರಮಣ ಮಹರ್ಷಿ ನರ್ಸಿಂಗ್ ಕಾಲೇಜು ಮತ್ತು ಶ್ರೀ ಬಸವರಾಜು, ಮುಖ್ಯೋಪಾಧ್ಯಾಯರು, ಶ್ರೀದೇವಿ ವಿದ್ಯಾಮಂದಿರ

■ ಸಂದರ್ಶನ:
ಎನ್.ಭಾರತಿ



## ನಮ್ಮ ಕೆಲಸಗಳನ್ನಷ್ಟೇ ನಿಷ್ಠೆಯಿಂದ ಮಾಡೋಣ

■ **ಡಾ.ಎಂ.ಎಲ್.ಹರೇಂದ್ರ ಕುಮಾರ್**
**ಪ್ರಾಂಶುಪಾಲರು, ಶ್ರೀದೇವಿ ವೈದ್ಯಕೀಯ ಕಾಲೇಜು**



ನಾನು ಶ್ರೀದೇವಿ ವೈದ್ಯಕೀಯ ಕಾಲೇಜಿಗೆ ಪ್ರಾಂಶುಪಾಲನಾಗಿ ಬರುವುದಕ್ಕೆ ಮುಂಚಿನಿಂದಲೂ ಡಾ.ಹುಲಿನಾಯ್ಕರ್ ಅವರ ಹೆಸರು ಕೇಳಿದ್ದೆ. ಶ್ರೀಯುತರು ಛಲ ಮತ್ತು ದುಡಿಮೆಯಿಂದ ಮಹತ್ವದ್ದನ್ನು ಸಾಧಿಸಿದ್ದಾರೆ ಎಂಬುದು ಪರಿಚಿತ ವಿಷಯವಾಗಿತ್ತು. 2001ರಲ್ಲಿ ಡಾ.ಹುಲಿನಾಯ್ಕರ್ ಅವರು ತುಮಕೂರಿನ ಐ.ಎಂ.ಎ.ನ ಅಧ್ಯಕ್ಷರಾಗಿ ಆಯೋಜಿಸಿದ್ದ ರಾಜ್ಯಮಟ್ಟದ ಸಮ್ಮೇಳನ ವೈದ್ಯಕೀಯ ಕ್ಷೇತ್ರದಲ್ಲಿರುವ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು.

ನಾನು ವೈದ್ಯಕೀಯ ಶಿಕ್ಷಣದಲ್ಲಿ ಕಳೆದ 35 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನ್ನ ಅನುಭವ ಮಾತ್ರವಲ್ಲ ಎಲ್ಲರೂ ಹೇಳುವಂತೆ ಡಾಕ್ಟರ್ ಆದವರೇ ವೈದ್ಯಕೀಯ ಕಾಲೇಜಿನ ಚೇರ್ಮನ್ ಆದರೆ ಅವರ ಕೈಕೆಳಗೆ ಕೆಲಸ ಮಾಡುವುದು ತುಂಬ ಕಷ್ಟವೆನಿಸಬಹುದು. ಇರುಸು–ಮುರುಸುಗಳಾಗಬಹುದು. ಆದರೆ ಡಾ.ಹುಲಿನಾಯ್ಕರ್ ಜೊತೆ ಕೆಲಸ ಮಾಡಲು ಒಂದಿಷ್ಟೂ ಮುಜುಗರ ಆಗುವುದಿಲ್ಲ. ಅದಕ್ಕೆ ಕಾರಣ ಅವರಿಗೆ ಪ್ರತಿ ವ್ಯಕ್ತಿಗೂ ಗೌರವ ಕೊಡುವ, ಅವರ ಆತ್ಮಗೌರವಕ್ಕೆ ಧಕ್ಕೆ ಬಾರದಂತೆ ವರ್ತಿಸುವ ರೀತಿ ರಿವಾಜುಗಳು ಚೆನ್ನಾಗಿ ಗೊತ್ತಿವೆ. ಪ್ರತಿಯೊಬ್ಬರಲ್ಲೂ ಇರುವ ಶಕ್ತಿ, ಸಾಮರ್ಥ್ಯಗಳ ವಿಚಾರದಲ್ಲಿ ಅವರಿಗೆ ಗೌರವವಿದೆ. ಅದನ್ನು ಬಳಸಿಕೊಂಡೇ ಸಂಸ್ಥೆಯನ್ನು ಬೆಳೆಸಬೇಕು ಎಂಬ ಆಶಯ ಅವರಲ್ಲಿದೆ. ಅವರೆಂದೂ ನಮ್ಮ ಕೆಲಸದಲ್ಲಿ ಅಡ್ಡ ಬರುವುದಿಲ್ಲ. ಸಂಸ್ಥೆ ಕಾಲಮಿತಿಯಲ್ಲಿ ಹೇಗೆ ಕೆಲಸ ಮಾಡಿ ಗುರಿ ಸಾಧನೆ ಮಾಡಬೇಕು ಎಂಬುದನ್ನು ಮಾತ್ರ ಹೇಳುತ್ತಾರೆ. ಉಳಿದಂತೆ 'ಪ್ಲಾನ್ ಮಾಡಿ ಅನುಷ್ಠಾನ ಮಾಡುವುದು ನಿಮ್ಮ ಹೊಣೆ' ಎನ್ನುತ್ತಾರೆ. ನಾವು ಯಾವುದಾದರೂ ಹೊಸ ಕೆಲಸಗಳ ಬಗ್ಗೆ ಹೇಳಿದರೆ ಅದನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತಾರೆ. ಅಗತ್ಯವಾದ ಸಲಹೆ ಕೊಡುತ್ತಾರೆ. ಅತ್ಯಂತ ಸರಳ ವ್ಯಕ್ತಿತ್ವದವರು ಡಾ. ಹುಲಿನಾಯ್ಕರ್ ಅವರು.

ಶ್ರೀದೇವಿ ವೈದ್ಯಕೀಯ ಕಾಲೇಜು ಹತ್ತು ವರ್ಷದ ಮಗು. ಅದನ್ನು ಸಮರ್ಥವಾಗಿ ಮುನ್ನಡೆಸುವ ದೂರದೃಷ್ಟಿ ಮತ್ತು ಸಂಘಟನಾ ಸಾಮರ್ಥ್ಯ ಡಾ.ಹುಲಿನಾಯ್ಕರ್ ಅವರಲ್ಲಿದೆ ಎಂಬುದು ನನ್ನ ಪ್ರಬಲವಾದ ನಂಬಿಕೆ.

ನಾವೆಲ್ಲಾ ಅವರಿಗೆ ಬೆಂಬಲವಾಗಿ ನಿಂತು ನಮ್ಮ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿದರೆ, ಶ್ರೀದೇವಿ ವೈದ್ಯಕೀಯ ಕಾಲೇಜು ರಾಜ್ಯದಲ್ಲೇ ವೈದ್ಯಕೀಯ ಶಿಕ್ಷಣ ಕೊಡುವ ಶ್ರೇಷ್ಠ ವಿದ್ಯಾಸಂಸ್ಥೆಯಾಗುತ್ತದೆ. ನಾವೆಲ್ಲಾ ಈ ದಿಸೆಯಲ್ಲಿ ಸಾಗುತ್ತಿದ್ದೇವೆ ಎಂದಷ್ಟೇ ಹೇಳಬಯಸುತ್ತೇನೆ.

## ಪೇಶೆಂಟ್‌ಗಳೇ ದೇವರು

■ **ಡಾ.ಕೆ.ಮೋಹನ ಕುಮಾರ್**
**ಮೆಡಿಕಲ್ ಸೂಪರಿಂಟೆಂಡೆಂಟ್, ಶ್ರೀದೇವಿ ಆಸ್ಪತ್ರೆ**



ನಾನು ಶ್ರೀದೇವಿ ಮೆಡಿಕಲ್ ಕಾಲೇಜಿನ ಎಂಟುನೂರು ಹಾಸಿಗೆಯ ಆಸ್ಪತ್ರೆಗೆ ಮೆಡಿಕಲ್ ಸೂಪರಿಂಟೆಂಡೆಂಟ್ ಆಗಿ ಬಂದಾಗ ಆಸ್ಪತ್ರೆಯ ಸ್ಥಿತಿ ಚೆನ್ನಾಗಿರಲಿಲ್ಲ. ಒಳ ರೋಗಿಗಳ ಸಂಖ್ಯೆ ಕಡಿಮೆಯಿತ್ತು. ಆಪರೇಷನ್ ಸಹ ದೊಡ್ಡ ಸಂಖ್ಯೆಯಲ್ಲಿ ನಡೆಯುತ್ತಿರಲಿಲ್ಲ. ಶ್ರೀದೇವಿ ಆಸ್ಪತ್ರೆಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳಿದ್ದರೂ ಅದರ ಬಳಕೆ ಸಮರ್ಪಕವಾಗಿರಲಿಲ್ಲ. ಅದಕ್ಕೆ ನಾನು ಚೇರ್ಮನ್ ಅವರಿಗೆ ಈ ಆಸ್ಪತ್ರೆಯನ್ನು 'ನೆಕ್ಸ್ಟ್ ಲೆವೆಲ್'ಗೆ ತೆಗೆದುಕೊಂಡು ಹೋಗೋಣ ಎಂದೆ. 'ಅದಕ್ಕೆ ಸ್ವಲ್ಪ ಚಾರಿಟಿ ಮಾಡಬೇಕಾಗುತ್ತದೆ. ರೋಗಿಗಳಿಗೆ ಆರ್ಥಿಕ ಸೌಲಭ್ಯ ಕೊಟ್ಟರೆ ಅವರು ತಾವಾಗಿಯೇ ಬರುತ್ತಾರೆ, ರೋಗಿಗಳ ಆಗಮನದಿಂದ ಆಸ್ಪತ್ರೆ ತಾನಾಗಿಯೇ ಅಭಿವೃದ್ಧಿ ಹೊಂದುತ್ತದೆ' ಎಂಬುದು ನನ್ನ ಅಭಿಪ್ರಾಯವಾಗಿತ್ತು. ಈ ಪ್ರಸ್ತಾವನೆಯಲ್ಲಿ ದೊಡ್ಡ ಪ್ರಮಾಣದ ಸಂಪನ್ಮೂಲವನ್ನು ಸಂಸ್ಥೆ ಕಳೆದುಕೊಳ್ಳಬೇಕಾಗಿತ್ತು. ತಕ್ಷಣ ಡಾ.ಹುಲಿನಾಯ್ಕರ್ ಅವರು 'ಪ್ಲಾನ್ ಮಾಡಿ'ಎಂದು ಸಮ್ಮತಿ ನೀಡಿದರು.

ಶ್ರೀದೇವಿ ಆಸ್ಪತ್ರೆಯಲ್ಲಿ ಹದಿನಾಲ್ಕು ಆಪರೇಷನ್ ಥಿಯೇಟರ್‌ಗಳಿವೆ. ಉತ್ತಮವಾದ ತಜ್ಞ ವೈದ್ಯರ ತಂಡ ಸಹ ಇದೆ. ಉದಾರವಾದ ನಡೆಯನ್ನು ಮ್ಯಾನೇಜ್‌ಮೆಂಟ್ ಅನುಸರಿಸಿದ ಕಾರಣ ಆಸ್ಪತ್ರೆಗೆ ಒಳರೋಗಿಗಳ ಹರಿವು ಹೆಚ್ಚಾಯಿತು. ಜೊತೆಗೆ ಆಪರೇಷನ್‌ಗಳ ಸಂಖ್ಯೆ ದುಪ್ಪಟ್ಟಾಯಿತು. ಈಗ ಜನರಲ್ ವಾರ್ಡ್‌ನಲ್ಲಿರುವವರಿಗೆ ಸಂಪೂರ್ಣ ಉಚಿತ ಚಿಕಿತ್ಸೆ ದೊರೆಯುತ್ತದೆ. ಸ್ಪೆಷಲ್‌ವಾರ್ಡ್‌ನವರಿಗೂ ಅಂತಹ ತ್ರಾಸವಾಗುವುದಿಲ್ಲ. ಬೆಂಗಳೂರು ಕಡೆ ಯಾವುದಾದರೂ ಆಪರೇಷನ್‌ಗೆ ಮೂರು ಲಕ್ಷ ಖರ್ಚು ಆದರೆ ನಮ್ಮಲ್ಲಿ ಅದಕ್ಕೆ ಏಳೆಂಟು ಸಾವಿರ ರೂಗಳು ವೆಚ್ಚವಾಗಬಹುದು. ಅದು ಅಗತ್ಯ ಮೆಡಿಸಿನ್‌ಗೆ ಮಾತ್ರ ಈ ವೆಚ್ಚ.

ಆಶ್ಚರ್ಯದ ಸಂಗತಿ ಎಂದರೆ ನಮ್ಮಲ್ಲಿಗೆ ಬರುವ ಬಹುತೇಕ ಪೇಶೆಂಟ್‌ಗಳಿಗೆ ಡಾ.ಹುಲಿನಾಯ್ಕರ್ ಅವರು ಪರಿಚಿತರಾಗಿರುತ್ತಾರೆ. ಅವರಿಂದ ಯಾವುದಾದರೊಂದು ರೀತಿ ವೈದ್ಯಕೀಯ ಸೇವೆ ಪಡೆದಿರುತ್ತಾರೆ. ಇಂತಹ ಸಂಪರ್ಕದಿಂದಾಗಿ ಪೇಶೆಂಟ್‌ಗಳ ಸಂಬಂಧಿಕರು ಅಥವಾ ಪರಿಚಿತರು ಅವರಿಂದಲೇ ನೇರವಾಗಿ ಆರ್ಥಿಕ ಸಹಾಯ ಪಡೆಯುತ್ತಾರೆ. ಆಸ್ಪತ್ರೆಗೆ ಡಾ.ಹುಲಿನಾಯ್ಕರ್ ಅವರು ಗಳಿಸಿದ ವೈದ್ಯಕೀಯ ವೃತ್ತಿಯ ಗುಡ್‌ವಿಲ್ ಉಪಯೋಗಕ್ಕೆ ಬಂದಿರುವುದನ್ನು ಕಾಣಬಹುದು.

ಡಾ. ಹುಲಿನಾಯ್ಕರ್ ಅವರಲ್ಲಿ ಇಂದಿಗೂ ವೈದ್ಯಕೀಯ ವೃತ್ತಿಯಲ್ಲಿನ ಶ್ರದ್ಧೆ ಮತ್ತು ಬದ್ಧತೆಯನ್ನು ಕಾಣಬಹುದು. ಯಾವುದೇ ಪೇಶೆಂಟ್ ಶ್ರೀದೇವಿ ಆಸ್ಪತ್ರೆಗೆ ಬಂದು ಅದು ಡಾ.ಹುಲಿನಾಯ್ಕರ್ ಅವರಿಗೆ ಗೊತ್ತಾದರೆ, ಆ ಪೇಶೆಂಟ್‌ನ ಟ್ರೀಟ್‌ಮೆಂಟ್‌ಗೆ ನಮ್ಮ ಜೊತೆ ಚರ್ಚೆ ಮಾಡುತ್ತಾರೆ. ತಾವೇ ಬಂದು ಪೇಶೆಂಟ್ ನೋಡುತ್ತಾರೆ. ಪೇಶೆಂಟ್‌ನ ಸಹಾಯಕರಿಗೆ ಹಿರಿಯರಾಗಿ ಸಲಹೆ ನೀಡುತ್ತಾರೆ. ನಮ್ಮ ಸಂಸ್ಥೆಯ ಅಧ್ಯಕ್ಷರಿಗೆ ಪೇಶೆಂಟ್‌ಗಿಂತ ದೊಡ್ಡದು ಯಾವುದೂ ಇಲ್ಲ. ಯುವವೈದ್ಯರಿಗೆ ಅವರು ಸದಾ ಕಾಲ ಸ್ಫೂರ್ತಿಯ ಗಣಿ.

ಡಾ.ಹುಲಿನಾಯ್ಕರ್ ಅವರ ಜೊತೆ ಮಾತನಾಡುತ್ತಿದ್ದರೆ, ಆಸ್ಪತ್ರೆಯನ್ನು ಹೇಗೆ ಬೆಳೆಸಬಹುದು ಎಂಬುದಕ್ಕೆ ಹಲವಾರು 'ಟಿಪ್ಸ್'ಗಳು ದೊರೆಯುತ್ತವೆ. ಅನೇಕ ಉದಾಹರಣೆಗಳನ್ನು ಕೊಡುತ್ತಾರೆ. ಸರ್ಕಾರಿ ವಲಯದಲ್ಲೂ ಕೆಲಸ ಮಾಡಿರುವ ಅವರ ಅನುಭವ ತುಂಬ ದೊಡ್ಡದು. ವೈವಿಧ್ಯಮಯವಾದ ಪೇಶೆಂಟ್‌ಗಳನ್ನು ನೋಡಿದ್ದಾರೆ. ಚಿಕಿತ್ಸೆ ನೀಡಿದ್ದಾರೆ. ಅನೇಕ ಕಾಯಿಲೆಗಳ ಕುರಿತು ತಜ್ಞರ ಜೊತೆ ಚರ್ಚೆ ಮಾಡಿದ್ದಾರೆ. ಅವರು ಕೇವಲ ಪ್ರಾಕ್ಟೀಸ್ ಮಾಡಿಲ್ಲ, ವೃತ್ತಿ ಅಧ್ಯಯನದ ಭಾಗವೆಂದು ಕೆಲಸ ಮಾಡಿರುವ ಕಾರಣ ಅವರಲ್ಲಿ ಸಂಶೋಧನಾಸಕ್ತಿ ಬೆಳೆದಿದೆ. ಅವರ ಅನುಭವವನ್ನು ಸಮರ್ಥವಾಗಿ ಬಳಸಿಕೊಳ್ಳುವ ಸವಾಲು ನಮ್ಮ ಮುಂದಿದೆ. ಶ್ರೀದೇವಿ ಆಸ್ಪತ್ರೆಯ ವಿಚಾರದಲ್ಲಿ ಅವರು ಕಂಡಿರುವ ಕನಸು ನನಸಾಗುವಂತೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಶ್ರೀದೇವಿ ಕುಟುಂಬ

## 'ಅವರ' ಆಶೀರ್ವಾದ ಸದಾ ಇರಲಿ

■ **ಡಾ.ರೇಖಾ ಗುರುಮೂರ್ತಿ**



ನಮ್ಮೂರು ಚಿಕ್ಕನಾಯಕನಹಳ್ಳಿ, ನಾವೆಲ್ಲಾ ಬೆಂಗಳೂರಿನಲ್ಲಿ ಹುಟ್ಟಿ ಅಲ್ಲೇ ಬೆಳೆದರೂ ಹುಟ್ಟೂರಿನ ಸಂಪರ್ಕವಿತ್ತು. ನಮ್ಮ ಅಂಕಲ್ ಅಲ್ಲಿ ಖಾಸಗಿಯಾಗಿ ಪ್ರಾಕ್ಟೀಸ್ ಮಾಡುತ್ತಿದ್ದರು. ನಾನು ಐದನೆಯ ತರಗತಿಯಲ್ಲಿದ್ದಾಗ ಒಮ್ಮೆ ಚಿಕ್ಕನಾಯಕನಹಳ್ಳಿಗೆ ಹೋದಾಗ ಅಂಕಲ್ ಡಾ.ಎಂ.ಆರ್. ಹುಲಿನಾಯ್ಕರ್ ಅವರ ಹೆಸರನ್ನು ಹತ್ತಾರು ಬಾರಿ ಹೇಳಿದ್ದರು. ಅನೇಕ ಪೇಶೆಂಟ್‌ಗಳನ್ನು ಅವರ ಬಳಿಗೆ ಕಳುಹಿಸುತ್ತಿದ್ದರು. ನಮ್ಮ ನೆಂಟರಿಷ್ಟರು ಡಾ.ಹುಲಿನಾಯ್ಕರ್ ಅವರು ಎಂತಹ ಕಷ್ಟಸಾಧ್ಯವಾದ ಆಪರೇಷನ್ ಆದರೂ ಎದೆಗುಂದದೆ ಮಾಡಬಲ್ಲರು, ನುರಿತ ಸರ್ಜನ್ ಎಂದು ಹಾಡಿ ಹೊಗಳುತ್ತಿದ್ದರು.

ನಮ್ಮ ತಂದೆ ಮೊದಲಿಗೆ ಬೌರಿಂಗ್ ಮೊದಲಾದ ಆಸ್ಪತ್ರೆಗಳ ಮುಖ್ಯಸ್ಥರಾಗಿದ್ದರು, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಪ್ರಾರಂಭವಾಗಲು ವಿಶೇಷಾಧಿಕಾರಿಯಾಗಿ ಕೆಲಸ ಮಾಡಿದವರು. ಕೋಲಾರ ದೇವರಾಜ ಅರಸು ಮೆಡಿಕಲ್ ಕಾಲೇಜು ಸೇರಿದಂತೆ ಮೂರು, ನಾಲ್ಕು ವೈದ್ಯಕೀಯ ಕಾಲೇಜುಗಳು ಅಭಿವೃದ್ಧಿಯಾಗಲು ಶ್ರಮಿಸಿದವರು. ಅವರಿಗೆ ಡಾ.ಹುಲಿನಾಯ್ಕರ್ ಹುಬ್ಬಳ್ಳಿಯ ಕೆ.ಎಂ.ಸಿ. ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಓದುತ್ತಿರಬೇಕಾದರೆ ಗೊತ್ತಿದ್ದರು. 1981ರಲ್ಲಿ ಅವರು ತುಮಕೂರಿಗೆ ಬಂದ ಮೇಲೆ ಮತ್ತಷ್ಟು ಬಳಕೆ ಹೆಚ್ಚಾಯಿತು. ನಮ್ಮ ಮನೆಯಲ್ಲಿ ಮಾತನಾಡುತ್ತಿರಬೇಕಾದರೆ ಅನೇಕ ಸಲ ತಂದೆಯವರು ಡಾ.ಹುಲಿನಾಯ್ಕರ್ ಅವರ ಬಗ್ಗೆ ಹೇಳಿದ ವಿಚಾರಗಳನ್ನು ಕೇಳಿದ್ದೇನೆ. ಅದರಲ್ಲಿ ಕೆಲವು ಮಾತುಗಳನ್ನು ಜ್ಞಾಪಿಸಿಕೊಳ್ಳಬಹುದು.

"ಡಾ.ಎಂ.ಆರ್.ಹುಲಿನಾಯ್ಕರ್ ಅವರು ಇಂದಿಗೂ ತಮ್ಮ ಹತ್ತವರನ್ನು ಮರೆತಿಲ್ಲ. ಒಡಹುಟ್ಟಿದವರು ಅವರ ಸಂಪರ್ಕದಲ್ಲಿದ್ದಾರೆ. ಆ ಕಾಲದ ಸ್ನೇಹಿತರು ಅವರಲ್ಲಿಗೆ ಬರುತ್ತಿರುತ್ತಾರೆ. ಶ್ರೀದೇವಿ ನರ್ಸಿಂಗ್ ಹೋಂನಲ್ಲಿ ನವಲಗುಂದದ ಜನರೇ ಹೆಚ್ಚಿರುತ್ತಾರೆ. ಅವರಿಗೆ ಟ್ರೀಟ್‌ಮೆಂಟ್ ಮಾತ್ರ ಕೊಡುವುದಿಲ್ಲ. ಮನೆಗೆ ಕರೆದುಕೊಂಡು ಹೋಗಿ ಊಟ ಉಪಚಾರ ಸಹ ಮಾಡಿಸುತ್ತಾರೆ. ಅವರ ಜೊತೆ ಯಾರಿಗಾದರೂ ಒಮ್ಮೆ ಸಂಪರ್ಕಕ್ಕೆ ಬಂದರೆ ಅವರೆಂದೂ ಡಾ.ಹುಲಿನಾಯ್ಕರ್ ಅವರನ್ನು ಬಿಡುವುದಿಲ್ಲ. ಬಡವರ ಮತ್ತು ಶೋಷಿತರ ವಿಚಾರದಲ್ಲಿ ಅವರಿಗೆ ಹೆಚ್ಚಿನ ಮಮತೆ". ನಮ್ಮ ತಂದೆಯ ಈ ಮಾತು ನನಗೆ ತಲೆಯಲ್ಲಿ ಕಾಯಂ ಆಗಿ ಉಳಿದುಬಿಟ್ಟಿದ್ದವು.

2014ರಲ್ಲಿ ದೈವಕೃಪೆಯಿಂದ ಶ್ರೀದೇವಿ ವೈದ್ಯಕೀಯ ಕಾಲೇಜಿನ ಸ್ತ್ರೀರೋಗ ವಿಭಾಗಕ್ಕೆ ಪ್ರಾಧ್ಯಾಪಕಿಯಾಗಿ ಬಂದೆ. ಈಗ ಉಪ ಪ್ರಾಂಶುಪಾಲೆಯಾಗಿದ್ದೇನೆ. ನಮ್ಮ ಅಂಕಲ್ ಮತ್ತು ತಂದೆಯವರು ಡಾ.ಹುಲಿನಾಯ್ಕರ್ ಕುರಿತು ಹೇಳಿದ ಮಾತುಗಳು ಸುಳ್ಳಾಗಿರಲಿಲ್ಲ. ಅವರದು ಮೇರು ಸದೃಶ ವ್ಯಕ್ತಿತ್ವ, ಎಲ್ಲರನ್ನೂ ಸಮಾನವಾಗಿ ಕಾಣುವ ವಿಶಾಲ ಮನೋಧರ್ಮ ಅವರಲ್ಲಿದೆ. ಅವರನ್ನು ಕಂಡಾಗೆಲ್ಲ ನನಗೆ ನಮ್ಮ ಮನೆಯ ಹಿರಿಯರನ್ನು ಕಂಡ ಅನುಭವವಾಗುತ್ತದೆ. ನಮ್ಮಂತಹ ಕಿರಿಯರ

ಮೇಲೆ ಅವರ ಆಶೀರ್ವಾದ ಸದಾ ಇರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

## 'ಅವರ' ಜೊತೆ ಕೆಲಸ ಮಾಡುವುದೇ ಮಹಾಭಾಗ್ಯ

**▪ ಟಿ.ವಿ.ಬ್ರಹ್ಮದೇವಯ್ಯ, ಆಡಳಿತಾಧಿಕಾರಿ**



ನಾನು ತುಮಕೂರಿನ ಹೆಚ್.ಎಂ.ಟಿ. ಕಾರ್ಖಾನೆಯಲ್ಲಿ ಸಿಬ್ಬಂದಿ ನಿರ್ವಹಣೆಯ ಶಾಖೆಯಲ್ಲಿ 22 ವರ್ಷ ಕೆಲಸ ಮಾಡಿದ್ದೆ. 2002ರಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಗೆ ಬಂದೆ. ಆಗ ನಾನು ಮತ್ತು ರೂಪ ಇಬ್ಬರೇ ಇದ್ದೆವು. ಡಾ.ಹುಲಿನಾಯ್ಕರ್ ಸಾಹೇಬ್ರು ಬಿಡುವಿಲ್ಲದ ಸರ್ಜನ್. ಆಗ ಇಂಜಿನಿಯರಿಂಗ್ ಕಾಲೇಜು ಮಂಜೂರು ಆಗಿತ್ತು. ಅದಕ್ಕೆ ಬೇಕಾದ ಕಟ್ಟಡ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಅಣಿ ಮಾಡುವ ಜವಾಬ್ದಾರಿ ನಮ್ಮಗಳ ಮೇಲೆ ಬಿತ್ತು. ಎಷ್ಟೋ ಸಂದರ್ಭದಲ್ಲಿ ರಾತ್ರಿ 10 ಗಂಟೆಗೆ, ಎಂ.ಜಿ.ರಸ್ತೆಯಲ್ಲಿದ್ದ ಶ್ರೀದೇವಿ ನರ್ಸಿಂಗ್ ಹೋಂಗೆ ಹೋಗಿ ಚೆಕ್‌ಗೆ ಅವರ ಸಹಿ ಹಾಕಿಸಿಕೊಂಡು ಬಂದಿದ್ದೇನೆ. ಆಪರೇಷನ್ ಥಿಯೇಟರ್‌ನಿಂದ ಹೊರಬಂದು ಗ್ಲೌಸ್ ಬಿಚ್ಚಿ ಸಹಿ ಹಾಕಿಕೊಟ್ಟಿದ್ದಾರೆ. ಬೆಳಗ್ಗೆ ಕಬ್ಬಿಣ, ಸಿಮೆಂಟ್‌ಗಳನ್ನು ತಂದು ಕೆಲಸ ಮಾಡಿದ್ದೇವೆ.

ಸ್ವಲ್ಪ ದಿನದ ನಂತರ ಸರ್ಕಾರದಲ್ಲಿ ನಮ್ಮ ಸಂಸ್ಥೆಯ ಕೆಲಸಗಳನ್ನು ಮಾಡಿಸಲು ಹೋಗುತ್ತಿದ್ದೆ. ನಾವು ಯಾವುದೇ ಆಫೀಸ್‌ಗೆ ಹೋದರೂ ಡಾ.ಹುಲಿನಾಯ್ಕರ್ ಅವರ ಹೆಸರು ಹೇಳಿದರೆ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದರು.

ಸಾಹೇಬ್ರಿಗೆ ಯಾವುದೇ ಕೆಲಸವಾಗಲಿ ಮೊದಲೇ ಪ್ಲಾನ್ ಮಾಡಿದಂತೆ ಮುಗಿಯಬೇಕು. ಅವರು ಯಾವಾಗ ವಿಶ್ರಾಂತಿ ಮಾಡುತ್ತಾರೆ ಎನ್ನುವುದು ಗೊತ್ತಾಗುತ್ತಿರಲಿಲ್ಲ. ಇಲ್ಲಿ ಕಾಲೇಜಿಗೆ ಬಂದು ಕಾಮಗಾರಿ ನೋಡೋರು, ನರ್ಸಿಂಗ್ ಹೋಂಗೆ ಹೋಗಿ ಪೇಶೆಂಟ್‌ಗಳನ್ನು ಮಾತನಾಡಿಸುತ್ತಿದ್ದರು. ಬೆಂಗಳೂರಿನಲ್ಲಿ ರಾಜಕೀಯ ಪಕ್ಷದ ಸಭೆಗಳಿಗೆ ಹಾಜರಾಗುತ್ತಿದ್ದರು. ಅವರ ಹಾಗೆ ಕೆಲಸ ಮಾಡುವುದು ಯಾರಿಗೂ ಸಾಧ್ಯವಿಲ್ಲ. ತಮ್ಮಲ್ಲಿರುವವರು ನನ್ನ ಹಾಗೇ ಕೆಲಸ ಮಾಡಬೇಕು ಎಂಬ ನಿರೀಕ್ಷೆ ಅವರಲ್ಲಿದೆ.

ಡಾ.ಹುಲಿನಾಯ್ಕರ್ ಸಾಹೇಬ್ರು ಹೀಗೆ ಹಗಲಿರುಳು ಕೆಲಸ ಮಾಡಿದ ಕಾರಣ ನಾವೆಲ್ಲಾ ಕೆಲಸ ಮಾಡಿದೆವು. ಕೇವಲ ಎರಡು ದಶಕದಲ್ಲಿ ಎಷ್ಟೊಂದು ಕಾಲೇಜುಗಳು, ಬೃಹತ್ ಆಸ್ಪತ್ರೆ, ಕೊನೆಯದಾಗಿ ಮೆಡಿಕಲ್ ಕಾಲೇಜು ಎಲ್ಲವೂ ಕೈಗೂಡಿರುವುದಕ್ಕೆ ಅವರೇ ಮಾರ್ಗದರ್ಶಕರು ಮತ್ತು ಪ್ರೇರಣಾದಾಯಕರು.

ಈ ಶ್ರೀದೇವಿ ವಿದ್ಯಾಸಂಸ್ಥೆಗಳಲ್ಲಿ ಪ್ರತಿನಿತ್ಯ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸೆಮಿನಾರ್‌ಗಳು ಜರುಗುತ್ತವೆ. ಅನೇಕ ಗಣ್ಯರು ಅದರಲ್ಲೂ ವಿದೇಶಿ ತಜ್ಞರು ನಮ್ಮಲ್ಲಿಗೆ ಬಂದು ಇಲ್ಲಿನ ಶೈಕ್ಷಣಿಕ ವಾತಾವರಣವನ್ನು ಕಂಡು ಹರ್ಷ ವ್ಯಕ್ತಪಡಿಸುತ್ತಾರೆ. ಅದಕ್ಕೆಲ್ಲಾ ನಮ್ಮ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ಕಾರಣಕರ್ತರಾಗಿದ್ದಾರೆ. ಅವರ ಜೊತೆ ಕೆಲಸ ಮಾಡುವುದೇ ಮಹಾಭಾಗ್ಯ.

## ಪ್ರಯತ್ನಶೀಲ ಬದುಕು

**▪ ಎಸ್.ವಿಕ್ಟರ್ ಪ್ರಸಾದ್**
**ಮುಖ್ಯ ಲೆಕ್ಕಾಧಿಕಾರಿ, ಶ್ರೀದೇವಿ ಶಿಕ್ಷಣ ಸಂಸ್ಥೆ**



ನಾನು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗೆ ಬರುವ ಮುಂಚೆ ಅನೇಕ ಕಡೆ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡಿದ್ದೆ. ತೆರಿಗೆ ಮತ್ತು ಆದಾಯ ತೆರಿಗೆ ವಿಚಾರದಲ್ಲಿ ಕರ್ನಾಟಕ ಸರ್ಕಾರದ ಅಂಗಸಂಸ್ಥೆಗಳಿಗೆ ಸಲಹೆಗಾರನಾಗಿಯೂ ಕೆಲಸ ಮಾಡಿದ್ದೆ. ಇಲ್ಲಿಗೆ ಮುಖ್ಯ ಲೆಕ್ಕಾಧಿಕಾರಿಯಾಗಿ



# ಹಲವು ಜನ್ಮದ ಪುಣ್ಯ

**▪ ಡಾ.ಲಾವಣ್ಯ ರಮಣ**
**ಪ್ರಾಧ್ಯಾಪಕರು, ನೇತ್ರಶಾಸ್ತ್ರ ವಿಭಾಗ**
**ಶ್ರೀದೇವಿ ವೈದ್ಯಕೀಯ ಕಾಲೇಜು**

ನಾನು 2013ರಲ್ಲಿ ಅಪ್ಪಾಜಿ ಅರ್ಥಾತ್ ಪೂಜ್ಯ ಹುಲಿನಾಯ್ಕರ್ ದಂಪತಿಯ ಮಗ ಡಾ.ರಮಣ ಅವರನ್ನು ಮದುವೆಯಾಗಿ ಈ ಮನೆಗೆ ಸೊಸೆಯಾಗಿ ಬಂದ ಕೆಲವೇ ದಿನಗಳಲ್ಲಿ ನನಗೆ ಅನಿಸಿದ್ದು, 'ಹಲವು ಜನ್ಮದ ಪುಣ್ಯದ ಫಲ ಈಗ ದೊರಕಿದೆ'.

ಮದುವೆಯಾದ ಮಾರನೆಯ ದಿನ ಪೂಜಾಗೃಹದಲ್ಲಿ ಅರತಿ ಮಾಡುತ್ತಿರುವಾಗ ಅವಧೂತರೊಬ್ಬರ ಫೋಟೋದಿಂದ ಪ್ರಸಾದ ರೂಪದಲ್ಲಿ ಬಲಗಡೆ ಹೂವು ಬಿತ್ತು. ನನಗೆ ಆಶ್ಚರ್ಯ. ಆಗ ಪೂಜ್ಯ ಶಾಂತಾದುರ್ಗಾದೇವಿ ಅಮ್ಮ ಅವರನ್ನು 'ಇವರ್‍ಯಾರು' ಎಂದು ಕೇಳಿದೆ. ಅದಕ್ಕೆ 'ಇವರು ನಮ್ಮ ಕುಟುಂಬಕ್ಕೆ ದೇವಿಯ ಪೂಜಾ ಕೈಂಕರ್ಯವನ್ನು ನೀಡಿದ ಅವಧೂತರಾದ ನವಲಗುಂದದ ಹುರಕಡ್ಲಿ ಅಜ್ಜ' ಎಂದರು. ಮಾತು ಮುಂದುವರಿಸಿ 'ನಿನ್ನ ಅದೃಷ್ಟ, ನಿನ್ನನ್ನು ಈ ಮನೆಯ ಸೊಸೆ ಎಂದವರು ಒಪ್ಪಿಕೊಂಡಿದ್ದಾರೆ' ಎಂದರು. ಈಗ ಅಮ್ಮನ ಮಾತು ಅಕ್ಷರಶಃ ನಿಜವಾಗಿದೆ. ನಂತರ ಎಲ್ಲರೂ ಹುರಕಡ್ಲಿ ಅಜ್ಜನ ಬಗ್ಗೆ ಸಾಕಷ್ಟು ವಿವರಗಳನ್ನು ಹೇಳಿದರು.

ನನಗೆ ಜನ್ಮ ನೀಡಿದ ತಂದೆ,ತಾಯಿಗಳ ಜೊತೆ ಎರಡನೆಯ ತಂದೆ, ತಾಯಿಯಾಗಿ ಪೂಜ್ಯ ಹುಲಿನಾಯ್ಕರ್ ಅಪ್ಪಾಜಿ ಮತ್ತು ಪೂಜ್ಯ ಶಾಂತಾದುರ್ಗಾದೇವಿ ಅಮ್ಮ ಅವರುಗಳಿದ್ದಾರೆ. ಪ್ರತಿಯೊಂದು ವಿಚಾರದಲ್ಲೂ ಅವರು ನನ್ನನ್ನು ಮಗಳಂತೆ ಕಾಣುತ್ತಾರೆ.

ಅಪ್ಪಾಜಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಮೂಲಕ ಎರಡು ಸಾವಿರ ಕುಟುಂಬಗಳಿಗೆ ಅನ್ನ ನೀಡುತ್ತಿದ್ದಾರೆ. ಇಂತಹ ಪುಣ್ಯಪುರುಷರಿಗೆ ಊಟ, ತಿಂಡಿ ಕೊಡುವ ಪುಣ್ಯಕಾರ್ಯವನ್ನು ದೇವರು ನನ್ನ ಪಾಲಿಗೆ ಕೊಟ್ಟಿರುವುದು ಮಹಾಭಾಗ್ಯವಲ್ಲವೇ? ಅವರು ನಮ್ಮ ಪಾಲಿಗೆ ದೇವತಾಸ್ವರೂಪಿಗಳಾಗಿದ್ದಾರೆ.

ನನಗೆ ಈ ಮನೆಗೆ ಬಂದ ಮೇಲೆ ದೈವಶಕ್ತಿಯ ಮಹತ್ವ ತಿಳಿದಿದ್ದು. ನಾನು ವಿದ್ಯಾರ್ಥಿದಿಸೆಯಿಂದಲೂ ಶ್ರೀ ರಾಘವೇಂದ್ರಸ್ವಾಮಿಗಳ ಆರಾಧಕಳಾಗಿದ್ದೆ. ಆದರೆ ಅದು ಬದುಕಿನ ಭಾಗವಾಗಿರಲಿಲ್ಲ. ಪೂಜೆ ಪ್ರತ್ಯೇಕ ಸಂಗತಿಯಾಗಿತ್ತು. ಅಪ್ಪಾಜಿ ಮತ್ತು ಅಮ್ಮನನ್ನು ನೋಡಿದ ಮೇಲೆ ದೈವಭಕ್ತಿ ಮತ್ತು ದೈವಶ್ರದ್ಧೆ ಪ್ರತಿ ಗಳಿಗೆಯಲ್ಲೂ ನಮ್ಮೊಡನಿರುವ ಪ್ರಜ್ಞೆ ಎನಿಸಿತು. ಅಪ್ಪಾಜಿ ಮತ್ತು ಅಮ್ಮ ಅವರಿಗೆ ಬದುಕಿನ ಪ್ರತಿ ಗಳಿಗೆಯೂ ದೇವರನ್ನು ಸ್ಮರಿಸುವ ಕ್ಷಣವಾಗಿರುತ್ತದೆ. ಅಪ್ಪಾಜಿ ಪ್ರತಿದಿನ ಮಾಡುವ ಪೂಜೆಯನ್ನು ನೋಡುತ್ತಿರುತ್ತೇನೆ. ಅದಕ್ಕೆ ಅಣಿ ಮಾಡಿಕೊಡುತ್ತೇನೆ. ಆ ಪೂಜೆಯಲ್ಲಿ ದೇವಿಗೆ ತಮ್ಮನ್ನೇ ಅರ್ಪಿಸಿಕೊಂಡ ಶ್ರದ್ಧೆ ಕಂಡುಬರುತ್ತದೆ. ಅದೇ ರೀತಿ ಅಮ್ಮ ಸಹ. ದೇವಿ ಸ್ಮರಣೆಯಲ್ಲಿ ಅವರಿಗೆ ಹಸಿವು, ಬಾಯಾರಿಕೆ ಯಾವುದೂ ಇರುವುದಿಲ್ಲ. ಆಶ್ಚರ್ಯವಲ್ಲ, ಸತ್ಯದ ಸಂಗತಿ. ಅವರ ಮಗ ರಮಣ ಸಹ ತಮ್ಮ ತಂದೆ, ತಾಯಿಗಳನ್ನು ಈ ವಿಚಾರದಲ್ಲಿ ಸಂಪೂರ್ಣವಾಗಿ ಅನುಸರಣೆ ಮಾಡುತ್ತಾರೆ. ಇದರಿಂದ ಇಡೀ ಮನೆಯಲ್ಲಿ 'ಸಕಾರಾತ್ಮಕ ಎನರ್ಜಿ' ಎಲ್ಲೆಡೆ ಪಸರಿಸಿರುವುದನ್ನು ಕಾಣಬಹುದು.

ಅಪ್ಪಾಜಿ ಮತ್ತು ಅಮ್ಮ ಅವರ ಸಾತ್ವಿಕ ಶಕ್ತಿಯ ಪ್ರಭಾವ ನಮಗೆ ಗೋಚರವಾಗುತ್ತಿದೆ. ಎಂತಹ ಕಷ್ಟದ ಸಂದರ್ಭದಲ್ಲೂ ನಮಗೆ ಬೆಳಕಿನ ಕಿರಣ ಕಾಣಿಸುತ್ತದೆ. ಡಾ.ರಮಣ ಹೇಳುವಂತೆ "ಶ್ರೀದೇವಿ ಶಿಕ್ಷಣ ಸಂಸ್ಥೆ ಮತ್ತು ಆಸ್ಪತ್ರೆಯನ್ನು ಅಪ್ಪಾಜಿ ಮತ್ತು ಅಮ್ಮ ಕೇವಲ ಮಣ್ಣು ಜೆಲ್ಲಿ, ಸಿಮೆಂಟ್‌ಗಳಿಂದ ಮಾತ್ರ ನಿರ್ಮಿಸಿಲ್ಲ. ಅದಕ್ಕೆ ತಮ್ಮ ತಪಸ್ಸನ್ನು ಧಾರೆ ಎರೆದಿದ್ದಾರೆ. ಅದನ್ನು ಉಳಿಸಿಕೊಂಡು ಹೋದರೆ ಸಾಕು".

ಅಪ್ಪಾಜಿ ಪ್ರತಿಹಂತದಲ್ಲೂ ನಮಗೆ ಜೀವನದ ಅನೇಕ ಪಾಠಗಳನ್ನು ಕಲಿಸುತ್ತಿರುತ್ತಾರೆ. ಅದು ವೃತ್ತಿಗೆ ಸಂಬಂಧಪಟ್ಟಿದ್ದು ಇರಬಹುದು ಅಥವಾ ಸಾಮಾಜಿಕ ನಡವಳಿಕೆಗೆ ಸಂಬಂಧಿಸಿದ್ದಾಗಿರಬಹುದು. ತುಪ್ಪದಕುರಹಟ್ಟಿಯಿಂದ ಬಂಧುಗಳು ಹಾಗೂ ಇತರರು ಬರುತ್ತಾರೆ. ಅವರನ್ನು ಹೇಗೆ ನೋಡಿಕೊಳ್ಳಬೇಕು ಎಂಬುದನ್ನು ಹೇಳಿಕೊಡುತ್ತಾರೆ. ಮನೆಗೆ ಬರುವ ಯಾರೇ ಆದರೂ ಅವರನ್ನು ಸತ್ಕರಿಸಬೇಕು ಎನ್ನುವುದು ಅವರ ನಿಲುವು. ಅಪ್ಪಾಜಿ ನನಗೆ ಗೊತ್ತಿರುವಂತೆ ಯಾರ ಮನಸ್ಸನ್ನೂ ನೋಯಿಸಿದವರಲ್ಲ. ಹಿಂದೆ ಅವರಿಂದ ತೊಂದರೆಯಾಗಿದ್ದರೂ ಎದುರಿಗೆ ಬಂದಾಗ ಮರೆತು ಬಿಟ್ಟು ಸಹಾಯ ಮಾಡಿದ ನಿದರ್ಶನಗಳು ನೂರಾರಿವೆ.

ಅಪ್ಪಾಜಿ ಸದಾ 'ಕೂಲ್' ಆಗಿರುವವರು. ನಾವು ಉದ್ವೇಗಕ್ಕೊಳಗಾದರೂ ಅವರು ತಾಳ್ಮೆ ಕಳೆದುಕೊಳ್ಳುವುದಿಲ್ಲ. ಎಂತಹುದೇ ಪರಿಸ್ಥಿತಿ ಬಂದರೂ ಹೇಗೆ ಗೊಂದಲವಿಲ್ಲದೆ, ಯೋಚಿಸುವುದು, ಅದರಂತೆ ಕಾರ್ಯಪ್ರವೃತ್ತರಾಗುವುದು ಮೊದಲಾದ ಸಂಗತಿಗಳನ್ನು ಅವರಿಂದ ಕಲಿಯಬೇಕು. ಇದನ್ನು ಯಾವುದೇ ಪಠ್ಯಪುಸ್ತಕದಲ್ಲಿ ಬೋಧಿಸುವುದಿಲ್ಲ. ಅಪ್ಪಾಜಿಯಂತಹ ಮಾದರಿ ವ್ಯಕ್ತಿಯಿಂದಲೇ ಕಲಿಯಲು ಸಾಧ್ಯ.

ಅಪ್ಪಾಜಿಯ ಮತ್ತೊಂದು ವಿಶೇಷ ಗುಣವೆಂದರೆ ಎಲ್ಲರಿಗೂ ಅವರಲ್ಲಿ ಸಮಯವಿದೆ. ಯಾರು ಬೇಕಾದರೂ ಅವರ ಹತ್ತಿರ ಹೋಗಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳಬಹುದು. ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಬಹುದು. ತುರ್ತು ಸಂದರ್ಭದಲ್ಲೂ ಮಕ್ಕಳು ಅಥವಾ ಬಂಧುಗಳು ಫೋನ್ ಮಾಡಿದರೆ ಬೇಸರ ಮಾಡಿಕೊಳ್ಳುವುದಿಲ್ಲ. ನಿಧಾನವಾಗಿ ಉತ್ತರಿಸುತ್ತಾರೆ. ಮತ್ತೆ ಅವರೇ ಫೋನ್ ಮಾಡಿ ಅವರ ಸಮಸ್ಯೆಗಳನ್ನು ಕೇಳುತ್ತಾರೆ. ನೀವು ಮಿತ್ರರ ಜೊತೆ ಮಾತನಾಡಿದಂತೆ ಅಪ್ಪಾಜಿ ಹತ್ತಿರ ಮಾತನಾಡಬಹುದು.

ಅಪ್ಪಾಜಿಗೆ ಕುಟುಂಬವೆಂದರೆ ತುಂಬ ಪ್ರೀತಿ. ಹಿಂದೆ ನರ್ಸಿಂಗ್ ಹೋಂನಲ್ಲಿ ಸಮಯ ಕಳೆದಿರಬಹುದು. ಈಗ ಶ್ರೀದೇವಿ ಶಿಕ್ಷಣ ಸಂಸ್ಥೆಯ ಕ್ಯಾಂಪಸ್‌ನಲ್ಲಿ ಕೆಲಸ ಮುಗಿದ ಮೇಲೆ ನೇರವಾಗಿ ಮನೆಗೆ ಬಂದು ನಮ್ಮ ಜೊತೆ ಕುಳಿತು ಮಾತನಾಡುತ್ತಾರೆ. ಟಿ.ವಿ.ಯಲ್ಲಿ ವಾರ್ತೆಗಳನ್ನು ಕೇಳುತ್ತಾರೆ. ರಮಣ, ಅಮ್ಮ, ನಾನು, ಮಕ್ಕಳು ಯಾರು ಏನನ್ನು ಕೇಳಿದರೂ ಅದಕ್ಕೆ ಸಮರ್ಪಕವಾದ ಉತ್ತರ ಕೊಡುತ್ತಾರೆ. ಮನಸ್ಸಿಗೆ ಶಾಂತಿ ದೊರೆಯುತ್ತದೆ. ಕೆಲವೊಮ್ಮೆ ಜ್ಞಾನವೃದ್ಧಿಯಾಗುತ್ತದೆ.

ಕೊನೆಯದಾಗಿ, ಅಪ್ಪಾಜಿಗೆ ಸಿಹಿ ಬಹಳ ಇಷ್ಟ. ಡಯಾಬಿಟೀಸ್, ಸಕ್ಕರೆ ಪ್ರಮಾಣ ಹೆಚ್ಚಾಗುತ್ತದೆ ಎಂದು ಸಿಹಿ ಕೊಡುವುದಿಲ್ಲ. ಅವರಿಗೆ ಧಾರವಾಡ ಕಡೆಯ ಜೋಳದ ರೊಟ್ಟಿ, ಬೆಣ್ಣೆ, ಕಾಯಿಪಲ್ಯ, ಎಣ್ಣೆಗಾಯಿ ತುಂಬಾ ಇಷ್ಟ. ಸಂಗಟಿ ಅಂದರೆ ಜೋಳದ ನುಚ್ಚನ್ನು ಕುದಿಸಿ ಅದಕ್ಕೆ ಹಾಲು ಸ್ವಲ್ಪ ಬೆಲ್ಲ ಬೆರೆಸಿ ತಿನ್ನುವುದು. ಬಿಸಿ ಕೆಂಪು ಅಕ್ಕಿ ಅನ್ನಕ್ಕೆ ಹಾಲು, ಬೆಲ್ಲ ಹಾಕಿಕೊಂಡು ತಿನ್ನುವುದು ಅವರಿಗೆ ಖುಷಿ ಕೊಡುತ್ತದೆ. 'ಬಾನ' ಸಹ ಅವರಿಗೆ ಪ್ರಿಯವಾದದ್ದು.

ನೀವು ಏನನ್ನೇ ಬಡಿಸಿದರೂ ಅದೇ ಖುಷಿಯಿಂದ ಊಟ ಮಾಡುತ್ತಾರೆ. ಸಂತೃಪ್ತಿ ವ್ಯಕ್ತಪಡಿಸುತ್ತಾರೆ. ಅಮ್ಮನ ಕೈನ ಅಡುಗೆ ಅವರಿಗೆ ತುಂಬ ಪ್ರಿಯ. ಎಂದೂ ಒಬ್ಬರೇ ಕುಳಿತು ಊಟ ಮಾಡುವುದಿಲ್ಲ. ಜೊತೆಯಲ್ಲಿ ಎಲ್ಲರೂ ಕುಳಿತು ಊಟ ಮಾಡಬೇಕು. ಸಂಸ್ಕಾರವುಳ್ಳ ಕುಟುಂಬವನ್ನು ರೂಪಿಸುವುದು ಹೇಗೆ ಎಂಬುದನ್ನು ಅಪ್ಪಾಜಿ ಮತ್ತು ಅಮ್ಮ ನಮಗೆ ತೋರಿಸಿಕೊಟ್ಟಿದ್ದಾರೆ.

**SHRIDEVI EDUCATION — ಶ್ರೀದೇವಿ ಕುಟುಂಬ**

ಬಂದಾಗ ನನಗೆ ಸಂದರ್ಶನ ತೆಗೆದುಕೊಂಡ ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು "ನಮ್ಮ ಸಂಸ್ಥೆಯ ಉದ್ದೇಶವೇ ಸೇವೆ. ಶಿಕ್ಷಣ ಮತ್ತು ಆರೋಗ್ಯ ಎರಡೂ ನನ್ನ ದೃಷ್ಟಿಯಲ್ಲಿ ಸೇವಾಕ್ಷೇತ್ರಗಳು. ಈ ಉದ್ದೇಶ ಸಾಧನೆಗೆ ಸಂಪನ್ಮೂಲವು ಅಗತ್ಯ, ಅದನ್ನು ಹೊಂದಿಸಿಕೊಂಡು ಕೆಲಸ ಮಾಡಬೇಕಾದರೆ, ನಿಮ್ಮಂತಹವರ ಸಹಾಯ ಅಗತ್ಯ" ಎಂದರು. ಆ ತನಕ ನಾನು ಲಾಭ ಮಾಡುವುದೇ ಪ್ರಮುಖ ಧ್ಯೇಯ ಎನ್ನುವ ಕಾರ್ಪೊರೇಟ್ ವಲಯದಲ್ಲಿ ಕೆಲಸ ಮಾಡಿದ್ದೆ. ಈಗ ಬೇರೊಂದು ಗುರಿಯಿರುವ ಸಂಸ್ಥೆಯೊಡನೆ ಕೆಲಸ ಮಾಡಬೇಕಾಗಿತ್ತು. 'ಆಗಲಿ ಸಾರ್' ಎಂದೆ.

ಯಾವಾಗಲೂ ಸಂಸ್ಥೆಯ ಅಧ್ಯಕ್ಷರು ಹೇಳುತ್ತಿದ್ದ ಮಾತು. "ನಾವು ಕೋಟಿಗಟ್ಟಲೆ ಹಣವಿಟ್ಟುಕೊಂಡು ಈ ಕ್ಷೇತ್ರಕ್ಕೆ ಬಂದವರಲ್ಲ. ಆಶಾವಾದದೊಡನೆ ನಮ್ಮ ದುಡಿಮೆಯನ್ನು ನಂಬಿ ಬಂದಿರುವವರು. ಹೊಸ ಹೊಸ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಾಗ ಅಕೌಂಟ್ಸ್‌ನವರು ನಮಗೆ ಸರಿಯಾಗಿ ಮಾರ್ಗದರ್ಶನ ಮಾಡಬೇಕು. ನಮಗೆ ಉತ್ಸಾಹವಿರುತ್ತದೆ. ಮುಂದೆ ಬರುವ ಆರ್ಥಿಕ ಸಂಕಷ್ಟಗಳ ಪರಿಚಯವಿರುವುದಿಲ್ಲ. ಆರ್ಥಿಕ ಸಂಕಷ್ಟಗಳೇ ಹಾಗೇ. ಹೇಳಿ ಕೇಳಿ ಬರುವುದಿಲ್ಲ".

ಹೋರಾಟದ ನಡುವೆಯೇ ಇಂಜಿನಿಯರಿಂಗ್ ಕಾಲೇಜ್‌ಗೆ ಮೂಲಭೂತ ಸೌಕರ್ಯ ಕಲ್ಪಿಸಿದೆವು. ಎಂಟು ನೂರು ಹಾಸಿಗೆಯ ಆಸ್ಪತ್ರೆ ಸಿದ್ಧವಾಯಿತು.2012ರಲ್ಲಿ 7ಲಕ್ಷ ಪಾವತಿ ಮಾಡಿ ಮೆಡಿಕಲ್ ಕಾಲೇಜ್ ತೆರೆಯಲು ಅರ್ಜಿ ಹಾಕಬೇಕಾಗಿತ್ತು. 'ನಾನು ಬೇಡ' ಎಂದು ಸಲಹೆ ಕೊಟ್ಟೆ. ಅದಕ್ಕೆ ಕಾರಣ ಮೆಡಿಕಲ್ ಕಾಲೇಜಿಗೆ ಹೂಡಬೇಕಾದ ಬಂಡವಾಳ, ಅದನ್ನು ನಿರ್ವಹಣೆ ಮಾಡುವ ಸಂದರ್ಭದ ಕಷ್ಟ ನನ್ನ ಕಣ್ಣ ಮುಂದೆ ಬಂದಿತು. ಚೇರ್ಮನ್ ಅವರು ನನ್ನನ್ನು ಮನೆಗೆ ಕರೆಸಿಕೊಂಡು 'ಪ್ರಸಾದ್ ನಾವು ಈ ಸಾಹಸ ಮಾಡೋಣ' ಎಂದರು. ನಾನು ಸುಮ್ಮನಾದೆ.

ಅವರ ಆತ್ಮವಿಶ್ವಾಸ ಮತ್ತು ಪ್ರಾಮಾಣಿಕತೆಯ ಮುಂದೆ ಯಾವ ಕಷ್ಟವೂ ದೊಡ್ಡದಲ್ಲ ಎನ್ನಿಸುತ್ತದೆ. ಅವರ ಎಲ್ಲ ಕೆಲಸದಲ್ಲೂ ಇಡೀ ಕುಟುಂಬ ಅವರ ಬೆಂಬಲಕ್ಕೆ ನಿಲ್ಲುತ್ತದೆ. ಅದೊಂದು ಸಮೂಹಶಕ್ತಿ. ಡಾ.ಹುಲಿನಾಯ್ಕರ್ ಸಾಹೇಬ್ರ ಯಶಸ್ಸಿನ ಗುಟ್ಟು ಅದೇ. ಎಲ್ಲರೂ ಅವರಿಗೆ ಸಕಾಲದಲ್ಲಿ ಸಹಾಯ ಮಾಡುತ್ತಾರೆ.

ಅಧ್ಯಕ್ಷರಾದ ಡಾ.ಹುಲಿನಾಯ್ಕರ್ ಅವರ ಬದುಕು ಇಂತಹ ಸವಾಲುಗಳಿಂದ ತುಂಬಿ ಹೋಗಿದೆ ಎನ್ನುವುದು ನನ್ನ ಅಭಿಪ್ರಾಯ. ಪರ್ವತಾರೋಹಿ ನಿರಂತರವಾಗಿ ಬೆಟ್ಟ ಹತ್ತುತ್ತಾ ಸಾಗುತ್ತಾನೆ. ಕೊನೆಗೊಂದು ದಿನ ಗುರಿ ಮುಟ್ಟುತ್ತಾನೆ. ಅವನಲ್ಲಿ ನಿರಾಶೆ ಎನ್ನುವುದು ಸುಳಿಯುವುದಿಲ್ಲ. ಪ್ರಯತ್ನಶೀಲ ಮನಸ್ಸಿಗೆ ನಿರುತ್ಸಾಹ ಎಲ್ಲಿರುತ್ತದೆ, ಇಂತಹ ಅಮೂಲ್ಯ ಬದುಕು ನಮ್ಮ ಸಂಸ್ಥೆಯ ಅಧ್ಯಕ್ಷರಾದ ಡಾ.ಹುಲಿನಾಯ್ಕರ್ ಅವರದು.

## ಮಧ್ಯಮವರ್ಗದ ಮಕ್ಕಳಿಗೆ ಸಹಾಯ ಮಾಡಲು ಒತ್ತು

**▪ ಪ್ರೊ.ಆನಂದಿ.ಕೆ.ಎ.**
**ಪ್ರಾಂಶುಪಾಲರು ಫಿಜಿಯೋಥೆರಪಿ**



ಸಂಸ್ಥೆಯ ಅಧ್ಯಕ್ಷರಾದ ಡಾ.ಹುಲಿನಾಯ್ಕರ್ ಅವರು ಯಶಸ್ವಿ ಸರ್ಜನ್. ಸರ್ಜನ್ ಆದವರಿಗೆ ಪೇಶೆಂಟ್ ಬೇಗ ಗುಣಮುಖರಾಗಲು ಫಿಜಿಯೋಥೆರಪಿ ಬಹಳ ಮುಖ್ಯ ಎನ್ನುವುದು ಗೊತ್ತಿರುತ್ತದೆ. ಅದಕ್ಕಾಗಿ 25 ವರ್ಷಗಳ ಹಿಂದೆಯೇ ಶ್ರೀದೇವಿ ಫಿಜಿಯೋಥೆರಪಿ ಕಾಲೇಜ್ ಪ್ರಾರಂಭವಾಗಿದೆ. ಸಾವಿರಾರು ವಿದ್ಯಾರ್ಥಿಗಳು ಇಲ್ಲಿಂದ ಪದವಿ ಪಡೆದು ಹೋಗಿದ್ದಾರೆ. ಅರೆ ವೈದ್ಯಕೀಯ

ಕೋರ್ಸ್‌ಗಳಲ್ಲಿ ಈಗ ಫಿಜಿಯೋಥೆರಪಿ ಅತ್ಯಂತ ಮುಖ್ಯ ಅಧ್ಯಯನ ವಿಷಯವಾಗಿದೆ. ವೈದ್ಯಶಾಸ್ತ್ರ ಹೇಗೆ ವಿವಿಧ ಬ್ರ್ಯಾಂಚ್‌ಗಳನ್ನು ಹೊಂದಿದೆಯೋ, ಅದೇ ರೀತಿ ಫಿಜಿಯೋ ಕೂಡ ಬೇರೆ ಕಾಯಿಲೆಗಳಿಗೆ ಅನುಗುಣವಾಗಿ ಪ್ರತ್ಯೇಕ ಅಧ್ಯಯನ ವಿಷಯವಾಗಿ ರೂಪುಗೊಂಡಿದೆ.

ಶ್ರೀದೇವಿ ಫಿಜಿಯೋಥೆರಪಿ ಕಾಲೇಜ್‌ನ್ನು ಕಟ್ಟುವಲ್ಲಿ ಡಾ.ವರದರಾಜು ಅವರು ಪ್ರಮುಖ ಪಾತ್ರ ವಹಿಸಿದ್ದರು. ಅವರು ನನಗೆ ಡಾ.ಹುಲಿನಾಯ್ಕರ್ ಅವರ ವ್ಯಕ್ತಿತ್ವದ ಉತ್ತಮ ಅಂಶಗಳನ್ನು ಹೇಳಿದ್ದರು. ನಾನು ಬಂದಾಗ ಸಂಸ್ಥೆಯಲ್ಲಿ ಎಲ್ಲ ಮೂಲಭೂತ ಸೌಕರ್ಯಗಳಿದ್ದವು. ಈ ಸಂಸ್ಥೆಯಲ್ಲಿ ಫಿಜಿಯೋದಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಪಿಹೆಚ್.ಡಿ. ಮಾಡಲು ಅವಕಾಶವಿದೆ.

ಡಾ.ಹುಲಿನಾಯ್ಕರ್ ಅವರು ನಮ್ಮ ವಿಭಾಗಕ್ಕೆ ನಿರಂತರವಾಗಿ ಭೇಟಿ ಕೊಡುತ್ತಿರುತ್ತಾರೆ. ಕೆಲವೊಮ್ಮೆ ಚಿಕಿತ್ಸೆ ಪಡೆಯುತ್ತಾರೆ. ಅದೇ ರೀತಿ ವಿಭಾಗಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಾರೆ. ನಮ್ಮಲ್ಲಿ ಫಿಜಿಯೋಥೆರಪಿ ವಿದ್ಯಾರ್ಥಿಗಳು ಉತ್ತಮ ಪ್ರಾಯೋಗಿಕ ತರಬೇತಿ ಪಡೆಯಲು ಸೌಲಭ್ಯವಿದೆ. 800 ಹಾಸುಗೆಯ ಆಸ್ಪತ್ರೆಯೇ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ಕೇಂದ್ರ. ಒಳ್ಳೆಯ ಗ್ರಂಥಾಲಯವಿದೆ.

ಡಾ.ಹುಲಿನಾಯ್ಕರ್ ಅವರು ನಿರಂತರವಾಗಿ ಫಿಜಿಯೋಥೆರಪಿ ವಿಭಾಗವನ್ನು ಉತ್ತಮಪಡಿಸಲು ಸಲಹೆ ನೀಡುತ್ತಾರೆ. ನಾವೇನಾದರೂ ಹೊಸ ವಿಷಯಗಳನ್ನು ಹೇಳಿದರೆ ಅದರ ಅನುಷ್ಠಾನಕ್ಕೆ ಬೇಕಾದ ಸಹಾಯವನ್ನು ಒದಗಿಸುತ್ತಾರೆ. ಫಿಜಿಯೋಥೆರಪಿ ಅಧ್ಯಯನಕ್ಕೆ ಬರುವ ಮಕ್ಕಳು ಹೆಚ್ಚಾಗಿ ಮಧ್ಯಮ ವರ್ಗದವರು. ಅವರಿಗೆ ಕಲಿಕೆಯ ಕಾಲದಲ್ಲಿ ಉತ್ತಮ ಶಿಕ್ಷಣ ಮತ್ತು ಪ್ರಾಯೋಗಿಕ ಅನುಭವ ಸಿಗಬೇಕು. ಅದು ದೊರೆಯುವಂತೆ ಮಾಡಿ ಎಂದು ನಮಗೆ ಹೇಳುತ್ತಿರುತ್ತಾರೆ.

## ಸ್ಪರ್ಧಾ ಜಗತ್ತಿಗೆ ಮಕ್ಕಳನ್ನು ಅಣಿ ಮಾಡುವುದು

■ **ಡಾ.ಎನ್.ಚಂದ್ರಶೇಖರ್**
**ಪ್ರಾಧ್ಯಾಪಕರು ಮತ್ತು ಡೀನ್**
**ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು**



ನಾನು ಶ್ರೀದೇವಿ ಇಂಜಿನಿಯರಿಂಗ್ ಪ್ರಾರಂಭವಾದ ವರ್ಷದಲ್ಲೇ ಸಂಸ್ಥೆಗೆ ಬಂದಿದ್ದೆ. ಆಗ ನಮಗೆ ಮೂರು ಅಧ್ಯಯನ ವಿಷಯಗಳಿದ್ದವು. ಈಗ ಏಳು ಅಧ್ಯಯನ ವಿಷಯಗಳಿವೆ. ಕಂಪ್ಯೂಟರ್ ಸೈನ್ಸ್ ಜೊತೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಡೇಟಾ ಸೈನ್ಸ್‌ನಂತಹ ಆಧುನಿಕ ವಿಷಯಗಳು ನಮ್ಮಲ್ಲಿವೆ. ಡಾ. ಹುಲಿನಾಯ್ಕರ್ ಅವರು ವೈದ್ಯರು, ಇಂಜಿನಿಯರಿಂಗ್ ವಿಷಯ ಗೊತ್ತಿಲ್ಲ ಎನ್ನುವ ಹಾಗಿಲ್ಲ. ಯಾವಾಗಲೂ ಸರಿಯಾದ ವ್ಯಕ್ತಿಯನ್ನು ಅವರು ಆಯ್ದು ಜವಾಬ್ದಾರಿ ಕೊಡುತ್ತಾರೆ. ನಮ್ಮ ಇಂಜಿನಿಯರಿಂಗ್ ಕಾಲೇಜಿನ ಗೌರ್ನಿಂಗ್ ಕೌನ್ಸಿಲ್‌ನ ಪ್ರಥಮ ಅಧ್ಯಕ್ಷರಾಗಿ ಶ್ರೀ ಸಿದ್ಧಗಂಗಾ ಇಂಜಿನಿಯರಿಂಗ್ ಕಾಲೇಜು ಕಟ್ಟಿ ಬೆಳೆಸಿದ ಪ್ರೊ. ಎಂ.ಚಿಕ್ಕಣ್ಣಯ್ಯಪ್ಪ ಅವರಿದ್ದರು. ಪ್ರೊ ಚೌಡಯ್ಯ, ಡಾ.ಪ್ರಹ್ಲಾದ್ ದೊಡ್ಡೇರಿ. ಡಾ.ತಾಂಡವೇಶ್ವರ್, ಪ್ರೊ.ಹಿರೇಗೌಡ, ಪ್ರೊ.ಸುಕುಮಾರನ್, ಪ್ರೊ. ವೆಂಕಟೇಶ್ ಹೀಗೆ ಎಲ್ಲಿ ಪ್ರತಿಭಾವಂತರಿದ್ದರೂ ಅವರನ್ನು ಕರೆತಂದು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜನ್ನು ಬೆಳೆಸಿದ್ದಾರೆ. ನಮಗೂ ಅವರು ಅದೇ ರೀತಿ ಪ್ರೋತ್ಸಾಹ ಕೊಟ್ಟಿದ್ದಾರೆ. ನಮ್ಮಲ್ಲಿ ಯಾರಾದರೂ ಪಿಹೆಚ್.ಡಿ. ಮಾಡಿದರೆ ಅದನ್ನು ಹರ್ಷದಿಂದ ಹಂಚಿಕೊಳ್ಳುತ್ತಾರೆ. ಅವರಿಗೆ ಬೆನ್ನು ತಟ್ಟಿ ಪ್ರೋತ್ಸಾಹ ನೀಡುತ್ತಾರೆ.

ಶ್ರೀದೇವಿ ತಾಂತ್ರಿಕ ಕಾಲೇಜಿಗೆ ಗ್ರಾಮೀಣ ಪ್ರದೇಶದ ಮಕ್ಕಳು ಹೆಚ್ಚಾಗಿ ಬರುತ್ತಾರೆ. ಈಶಾನ್ಯ ರಾಜ್ಯದ ಜೊತೆ ರಾಜಸ್ಥಾನ, ಉತ್ತರ ಪ್ರದೇಶ ಮತ್ತು ವಿದರ್ಭ ಪ್ರಾಂತ್ಯಗಳಿಂದ ಮಕ್ಕಳು ಬರುತ್ತಾರೆ. ಸಹಜವಾಗಿ ಅವರು ಶೈಕ್ಷಣಿಕವಾಗಿ ಹಿಂದುಳಿದಿರುತ್ತಾರೆ. ಅಧ್ಯಕ್ಷರಾದ ಡಾ. ಹುಲಿನಾಯ್ಕರ್ ಅವರು ಇಂತಹ ಮಕ್ಕಳಿಗೆ ಇಂಗ್ಲಿಷ್ ಸೇರಿದಂತೆ ಎಲ್ಲ ವಿಷಯಗಳಲ್ಲೂ ವಿಶೇಷ ಗಮನ ಕೊಡುವಂತೆ ನಮಗೆ ಹೇಳುತ್ತಾರೆ. ನೇಪಾಳ ಮೂಲದ ವಿದ್ಯಾರ್ಥಿಯೊಬ್ಬ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯಕ್ಕೆ ಎರಡನೆಯ ರ್‍ಯಾಂಕ್ ಬಂದ. ಪ್ರತಿವರ್ಷ ನಮ್ಮ ಸಂಸ್ಥೆಗೆ ರ್‍ಯಾಂಕ್ ಬರುತ್ತಿದೆ. ಕ್ಯಾಂಪಸ್ ಸೆಲೆಕ್ಷನ್‌ನಲ್ಲೂ ನಮ್ಮ ವಿದ್ಯಾರ್ಥಿಗಳು ಮುಂದಿದ್ದಾರೆ. ಇದಕ್ಕೆ ಕಾರಣ ನಮ್ಮ ಅಧ್ಯಕ್ಷರೇ. ಅವರು ಪ್ರತಿದಿನ ಇಂಜಿನಿಯರಿಂಗ್ ಕಾಲೇಜಿನ ಬೆಳವಣಿಗೆಯನ್ನು ಗಮನಿಸುತ್ತಿರುತ್ತಾರೆ. ಆಗಾಗ ಸಲಹೆ ಸೂಚನೆಗಳನ್ನು ಕೊಡುತ್ತಾರೆ. ಯಾವುದಾದರೂ ಸೌಲಭ್ಯ ಕೇಳಿದರೆ ತಕ್ಷಣ ಒದಗಿಸುತ್ತಾರೆ. ಕಾಲೇಜಿನಲ್ಲಿ ನಿರಂತರವಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸೆಮಿನಾರ್‌ಗಳು ಜರುಗುತ್ತವೆ. ಆಸ್ಟ್ರೇಲಿಯಾದ ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ಇಂಟರ್‌ನೆಟ್ ಕುರಿತು ಅಂತಾರಾಷ್ಟ್ರೀಯ ವಿಚಾರಗೋಷ್ಠಿ ನಡೆಯಿತು. ಅನೇಕ ಶಿಕ್ಷಣತಜ್ಞರು ಮತ್ತು ಕುಲಪತಿಗಳು ನಮ್ಮ ಸಂಸ್ಥೆಗೆ ಭೇಟಿ ನೀಡಿ ಮಾರ್ಗದರ್ಶನ ನೀಡುತ್ತಾರೆ.

ನಮ್ಮಲ್ಲಿ ಸ್ಟಾರ್ಟ್‌ಅಪ್ ಮಾಡಲು ಅಧ್ಯಕ್ಷರು ಪ್ರೇರಣೆ ನೀಡಿದ್ದಾರೆ. ಇದೀಗ ದೊಡ್ಡ ಪ್ರಮಾಣದಲ್ಲಿ Skill lab ಪ್ರಾರಂಭವಾಗಿದೆ. ಅದರ ಕನಸು ಸಹ ಅಧ್ಯಕ್ಷರದೇ. ನಿರಂತರವಾಗಿ ತಾಂತ್ರಿಕ ಶಿಕ್ಷಣವನ್ನು ಪಡೆಯುತ್ತಿರುವ ಮಕ್ಕಳನ್ನು ಸ್ಪರ್ಧಾ ಜಗತ್ತಿಗೆ ಅಣಿಗೊಳಿಸುವುದು ಅವರ ಉದ್ದೇಶವಾಗಿದೆ.

## ನರ್ಸಿಂಗ್ ಕಾಲೇಜು ಸಂಸ್ಥೆಯ ಮೊದಲ ಕುಸುಮ

■ **ಪ್ರೊ.ಕೆ.ಆರ್.ಮುನಿಸ್ವಾಮಿ**
**ಪ್ರಾಂಶುಪಾಲರು, ಶ್ರೀದೇವಿ ನರ್ಸಿಂಗ್ ಕಾಲೇಜು**



ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ನೆಟ್ಟ ಮೊದಲ ಬೀಜವೇ ನರ್ಸಿಂಗ್ ಶಿಕ್ಷಣ ಸಂಸ್ಥೆ. ಡಾ. ಹುಲಿನಾಯ್ಕರ್ ಅವರು ಯಶಸ್ವಿ ವೈದ್ಯರು. ವೈದ್ಯಕೀಯ ಲೋಕದಲ್ಲಿ ನರ್ಸಿಂಗ್ ಕೋರ್ಸ್‌ಗಿರುವ ಮಹತ್ವ ಅವರಿಗೆ ಮೊದಲಿನಿಂದಲೂ ಗೊತ್ತಿತ್ತು. ನರ್ಸಿಂಗ್ ಕೋರ್ಸ್‌ನಿಂದ ಸ್ತ್ರೀಯರ ಸಬಲೀಕರಣ ನಡೆಯುತ್ತದೆ. ಉದ್ಯೋಗದ ದೃಷ್ಟಿಯಿಂದ ನರ್ಸಿಂಗ್ ಕೋರ್ಸ್‌ಗೆ ಪ್ರಥಮ ಸ್ಥಾನವಿದೆ. ನಿಷ್ಠೆಯಿಂದ ನರ್ಸಿಂಗ್ ಕೋರ್ಸ್‌ನಲ್ಲಿರುವವರು ಅಧ್ಯಯನ ಮಾಡಿ ಕೌಶಲ್ಯಗಳನ್ನು ಕರಗತ ಮಾಡಿಕೊಂಡರೆ ಅವರಿಗೆ ನಿರುದ್ಯೋಗವಿರುವುದಿಲ್ಲ.

ಶ್ರೀದೇವಿ ನರ್ಸಿಂಗ್ ಕಾಲೇಜು ಬೆಳೆಯಲು ಡಾ.ಹುಲಿನಾಯ್ಕರ್ ಕಾರಣಕರ್ತರಾಗಿದ್ದಾರೆ. ಇಲ್ಲಿನ ಮಕ್ಕಳು ಆರ್ಥಿಕವಾಗಿ ಸಬಲರಲ್ಲ ಎನ್ನುವ ಕಾರಣದಿಂದ ವಿದ್ಯಾರ್ಥಿ ವೇತನ ಕೊಡುವ ನಿರ್ಧಾರವನ್ನು ಮಾಡಿದ್ದಾರೆ. ಇನ್ನು ಅಕಾಡೆಮಿಕ್ ವಿಚಾರದಲ್ಲಿ ಅಧ್ಯಕ್ಷರು ನಿರಂತರವಾಗಿ ನಮ್ಮತ್ತ ನೋಡುತ್ತಿರುತ್ತಾರೆ. ಫಲಿತಾಂಶದಲ್ಲಿ ಏರುಪೇರು ಆದರೂ ಕಾಳಜಿ ವಹಿಸುತ್ತಾರೆ. ಕೃಷಿಕ ಕುಟುಂಬದ ಮಕ್ಕಳು ನರ್ಸಿಂಗ್ ಶಿಕ್ಷಣಕ್ಕೆ ಬರುತ್ತಾರೆ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು ನಮ್ಮ ಕರ್ತವ್ಯವೆಂದು ಅವರು ಜ್ಞಾಪಿಸುತ್ತಿರುತ್ತಾರೆ. ನರ್ಸಿಂಗ್ ಕಾಲೇಜಿನಲ್ಲಿ ಅನೇಕ ವಿಷಯಗಳನ್ನು ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರೇ ಬೋಧಿಸುತ್ತಾರೆ. ಇನ್ನು ಎಂಟುನೂರು ಹಾಸುಗೆಯ ಆಸ್ಪತ್ರೆ ನರ್ಸಿಂಗ್ ವಿದ್ಯಾರ್ಥಿಗಳಿಗೆ ವರದಾನ.

ನಮ್ಮ ಕಾಲೇಜಿನ ನರ್ಸಿಂಗ್ ವಿದ್ಯಾರ್ಥಿಗಳು ದೇಶದ ಎಲ್ಲಾ ಭಾಗದಲ್ಲೂ ಇದ್ದಾರೆ. ಕೆಲವರು ವಿದೇಶಗಳಿಗೂ ಹೋಗಿದ್ದಾರೆ. ಅವರೇ ನಮ್ಮ ರಾಯಭಾರಿಗಳಾಗಿ ಹೊಸ ವಿದ್ಯಾರ್ಥಿಗಳು ನಮ್ಮ ಸಂಸ್ಥೆಗೆ ಬರುವಂತೆ ಮಾಡುತ್ತಿದ್ದಾರೆ. ಡಾ.ಹುಲಿನಾಯ್ಕರ್ ಅವರ ದೂರದೃಷ್ಟಿ ಮತ್ತು ಸಂಘಟನಾ ಸಾಮರ್ಥ್ಯವನ್ನು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯಲ್ಲಿರುವ ಮೂರು ನರ್ಸಿಂಗ್ ಕಾಲೇಜುಗಳು ಬಿಳಿಸಿಕೊಂಡಿವೆ. ಇಲ್ಲಿ ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಕೊನೆಗೆ ಪಿಹೆಚ್.ಡಿ. ಮಾಡಲು ಅವಕಾಶವಿದೆ. ತುಮಕೂರಿನ ಶೈಕ್ಷಣಿಕ ಕ್ಷೇತ್ರಕ್ಕೆ ಇದೊಂದು ಬಹು ದೊಡ್ಡ ಕೊಡುಗೆ.

**ಶ್ರೀದೇವಿ ಕುಟುಂಬ**

## ಬಡವರ ವಿಚಾರದಲ್ಲಿ ವಿಶೇಷ ಕಾಳಜಿ

■ **ಶ್ರೀಕಾಂತ್ ಹೆಚ್.ಎಸ್.**
**ಪ್ರಾಂಶುಪಾಲರು, ಐಟಿಐ**



ಶ್ರೀದೇವಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಎಂಟು ಅಧ್ಯಯನ ವಿಷಯಗಳಿವೆ. ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಮೆಕ್ಯಾನಿಕಲ್, ಫಿಟ್ಟರ್, ಸರ್ವೇಯರ್, ಟರ್ನರ್ ಫಿಜಿಯೋಥೆರಪಿ ಮತ್ತು ಕಂಪ್ಯೂಟರ್ ಪ್ರೋಗ್ರಾಂ ಟೆಕ್ನೀಷಿಯನ್ – ಇವುಗಳಿಗೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಮಕ್ಕಳು ಬರುತ್ತಾರೆ.

ತುಮಕೂರಿನಲ್ಲಿ ನಮ್ಮ ಸಂಸ್ಥೆಯಷ್ಟು ಆಧುನಿಕ ಉಪಕರಣಗಳಿರುವ ಮತ್ತೊಂದು ಐ.ಟಿ.ಐ. ಸಂಸ್ಥೆಯಿಲ್ಲ. ಕೈಗಾರಿಕಾ ಕ್ಷೇತ್ರಕ್ಕೆ ಯಾವುದೇ ಹೊಸ ಯಂತ್ರ ಬಂದರೆ ಅದರ ಮಾಡೆಲ್ ನಮ್ಮ ವಿದ್ಯಾರ್ಥಿಗಳಿಗೆ ತಕ್ಷಣ ದೊರಕಿ ಬಿಡುತ್ತದೆ. ಇದಕ್ಕೆ ಕಾರಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ನಿರಂತರವಾಗಿ ನಮ್ಮ ಬೆಳವಣಿಗೆಯನ್ನು ಗಮನಿಸುತ್ತಿರುತ್ತಾರೆ. ವಸಂತಪುರ ಕೈಗಾರಿಕಾ ಬಡಾವಣೆ ನಮ್ಮ ಕಾಲೇಜಿಗೆ ತೀರಾ ಹತ್ತಿರವಿದೆ, ಅಲ್ಲಿನ ಕೈಗಾರಿಕೆಗಳ ಹಿರಿಯ ಅಧಿಕಾರಿಗಳು ನಮ್ಮ ಸಂಪರ್ಕದಲ್ಲಿದ್ದಾರೆ. ಪ್ರಾಯೋಗಿಕ ತರಬೇತಿಗೆ ಅಲ್ಲಿಗೆ ವಿದ್ಯಾರ್ಥಿಗಳನ್ನು ಕಳುಹಿಸುತ್ತೇವೆ. ಬಹುಮಟ್ಟಿನ ಹುಡುಗರು ಅಲ್ಲೇ ಕಾಯಂ ಆಗಿ ಕೆಲಸ ಪಡೆಯುತ್ತಾರೆ.

ಡಾ.ಹುಲಿನಾಯ್ಕರ್ ನಾವು ಸಿಕ್ಕಾಗೆಲ್ಲಾ "ನಿಮ್ಮಲ್ಲಿಗೆ ಬರುವ ಮಕ್ಕಳು ಬೀಡಿ ಕಟ್ಟುವವರ, ಆಟೋ ಓಡಿಸುವ ಇಲ್ಲವೇ ಕೂಲಿ ಮಾಡುವವರ ಮಕ್ಕಳು– ಅವರಿಗೆ ಉದ್ಯೋಗ ದೊರೆತರೆ ಇಡೀ ಕುಟುಂಬಕ್ಕೆ ಆರ್ಥಿಕ ಚೈತನ್ಯ ದೊರೆಯುತ್ತದೆ. ಅದಕ್ಕಾಗಿ ಎಲ್ಲ ಮಕ್ಕಳನ್ನೂ ವಿಶೇಷ ಆಸಕ್ತಿಯಿಂದ ತರಬೇತಿಗೊಳಿಸಿ" ಎಂದು ಹೇಳುತ್ತಿರುತ್ತಾರೆ. ಅವರಿಗೆ ಐ.ಟಿ.ಐ. ಮಕ್ಕಳನ್ನು ಕಂಡರೆ ವಿಶೇಷವಾದ ಒಲವು. ಈ ಮಕ್ಕಳು ಅವಕಾಶದಿಂದ ವಂಚಿತರಾಗದೆ ಉದ್ಯೋಗ ದೊರಕಿಸಿಕೊಂಡರೆ, ಅವರು ಮತ್ತಷ್ಟು ಬೆಳೆಯಬಹುದು ಎಂಬ ದೂರದೃಷ್ಟಿಯನ್ನು ಸಂಸ್ಥೆಯ ಅಧ್ಯಕ್ಷರಾದ ಡಾ.ಹುಲಿನಾಯ್ಕರ್ ಅವರು ಹೊಂದಿದ್ದಾರೆ. ಇದರಿಂದಲೇ ಬಡವರ ವಿಚಾರದಲ್ಲಿ ಅವರಿಗಿರುವ ಕಾಳಜಿ ಅರ್ಥವಾಗುತ್ತದೆ.

## ಸಾಮಾನ್ಯ ಶಿಕ್ಷಣದ ವಿದ್ಯಾರ್ಥಿಗಳ ಬಾಳಿಗೆ ಬೆಳಕು ನೀಡುವ ಸಂಕಲ್ಪ

■ **ಪ್ರೊ.ಎಲ್.ಮುಬಾರಕ್**
**ಪ್ರಿನ್ಸಿಪಾಲ್, ಶ್ರೀದೇವಿ ಡಿಗ್ರಿ ಕಾಲೇಜು**



ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಶಿಕ್ಷಣಕ್ಕೆ ಆದ್ಯತೆಯಿದೆ. ಬಿ.ಸಿ.ಎ., ಬಿ.ಕಾಂ., ಎಂ.ಕಾಂ., ಎಂ.ಬಿ.ಎ. ಕೋರ್ಸ್‌ಗಳಿವೆ. ಎಂ.ಬಿ.ಎ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ. ಪದವಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವವರು, ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ. ಅವರ ವಿಚಾರದಲ್ಲಿ ವಿಶೇಷವಾದ ಗಮನ ಕೊಡಬೇಕಾಗುತ್ತದೆ ಎಂದು ನಮ್ಮ ಚೇರ್ಮನ್ ಸಾಹೇಬ್ರು ಹೇಳುತ್ತಿರುತ್ತಾರೆ. ಇಲ್ಲಿ ವ್ಯಾಸಂಗ ಮಾಡುವ ಮಕ್ಕಳ ವ್ಯಾಸಂಗಕ್ಕೆ ಆಸಕ್ತಿ ವಹಿಸಬೇಕು ಎಂಬುದು ಅವರ ಅಭಿಪ್ರಾಯ.

ಪ್ರತಿವರ್ಷ ಉದ್ಯೋಗ ಮೇಳ ನಡೆಯಲೇ ಬೇಕು ಎಂಬುದು ಡಾ.ಹುಲಿನಾಯ್ಕರ್ ಅವರ ಖಡಕ್ ಸೂಚನೆ. ಈ ಮಕ್ಕಳು 'ಕೌಶಲ್ಯ'ವನ್ನು ಕರಗತ ಮಾಡಿಕೊಂಡರೆ ಅವರು ಜೀವನದಲ್ಲಿ ಉತ್ತಮವಾದ ಸಾಧನೆ ಮಾಡಬಹುದು ಎಂದವರು ಭಾವಿಸುತ್ತಾರೆ. ಪಠ್ಯಪುಸ್ತಕಗಳ ಬೋಧನೆಗಿಂತ ಪ್ರಾಯೋಗಿಕ ತರಬೇತಿಗೆ ಹೆಚ್ಚಿನ ಮಹತ್ವ ಕೊಡಬೇಕು ಎನ್ನುವ ಆಶಯವನ್ನು ಅವರು ಹೊಂದಿರುತ್ತಾರೆ. ಅವರ ನಿರ್ದೇಶನದಿಂದಾಗಿ ಪ್ರತಿವರ್ಷ ಉದ್ಯೋಗ ಮೇಳಗಳು ನಡೆಯುತ್ತಿವೆ. ಈ ವರ್ಷ 144 ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲಿ ಆಯ್ಕೆಯಾಗಿದ್ದಾರೆ. ಪ್ರತಿವರ್ಷ ಮಕ್ಕಳು ಉದ್ಯೋಗ ಪಡೆಯುತ್ತಿದ್ದ ಸಂದರ್ಭದಲ್ಲಿ ಚೇರ್ಮನ್ ಸಾಹೇಬ್ರು ಅನುಭವಿಸುವ ಸಂತೋಷ ಹೇಳತೀರದು.



## ಭಾರತ ವೈದ್ಯಕೀಯ ಸಂಶೋಧನೆಗೆ ಅತ್ಯಂತ ಸೂಕ್ತ ಸ್ಥಳ

■ **ಡಾ.ಎಸ್.ಜೆ.ಶಂಕರ್**
**ಪ್ರಿನ್ಸಿಪಾಲರು, ಶ್ರೀದೇವಿ ಫಾರ್ಮಸಿ ಕಾಲೇಜು**

ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ನಮ್ಮ ವಿಭಾಗದ ಸಿಬ್ಬಂದಿ ಜೊತೆ ಮಾತನಾಡುತ್ತಾ "ನೀವು ಫಾರ್ಮಸಿ ಕ್ಷೇತ್ರದಲ್ಲಿ ಯಾವುದೇ ಸಂಶೋಧನೆ ಕೈಗೊಳ್ಳಲು ಭಾರತದಂತಹ ರಾಷ್ಟ್ರ ಮತ್ತೆಲ್ಲೂ ಸಿಗುವುದಿಲ್ಲ. ಅಮೆರಿಕಾದಲ್ಲಿ ಯಾವುದಾದರೂ ಹೊಸ ಔಷಧವನ್ನು ಮಾರುಕಟ್ಟೆಗೆ ಬಿಡಬೇಕಾದರೆ ಆ ಕಂಪನಿಯ ಕಷ್ಟ ಯಾರಿಗೂ ಬೇಡ. ಅವರು ಆಫ್ರಿಕಾ ರಾಷ್ಟ್ರಗಳನ್ನು ತಮ್ಮ ಪ್ರಯೋಗಕ್ಕೆ ಆಯ್ಕೆ ಮಾಡಿಕೊಳ್ಳುತ್ತಾರೆ. ನಮ್ಮಲ್ಲಿ ಪ್ರತಿದಿನ ಔಷಧ ಕಂಪನಿಗಳ ಪ್ರತಿನಿಧಿಗಳು ವೈದ್ಯ ಹತ್ತಿರ ಬರುತ್ತಿರುತ್ತಾರೆ. ನೀವು ಪಾಠ ಪ್ರವಚನದ ಜೊತೆ ಸಂಶೋಧನೆಗೆ ಹೆಚ್ಚಿನ ಆದ್ಯತೆ ಕೊಡಬೇಕು" ಎನ್ನುತ್ತಾರೆ.

ಇಂತಹ ಪ್ರೋತ್ಸಾಹದ ಮಾತುಗಳಿಂದ ನಮ್ಮಲ್ಲಿ ಹೊಸ ಔಷಧದ ವಿಚಾರದಲ್ಲಿ ಸಂಶೋಧನೆ ನಡೆಯುತ್ತಿದೆ. ಈಗ ಕ್ಯಾನ್ಸರ್ ಕಾಣಿಸಿಕೊಂಡಾಗ ನಾವು ಕೊಡುವ ಔಷಧ ದೇಹದ ಎಲ್ಲ ಭಾಗಗಳಿಗೂ ಹೋಗುತ್ತದೆ. ಇದರಿಂದ ಕ್ಯಾನ್ಸರ್ ಕಾಯಿಲೆ ಗುಣವಾದರೂ ಅದರಿಂದ ಅಡ್ಡ ಪರಿಣಾಮಗಳಾಗುತ್ತವೆ. ಕ್ಯಾನ್ಸರ್ ಔಷಧ ನೇರವಾಗಿ ಕ್ಯಾನ್ಸರ್ ಭಾಗಕ್ಕೆ ತಲುಪಿಸುವ ದಿಸೆಯಲ್ಲಿ ನಮ್ಮಲ್ಲಿ ಸಂಶೋಧನೆ ನಡೆಯುತ್ತಿದೆ.

ಅರೆ ವೈದ್ಯಕೀಯ ಕೋರ್ಸ್‌ಗಳಲ್ಲಿ ಸಂಶೋಧನೆಗೆ ಅವಕಾಶವಿದೆ ಎಂದು ಭಾವಿಸಿ ಪ್ರೋತ್ಸಾಹ ನೀಡುವ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರ ಉದಾರತೆಗೆ ಎಷ್ಟು ಧನ್ಯವಾದ ಹೇಳಿದರು ಸಾಲದು. ಎಲ್ಲರನ್ನು ಕಾಯಕಕ್ಕೆ ತೊಡಗಿಸುವ ಗುಣ ಅವರದು.

## ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಮಕ್ಕಳು ಅದೃಷ್ಟವಂತರು

■ **ಡಾ.ಲೋಕೇಶ್.ಟಿ.ಎಸ್.**
**ಪ್ರಿನ್ಸಿಪಾಲರು, ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜು**



ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಒಟ್ಟು ಆರು ಕೋರ್ಸ್‌ಗಳಿವೆ. ಸಿವಿಲ್, ಮೆಕ್ಯಾನಿಕಲ್ ಹೊರತುಪಡಿಸಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಮತ್ತು ಮೆಕಾಟ್ರಾನಿಕ್ಸ್ ಕೋರ್ಸ್‌ಗಳು ಹೆಚ್ಚಿನ ಮಾನ್ಯತೆ ಪಡೆದಿವೆ. ಡಾ.ಹುಲಿನಾಯ್ಕರ್ ಅವರಿಗೆ ಪಾಲಿಟೆಕ್ನಿಕ್ ಕೋರ್ಸ್‌ಗಳಲ್ಲಿ ತುಂಬ ಆಸಕ್ತಿ. ಕಾರಣ ಎಂಜಿನಿಯರಿಂಗ್ ಅಭ್ಯಾಸ ಮಾಡಲು ಸಾಧ್ಯವಾಗದ ಮಕ್ಕಳು ಪಾಲಿಟೆಕ್ನಿಕ್ ಕೋರ್ಸ್‌ಗಳಿಗೆ ಬರುತ್ತಾರೆ. ಅದರಲ್ಲೂ ಗ್ರಾಮೀಣ ಪ್ರದೇಶದ ಮಕ್ಕಳು ಇಲ್ಲಿಗೆ ಬರುತ್ತಾರೆ. ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜು 30 ಕೈಗಾರಿಕಾ ಸಂಸ್ಥೆಗಳೊಡನೆ ಒಪ್ಪಂದ ಮಾಡಿಕೊಂಡಿದೆ. ಅದರಲ್ಲಿ ಬಿಡದಿ ಬಳಿಯಿರುವ ಟಯೋಟಾ ಕಂಪನಿ ನಮ್ಮ ಪಾಲಿಟೆಕ್ನಿಕ್ ಕಾಲೇಜಿನಿಂದ 50 ವಿದ್ಯಾರ್ಥಿಗಳನ್ನು ಇಂಟರ್ನ್‌ಷಿಪ್‌ಗೆ ಆಯ್ಕೆ ಮಾಡಿಕೊಳ್ಳುತ್ತದೆ. ಅವರಿಗೆ ಮಾಸಿಕ 13 ಸಾವಿರ ಸ್ಟೈಫಂಡ್ ನೀಡಿ ತರಬೇತಿಯ ನಂತರ ಬಹುತೇಕರನ್ನು ತಮ್ಮಲ್ಲಿ ಉದ್ಯೋಗಕ್ಕೆ ನೇಮಿಸಿಕೊಳ್ಳುತ್ತದೆ.

ಒಂದು ವರ್ಷ ಯಾವುದಾದರೂ ಕಂಪನಿ ನಮ್ಮಲ್ಲಿ ಇಂಟರ್‌ವ್ಯೂಗೆ ಬರದಿದ್ದರೆ ಚೇರ್ಮನ್ ಅವರು ತಾವೇ ಕಾಳಜಿ ವಹಿಸಿ ಅವರು ಬರುವಂತೆ ಮಾಡುತ್ತಾರೆ. ಒಬ್ಬ ವಿದ್ಯಾರ್ಥಿಗೆ ಕೆಲಸ ಸಿಕ್ಕಿದರೂ ತಮ್ಮ ಕುಟುಂಬಕ್ಕೆ ಕೆಲಸ ಸಿಕ್ಕಿತು ಎನ್ನುವವರು ನಮ್ಮ ಅಧ್ಯಕ್ಷರು. ಹೊಸ ಉದ್ಯಮಿಗಳಿಗೆ ನಿರಂತರವಾಗಿ ನಮ್ಮ ಸಂಸ್ಥೆಯ ವಿಚಾರದಲ್ಲಿ ಮಾಹಿತಿ ನೀಡಿ ಅವರುಗಳು ಭೇಟಿ ಕೊಡುವಂತೆ ಮಾಡಿ ಎಂದು ನಮಗೆ ಸಲಹೆ ನೀಡುತ್ತಾರೆ.

ಎರಡು ವರ್ಷದ ಹಿಂದೆ ನಮ್ಮ ಪಾಲಿಟೆಕ್ನಿಕ್‌ಗೆ ಎರಡು ಸಂಖ್ಯೆಯಷ್ಟು ಹುಡುಗರು ಪ್ರವೇಶವನ್ನು ಬಯಸಿ ಬರುತ್ತಿದ್ದರು. ಇಂದು 840ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ನಮ್ಮಲ್ಲಿರುವ ಲ್ಯಾಬ್. ಪಾಲಿಟೆಕ್ನಿಕ್ ಕಾಲೇಜಿನ ಪ್ರಯೋಗಾಲಯದಿಂದ ವಿದ್ಯಾರ್ಥಿಗಳಿಗೆ ಹೊಸ ಉದ್ಯಮದಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿರುವ ಕಾರಣ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ನಮ್ಮ ಪ್ರಯೋಗಾಲಯವನ್ನು ಅಪ್‌ಡೇಟ್ ಮಾಡಲು ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರ ಪ್ರೋತ್ಸಾಹ ಕಾರಣವಾಗಿದೆ. ನಾವು ಕೇಳುವ ಎಲ್ಲಾ ಸೌಲಭ್ಯಗಳನ್ನು ಅವರು ಒದಗಿಸಿ ಕೊಟ್ಟಿದ್ದಾರೆ. ಇಂತಹ ಅದೃಷ್ಟ ಎಷ್ಟು ಜನ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ದೊರೆಯುತ್ತದೆ. ನಮ್ಮ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಮಕ್ಕಳು ಅದೃಷ್ಟವಂತರು. ಅಂತಹ ಅದೃಷ್ಟ ಇಲ್ಲಿ ಕೆಲಸ ಮಾಡುವ ಬೋಧಕ ಸಿಬ್ಬಂದಿಗೂ ದೊರಕಿದೆ.

## ಅಚ್ಚರಿ ಎನಿಸುವಂತಹ ಸ್ಥಿತಪ್ರಜ್ಞೆ

■ **ರೂಪ ನಟೇಶ್‌ವರ್ಣೆ**
**ಅಧೀಕ್ಷಕರು, ಶ್ರೀದೇವಿ ಸಂಸ್ಥೆ**



ಶ್ರೀದೇವಿ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಸೇರ್ಪಡೆಯಾಗಿ 30 ವರ್ಷ ಕಳೆದಿದೆ ಎನ್ನುವುದನ್ನು ನೆನೆದರೆ ನಂಬಲಿಕ್ಕೆ ಸಾಧ್ಯವಿಲ್ಲ. ನಿನ್ನೆ- ಮೊನ್ನೆ ಸೇರಿದಂತೆ ಭಾಸವಾಗುತ್ತಿದೆ. ನಡೆಯುತ್ತಾ ದಾರಿ ಸವೆಯುತ್ತಾ ಹೋದಂತೆ ಖಂಡಿತ ತಲುಪಬೇಕಾದ ಸ್ಥಳ ತಲುಪುತ್ತೇವೆ. ನಡಿಗೆಯಲ್ಲಿ ಏರುಪೇರಾದರೆ ಸೇರುವ ಸ್ಥಳದ ಕಾಲದಲ್ಲಿ ವ್ಯತ್ಯಾಸವಾಗಬಹುದು, ಅಷ್ಟೇ.

ಪೂಜ್ಯ ಡಾ.ಹುಲಿನಾಯ್ಕರ್ ಮತ್ತು ಪೂಜ್ಯ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರು ನಮಗೆ ಕೇವಲ ಕೆಲಸ ಕೊಟ್ಟಿಲ್ಲ. ಕುಟುಂಬವನ್ನೇ ಕೊಟ್ಟಿದ್ದಾರೆ. ಇಂದು ನಾವು ನೆಮ್ಮದಿಯಲ್ಲಿದ್ದೇವೆ ಎಂದರೆ ಅದಕ್ಕೆ ಮುಖ್ಯ ಕಾರಣ ಡಾ.ಹುಲಿನಾಯ್ಕರ್ ಅವರು. ಶ್ರೀದೇವಿ ಸಂಸ್ಥೆಯೇ ನನ್ನ ಕುಟುಂಬ. ಇಲ್ಲಿ ನಾನು ಕೆಲಸ ಮಾಡುತ್ತಿರುವಾಗ ಯಾವುದೋ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂಬ ಭಾವನೆ ನನ್ನಲ್ಲಿ ಎಂದೂ ಬಂದಿಲ್ಲ. ನಮ್ಮ ಮನೆಯ ಕೆಲಸ ಎನ್ನುವ ಭಾವನೆಯಿದೆ. ಅದಕ್ಕಾಗಿ ಸಂಸ್ಥೆಗೆ ಕಷ್ಟ ಬಂದಾಗ ನನಗೆ ತಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಸಂಸ್ಥೆಯೊಡನೆ ಇಂತಹ ಬಾಂಧವ್ಯ ಬೆಳೆಯಲು ಡಾಕ್ಟರ್ ವ್ಯಕ್ತಿತ್ವ ಕಾರಣ.

1987-88ರಲ್ಲಿ ನಾನು ಶ್ರೀದೇವಿ ನರ್ಸಿಂಗ್ ಹೋಂಗೆ ಬಂದಾಗ ನಾನು ಮತ್ತು ಅಪ್ಪಾಜಿ ಇಬ್ಬರೇ ಇದ್ದೆವು. ಶ್ರೀ ಮರಿಸ್ವಾಮಿ ಪಾರ್ಟ್‌ಟೈಂ ಬರುತ್ತಿದ್ದರು. ಆಗೆಲ್ಲಾ ನಾವೇ ಅಕೌಂಟ್ಸ್ ನೋಡುತ್ತಿದ್ದೆವು. ಪ್ರತಿದಿನ ಬ್ಯಾಂಕ್‌ಗೆ ಹಣ ಹಾಕುವುದು, ಸಾಹೇಬ್ರು ಹೇಳಿದವರಿಗೆ ಹಣ ಪಾವತಿ ಮಾಡುವುದು, ನೌಕರರ ಸಂಬಳ, ಡಾಕ್ಟರ್‌ಗಳ ಗೌರವಧನ ಎಲ್ಲವನ್ನೂ ನಿರ್ವಹಣೆ ಮಾಡುತ್ತಿದ್ದೆವು. ಒಂದು ದಿನವೂ ಸಾಹೇಬ್ರು 'ಪಾಸ್ ಬುಕ್ ತನ್ನಿ' ಎಂದವರಲ್ಲ. ನಾವು ಹೇಳಿದ್ದನ್ನು ಕೇಳುತ್ತಿದ್ದರು. ಆದರೆ ಅವರಿಗೆ ಪ್ರತಿಯೊಂದು ವಿಚಾರವೂ ಗೊತ್ತಿರುತ್ತಿತ್ತು. 'ಜನರು ಬೇಕು' ಎಂದು ಯಾವುದನ್ನೂ ದೊಡ್ಡದು ಮಾಡುತ್ತಿರಲಿಲ್ಲ.

ಶ್ರೀದೇವಿ ಶಿಕ್ಷಣ ಸಂಸ್ಥೆ ಪ್ರಾರಂಭವಾದ ಮೇಲೆ ನಿಜವಾದ ಹೋರಾಟ ಪ್ರಾರಂಭವಾಯಿತು. ನಿಧಾನವಾಗಿ ಒಂದೊಂದೇ ಕಟ್ಟಡಗಳು ಮೇಲೇಳತೊಡಗಿದವು. 17 ಅರೆವೈದ್ಯಕೀಯ ಕೋರ್ಸ್‌ಗಳು, ಇಂಜಿನಿಯರಿಂಗ್ ಕಾಲೇಜು ಕೊನೆಗೆ ಶ್ರೀದೇವಿ ವೈದ್ಯಕೀಯ ಕಾಲೇಜು ಪ್ರಾರಂಭವಾಯಿತು.

ಬದುಕು ಸುಸೂತ್ರವಾಗಿ ನಡೆಯುತ್ತಿದ್ದರೆ ನಮಗೆ ದೇವರ ಮಹತ್ವ ಹೇಗೆ ಗೊತ್ತಾಗುತ್ತದೆ? 2015-16 ಹಾಗೂ 2019-20ರಲ್ಲಿ ಮೆಡಿಕಲ್ ಕಾಲೇಜಿನ ಪ್ರವೇಶಕ್ಕೆ ತೊಂದರೆಯಾದಾಗ ಕಷ್ಟಕ್ಕೆ ಸಿಲುಕಿದೆವು. ಎಂತಹ ಕಷ್ಟ ಎಂದರೆ ಹಿಂದೆ ಎಂದೂ ಇಂತಹ ಕಷ್ಟ ಬರಬಹುದು ಎಂಬುದನ್ನು ನಾವ್ಯಾರೂ ಊಹೆ ಕೂಡ ಮಾಡಿರಲಿಲ್ಲ. ಸಣ್ಣ ಮೊತ್ತವನ್ನು ಪಾವತಿ ಮಾಡಲೂ ಕಷ್ಟ ಪಡಬೇಕಾಗಿತ್ತು. ಎಲ್ಲರ ಮುಖದಲ್ಲೂ ದುಗುಡವಿತ್ತು.

ಪ್ರಾಯಶಃ ಡಾಕ್ಟರ್ ಅವರಲ್ಲೂ ಈ ಭಾವನೆಯಿರಬಹುದು. ಆಗವರು ತಮ್ಮ ನಿಜವಾದ ವ್ಯಕ್ತಿತ್ವವನ್ನು ನಮಗೆ ಪರಿಚಯ ಮಾಡಿಕೊಟ್ಟರು. ಯಾವುದೇ ದೊಡ್ಡ ಸಮಸ್ಯೆಯನ್ನು ತೆಗೆದುಕೊಂಡು ಅವರ ಬಳಿ ಹೋದರೂ, ಅವರ ನಗುಮುಖ ನೋಡಿಯೇ ನಮಗೆ ಸಮಾಧಾನವಾಗುತ್ತಿತ್ತು. ನಮ್ಮನ್ನೇ ಸಲಹೆ ಕೇಳುತ್ತಿದ್ದರು. ಆಗ ನಾವು ಯೋಚಿಸುತ್ತಿದ್ದೆವು. ಕೊನೆಗೆ ನಮಗೆ ಸಮ್ಮತವಾಗುವ ಪರಿಹಾರ ಸೂಚಿಸುತ್ತಿದ್ದರು. ಅವರು ಎಂದೂ ಸಿಬ್ಬಂದಿಯನ್ನು ಸಣ್ಣವರು, ದೊಡ್ಡವರು ಎಂದು ನೋಡಿಲ್ಲ. ಅವರ ದೃಷ್ಟಿಯಲ್ಲಿ ಎಲ್ಲರೂ ಶ್ರೀದೇವಿ ಶಿಕ್ಷಣ ಸಂಸ್ಥೆಯ ಕುಟುಂಬದ ಸದಸ್ಯರು ಎನ್ನುವ ಭಾವನೆಯಿದೆ. ಸಂಸ್ಥೆಯ ಬೆಳವಣಿಗೆಗೆ ಯಾರು ಸಹಾಯ ಮಾಡುತ್ತಾರೋ, ಅವರನ್ನೆಲ್ಲಾ ಗೌರವಿಸುವ ದೊಡ್ಡ ಗುಣ ಅವರಲ್ಲಿದೆ.

ಸಾಹೇಬ್ರಲ್ಲಿರುವ ಸ್ಥಿತಪ್ರಜ್ಞೆ ದೊಡ್ಡದು. ಅವರನ್ನು ಯಾವುದೇ ಸಂಕಷ್ಟಗಳೂ ವಿಚಲಿತರನ್ನಾಗಿ ಮಾಡುವುದಿಲ್ಲ. ನಮ್ಮ ಪ್ರಾಚೀನ ಋಷಿ, ಮುನಿಗಳ ತರಹ ಅವರು ಜೀವನವನ್ನು ನೋಡುತ್ತಾರೆ. ಅವರ ದೈವಭಕ್ತಿ ಇಂತಹ ಶಕ್ತಿಯನ್ನು ದಯಪಾಲಿಸಿರಬೇಕು. ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ತುಂಬಾ ದೊಡ್ಡ ಪ್ರಯತ್ನ ಮಾಡಿ ಶ್ರೀ ದುರ್ಗಾಂಬಿಕಾ ದೇವಿ ಮತ್ತು ಶ್ರೀ ಶಂಭುಲಿಂಗೇಶ್ವರ ಸ್ವಾಮಿಯನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ದೇವಿ ಕೃಪಾಶೀರ್ವಾದದಿಂದ ಸಂಕಷ್ಟದ ದಿನಗಳು ಕಳೆದು ನೆಮ್ಮದಿಯ ಉಸಿರು ಬಿಡುವ ಸನ್ನಿವೇಶ ನಿರ್ಮಾಣವಾಗುತ್ತಿದೆ. ಈ ಸಂದರ್ಭದಲ್ಲಿ ಪೂಜ್ಯ ಶಾಂತಾದುರ್ಗಾದೇವಿ ಅಮ್ಮನ ವಿಚಾರ ಹೇಳಬೇಕು. ಅವರು ಡಾಕ್ಟರ್ ಅವರಿಗೆ ತಾಯಿಯೇ ಆಗಿದ್ದಾರೆ. ಎಲ್ಲ ಸಂದರ್ಭದಲ್ಲೂ ಅವರ ಜೊತೆ ನಿಂತು ಪರಿಸ್ಥಿತಿಯನ್ನು ನಿಭಾಯಿಸಲು ಪ್ರೇರಣೆ ನೀಡಿದ್ದಾರೆ. ಅವರಿಬ್ಬರ ಸಂಕಲ್ಪಶಕ್ತಿ ಮತ್ತು ಶ್ರೀದುರ್ಗಾಂಬಿಕಾದೇವಿಯ ಶ್ರೀರಕ್ಷೆಯ ಕಾರಣ ನಮಗೆ ಯಾವುದೇ ಭಯವಿಲ್ಲ, ಆತಂಕವಿಲ್ಲ.

SHRIDEVI EDUCATION ಶ್ರೀದೇವಿ ಕುಟುಂಬ

## ಕೋವಿಡ್-19 ಕಾಲದ ಸೇವೆ

■ **ಹೆಚ್.ನರಸಪ್ಪ**
**ಶ್ರೀದೇವಿ ಆಸ್ಪತ್ರೆ, ನರ್ಸಿಂಗ್ ಉಪ ಅಧೀಕ್ಷಕರು**



ನಾನು 2002ರಲ್ಲಿ ಶ್ರೀದೇವಿ ನರ್ಸಿಂಗ್ ಕಾಲೇಜಿನಲ್ಲಿ ಬಿ.ಎಸ್‌ಸಿ. ನರ್ಸಿಂಗ್ ಡಿಗ್ರಿ ಮಾಡಿದೆ. 2016ರಲ್ಲಿ ಸ್ಟಾಫ್ ನರ್ಸ್ ಆಗಿ ಕೆಲಸಕ್ಕೆ ಸೇರಿದೆ. ಇದೀಗ ನರ್ಸಿಂಗ್ ಉಪ ಅಧೀಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ.

ವಿದ್ಯಾರ್ಥಿ ದೆಸೆಯಿಂದಲೂ ನಾನು ಚೇರ್ಮನ್ ಅವರ ನಡೆ, ನುಡಿಯನ್ನು ನೋಡುತ್ತಾ ಬಂದಿದ್ದೇನೆ. ನಮ್ಮ ಸಹಪಾಠಿಗಳು ಯಾರಾದರೂ ಕಾಲೇಜ್‌ಗೆ ಫೀಸ್ ಕಟ್ಟಲು ಸಾಧ್ಯವಾಗದಿದ್ದರೆ ನೇರವಾಗಿ ಅವರು ಅಧ್ಯಕ್ಷರನ್ನು ಕಂಡು ರಿಯಾಯಿತಿ ಪಡೆದ ಅಥವಾ ಸಮಯ ಪಡೆದ ಸಂಗತಿಗಳನ್ನು ನಾನು ನೋಡಿದ್ದೇನೆ. ಅವರು ಪ್ರತಿದಿನ ಸಂಜೆ ನಮ್ಮ ಕ್ಯಾಂಪಸ್‌ನಲ್ಲಿ ವಾಕ್ ಮಾಡುತ್ತಿದ್ದರು. ಆಗ ವಿದ್ಯಾರ್ಥಿಗಳು ಅವರ ಬಳಿ ಹೋಗಿ ತಮ್ಮ ಕಷ್ಟ ಸುಖ ಹೇಳಿಕೊಳ್ಳಬಹುದಾಗಿತ್ತು. ಅವರೇನೂ ವಿದ್ಯಾರ್ಥಿಯ ವಿವರಗಳನ್ನು ಬರೆದಿಟ್ಟುಕೊಳ್ಳುತ್ತಿರಲಿಲ್ಲ. ವಿದ್ಯಾರ್ಥಿಗಳು ತಮ್ಮ ಹೆಸರು, ತರಗತಿಗಳನ್ನು ಹೇಳಿದರೆ ಸಾಕು. ಮಾರನೆಯ ದಿನ ಆಫೀಸ್‌ನಲ್ಲಿ ಅಧ್ಯಕ್ಷರ ಆದೇಶ ರೆಡಿಯಾಗಿರುತ್ತಿತ್ತು. ನನ್ನ ಸಹಪಾಠಿ ಕೀರ್ತಿ ಎಂಬುವವರು. ಆ ಕಾಲದಲ್ಲಿ ಅಧ್ಯಕ್ಷರನ್ನು ಹೀಗೆ ಕಂಡು ಪ್ರಾರ್ಥನೆ ಸಲ್ಲಿಸಿದರು. ಅವರಿಗೆ 'ನೀನು ನಿಶ್ಚಿಂತೆಯಿಂದ ಪರೀಕ್ಷೆ ಬರಿ'

## ಜನಪರವಾಗಿ ಕೆಲಸ ಮಾಡುವ ಆಸೆ

■ **ವಿ.ಎಸ್.ಮರಿಸ್ವಾಮಿ**
**ನಿವೃತ್ತ ಮ್ಯಾನೇಜರ್, ವಿಜಯ ಬ್ಯಾಂಕ್**



1977ರಲ್ಲಿ ನವಲಗುಂದದಲ್ಲಿ ಖಾಸಗಿ ದವಾಖಾನೆ ಇಟ್ಟುಕೊಂಡಿದ್ದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ನನ್ನ ತಂಗಿ ದುರ್ಗಾದೇವಿ ಅವರನ್ನು ವಿವಾಹವಾಗಿದ್ದರು. ಅಲ್ಲಿಂದ ನಮ್ಮ ಸಂಬಂಧ ಬೆಳೆಯಿತು.

ನಮ್ಮ ಬಾವಾಜಿ ಡಾ.ಎಂ.ಆರ್.ಹುಲಿನಾಯ್ಕರ್ ಅವರಿಗೆ 75 ವರ್ಷ ತುಂಬಿದ ಸಂದರ್ಭದಲ್ಲಿ ಅವರಿಗೆ ಅಭಿನಂದನಾ ಸಮಾರಂಭ ನಡೆಯುತ್ತಿರುವುದನ್ನು ಕಂಡಾಗ ಸಂತೋಷವೆನಿಸಿದೆ. ಈ ಕೆಲಸ ಮೊದಲೇ ಆಗಬೇಕಾಗಿತ್ತು. ಬಾವಾಜಿಯನ್ನು ನೋಡಿದರೆ ಅವರಿಗೆ ಎಪ್ಪತ್ತೈದು ವರ್ಷ ತುಂಬಿದೆ ಎನಿಸುವುದಿಲ್ಲ. ಅವರು ಇಂದು ಸಹ ಹಗಲಿರುಳು ಕೆಲಸ ಮಾಡುತ್ತಿದ್ದಾರೆ.

ಡಾ. ಹುಲಿನಾಯ್ಕರ್ ಅವರು ಪ್ರಾರಂಭಿಸಿದ ಶ್ರೀದೇವಿ ನರ್ಸಿಂಗ್ ಹೋಂಗೆ ನಾನು ಅರೆ ಕಾಲಿಕನಾಗಿ ಕೆಲಸ ಮಾಡಲು 1988ರಲ್ಲಿ ಬಂದೆ. ನಾನು ಕೆಲಸ ಮಾಡುತ್ತಿದ್ದ ವಿಜಯ ಬ್ಯಾಂಕ್ ಶ್ರೀದೇವಿ ನರ್ಸಿಂಗ್ ಹೋಂನಿಂದ ಐದು ನಿಮಿಷದ ನಡಿಗೆ. ಬೆಳಗ್ಗೆ 8 ಗಂಟೆಗೆ ನರ್ಸಿಂಗ್ ಹೋಂಗೆ ಬಂದರೆ ಬಾವಾಜಿ ಆಗಲೇ ಒಂದು ಆಪರೇಷನ್ ಮುಗಿಸಿರುತ್ತಿದ್ದರು.

ನಾವು ರಾತ್ರಿ ಹೊತ್ತು ನರ್ಸಿಂಗ್ ಹೋಮ್‌ನಲ್ಲಿದ್ದಾಗ ಯಾವುದೇ ಪೇಶೆಂಟ್ ಬಂದಾಗ ಮನೆಗೆ ಫೋನ್ ಮಾಡಿದರೆ ಎಲ್ಲಿಯಾದರೂ ಪ್ರಯಾಣ ಮಾಡಿ ಸುಸ್ತಾಗಿ ಬಂದಿದ್ದರೂ ತಕ್ಷಣ ನರ್ಸಿಂಗ್ ಹೋಂಗೆ ಬಂದು ಬಿಡುತ್ತಿದ್ದರು. ಅಗತ್ಯವಾದರೆ ಆಪರೇಷನ್ ಸಹ ಮಾಡಿ ರಾತ್ರಿ 1 ಗಂಟೆಗೆ ಮನೆಗೆ ಹೋದ ಸನ್ನಿವೇಶವೂ ಇದೆ. ಅವರಿಗೆ ಪೇಶೆಂಟ್‌ಗಿಂತ ಯಾವುದೂ ದೊಡ್ಡದಿರಲಿಲ್ಲ. ಅದಕ್ಕಾಗಿ ಯಾವುದೇ ಪೇಶೆಂಟಾದರೂ ಹುಲಿನಾಯ್ಕರ್ ಅವರೇ ಬೇಕು ಎಂದು ಹಟ ಹಿಡಿಯುತ್ತಿದ್ದರು. ಡಾ. ಎನ್. ನರೇಂದ್ರ ಮತ್ತು ಡಾ. ಸಂಧ್ಯಾ ಅವರು ಆ ಕಾಲದಲ್ಲಿ ಡಾ.ಎಂ.ಆರ್.ಹುಲಿನಾಯ್ಕರ್ ಅವರ ಮಾರ್ಗದರ್ಶನದಲ್ಲಿ ಉತ್ತಮ ಕೆಲಸ ಮಾಡಿದ್ದಾರೆ.

ನರ್ಸಿಂಗ್ ಹೋಂಗೆ ಬೇಕಾದ ಸಣ್ಣ ಪುಟ್ಟ ವಸ್ತುಗಳು ತುಮಕೂರಿನಲ್ಲಿ ಸಿಗುತ್ತಿರಲಿಲ್ಲ. ಪ್ರತಿ ಶನಿವಾರ ನಾನು ಬೆಂಗಳೂರಿಗೆ ಹೋಗಿ ನರ್ಸಿಂಗ್ ಹೋಂಗೆ ಬೇಕಾದ ವಸ್ತುಗಳನ್ನು ತರುತ್ತಿದ್ದೆ. 1992ರಲ್ಲಿ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಶ್ರೀದೇವಿ ನರ್ಸಿಂಗ್ ಕಾಲೇಜು ಪ್ರಾರಂಭ ಮಾಡಿದರು. ಅವರ ಅನೇಕ ಸಹೋದ್ಯೋಗಿಗಳು 'ನಿಮಗೇಕೆ ಶಿಕ್ಷಣದ ಉಸಾಬರಿ' ಎಂದಿದ್ದರು. ಆಗ ನಾನು ನಮ್ಮ ಬಾವಾಜಿ ಅಲ್ಪ ತೃಪ್ತರಲ್ಲ. ಜನರಿಗೆ ಏನಾದರೂ ಮಾಡಿಕೊಡಬೇಕು ಎನ್ನುವ ಆಸೆಯಿರುವವರು. ಅವರು ಅದರಲ್ಲೂ ಯಶಸ್ಸು ಪಡೆಯುತ್ತಾರೆ ಎಂದಿದ್ದೆ. ಅದು ಇಂದು ನಿಜವಾಗಿದೆ.


ನನಗೆ ಹತ್ತು ಹನ್ನೆರಡು ಆಪರೇಷನ್‌ಗಳಾಗಿವೆ. ಹೈದ್ರಾಬಾದ್‌ನ ಅಪೋಲೋದಲ್ಲಿ ಮೂತ್ರಪಿಂಡದಲ್ಲಿದ್ದ ಕಲ್ಲು ತೆಗೆಯುವ ಆಪರೇಷನ್ ಆದಾಗ ಅಲ್ಲಿದ್ದ ಡಾಕ್ಟರ್ ಅವರಿಗೆ 'ನನ್ನ ಬಾವಾಜಿ ಆಪರೇಷನ್ ಥಿಯೇಟರ್ ಒಳಗೆ ಇರಬೇಕು' ಎಂದು ಪ್ರಾರ್ಥಿಸಿದ್ದೆ. ಅವರು ನನ್ನ ಪಕ್ಕದಲ್ಲಿದ್ದರೆ ನನಗೆ ಧೈರ್ಯ. ಅದರಂತೆ ಬಾವಾಜಿ ಆಪರೇಷನ್ ಥಿಯೇಟರ್ ಒಳಗಿದ್ದು ಮಾತನಾಡಿಸುತ್ತಿದ್ದಾಗಲೇ ಆಪರೇಷನ್ ಮುಗಿದಿತ್ತು. ಎಲ್ಲ ಅನಾರೋಗ್ಯದ ಸಂದರ್ಭದಲ್ಲೂ ಬಾವಾಜಿ ನನಗೆ ಶ್ರೀರಕ್ಷೆಯಾಗಿದ್ದಾರೆ.

ನನ್ನ ತಂಗಿ ಶಾಂತಾದುರ್ಗಾದೇವಿ ಹೇಳುವಂತೆ ಡಾಕ್ಟರ್ ಹೆಂಗರುಳಿನ ವ್ಯಕ್ತಿ. ಯಾರಿಗಾದರೂ ಕಷ್ಟವೆಂದು ಅವರ ಬಳಿ ಬಂದರೆ ತಕ್ಷಣ ಸ್ಪಂದಿಸುತ್ತಿದ್ದರು. ಎಷ್ಟೋ ಪೇಶೆಂಟ್‌ಗಳಿಗೆ ಅವರು ಕೇಳಿದಂತೆ ಬಿಲ್ಲಿನಲ್ಲಿ ಸಾಕಷ್ಟು ರಿಯಾಯಿತಿ ಕೊಟ್ಟ ಮೇಲೂ ಊರಿಗೆ ಹೋಗಲು ಚಾರ್ಜ್ ಇಲ್ಲವೆಂದು ಅವರ ಬಳಿ ಹೇಳಿದರೆ, ಡಾಕ್ಟರ್ ನರ್ಸಿಂಗ್ ಹೋಂನ ಕ್ಯಾಷ್‌ನಿಂದ ಅವರಿಗೆ ಹಣ ಕೊಡಿಸುತ್ತಿದ್ದರು.

ಡಾ.ಎಂ.ಆರ್.ಹುಲಿನಾಯ್ಕರ್ ಹಾಕಿಕೊಟ್ಟ ಪರಂಪರೆಯಲ್ಲಿ ಮುನ್ನಡೆದರೆ ಖಂಡಿತ ಜನರ ಪ್ರೀತಿ ಮತ್ತು ಯಶಸ್ಸು ಎರಡೂ ಶ್ರೀದೇವಿ ಸಂಸ್ಥೆಗೆ ಬರುವುದರಲ್ಲಿ ಯಾವುದೇ ಸಂಶಯವಿಲ್ಲ.

ಎನ್ನುವ ಆಶ್ವಾಸನೆ ಕೊಟ್ಟರು. ಈಗ ಅವರು ಎಲ್ಲೋ ವಿದೇಶದಲ್ಲಿದ್ದಾರೆ. ಈಗಲೂ ಅವರು ಡಾ.ಹುಲಿನಾಯ್ಕರ್ ಅವರನ್ನು ನೆನೆದು ಕೊಳ್ಳುತ್ತಾರೆ.

ನಾನು ಶ್ರೀದೇವಿ ಆಸ್ಪತ್ರೆಗೆ ನರ್ಸ್ ಆಗಿ ಸೇರಿದ ಮೇಲೆ ಅವರಿಗೆ ವೈದ್ಯಕೀಯ ವೃತ್ತಿಯಲ್ಲಿರುವ ನಿಷ್ಠೆಯ ಪರಿಚಯವಾಗಿದೆ. ಹೆಚ್ಚು ಕಡಿಮೆ ಪ್ರತಿದಿನ ವಾರ್ಡ್‌ಗಳಿಗೆ ಭೇಟಿ ಕೊಡುತ್ತಾರೆ. ಹಿಂದೆ ಡಾಕ್ಟರ್ ಆಗಿ ಅವರು ರೌಂಡ್ಸ್ ಮಾಡಿರಬಹುದು. ಈಗ ರೋಗಿಗಳ ಮತ್ತು ಆಸ್ಪತ್ರೆಯ ನಿರ್ವಹಣೆಯ ದೃಷ್ಟಿಯಿಂದ ಅವರ ಭೇಟಿ ಮುಖ್ಯವಾಗಿರುತ್ತದೆ. ಪ್ರತಿ ವಾರ್ಡ್‌ನಲ್ಲಿ ಮೂಲಭೂತ ಸೌಕರ್ಯದ ಕೊರತೆಯಿದ್ದರೆ ಅದರ ಕಡೆ ಗಮನ ಕೊಡುತ್ತಾರೆ. ಸ್ವಚ್ಛತೆ ಮತ್ತು ಸಿಬ್ಬಂದಿಗಳು ರೋಗಿಗಳನ್ನು ಹೇಗೆ ನೋಡಿಕೊಳ್ಳುತ್ತಾರೆ ಎನ್ನುವ ಅಂಶಗಳನ್ನು ಭೇಟಿಯ ವೇಳೆ ಸೂಕ್ಷ್ಮವಾಗಿ ಗಮನಿಸುತ್ತಾರೆ. ಬಹುಪಾಲು ಪೇಶೆಂಟ್‌ಗಳು ಅವರಿಗೆ ಪರಿಚಿತರಿರುತ್ತಾರೆ. ಅವರನ್ನು ನೋಡಿಕೊಳ್ಳುವಂತೆ ನಮಗೆ ಮತ್ತು ವೈದ್ಯರಿಗೆ ಹೇಳುತ್ತಾರೆ. ಆ ರೋಗಿಯ ಕಾಯಿಲೆ, ಕೊಡುತ್ತಿರುವ ಔಷಧೋಪಚಾರದ ವಿವರಗಳನ್ನು ಪಡೆಯುತ್ತಾರೆ. ಅದನ್ನು ಪೇಶೆಂಟ್‌ಗೆ ತಾವೇ ಹೇಳುತ್ತಾರೆ. ಆ ಪೇಶೆಂಟ್ ಡಿಸ್ಚಾರ್ಜ್ ಆಗುವ ತನಕ ಅವರು ವಿಚಾರಿಸಿಕೊಳ್ಳುತ್ತಿರುತ್ತಾರೆ.



ಕೋವಿಡ್ 19ರ ಸಂದರ್ಭದಲ್ಲಿ ನಮ್ಮ ಶ್ರೀದೇವಿ ಆಸ್ಪತ್ರೆ ಸಲ್ಲಿಸಿದ ಸೇವೆಯ ಬಗ್ಗೆ ಹೇಳಲೇಬೇಕು. ನಮ್ಮಲ್ಲೇ ಆಕ್ಸಿಜನ್ ಪ್ಲಾಂಟ್ ಅಳವಡಿಸಿಕೊಳ್ಳಲಾಗಿತ್ತು. ನಮ್ಮಲ್ಲಿ ನೂರಕ್ಕೂ ಹೆಚ್ಚು ಐ.ಸಿ.ಯು. ಬೆಡ್‌ಗಳಿದ್ದವು. ಆಗ ಎಂತಹ ಒತ್ತಡವಿತ್ತು ಎಂದರೆ ಪ್ರತಿದಿನ ಶಾಸಕರು, ಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳು ದೂರವಾಣಿ ಕರೆ ಮಾಡಿ 'ಒಂದು ಬೆಡ್ ಕೊಡಿ' ಎಂದು ಪ್ರಾರ್ಥಿಸುತ್ತಿದ್ದರು. ಎಲ್ಲಾ ಸಿಬ್ಬಂದಿಯೂ ಐ.ಸಿ.ಯುಗೆ ಹೋಗಲು ಹೆದರುತ್ತಿದ್ದರು. ಮೊದಲಿಗೆ ಡಾ.ರಮಣ ಅವರೇ ಮುನ್ನುಗ್ಗಿದರು. ಅವರ ಹಿಂದೆ ಇಡೀ ತಂಡ ಐ.ಸಿ.ಯು. ಹಾಗೂ ಇತರ ಕಡೆ ಕೋವಿಡ್ ಪೇಶೆಂಟ್‌ಗಳಿಗೆ ಚಿಕಿತ್ಸೆ ನೀಡಲು ಸಮರೋಪಾದಿಯಲ್ಲಿ ಕಾರ್ಯಶೀಲವಾಯಿತು. ಹದಿನೈದು, ಇಪ್ಪತ್ತು ದಿನ ಎಲ್ಲರೂ ಮನೆ ಮಠಗಳನ್ನು ಮರೆತು ಸೇವೆ ಮಾಡಿದೆವು. ನಮ್ಮ ಆಸ್ಪತ್ರೆಗೆ ಬಂದ ಯಾರನ್ನೂ ನಾವು 'ಬೆಡ್ ಇಲ್ಲ' ಎಂದು ಹಿಂದೆ ಕಳುಹಿಸಿಲ್ಲ.

ಆ ಸಂದರ್ಭದಲ್ಲಿ ಚೇರ್ಮನ್ ಡಾ.ಹುಲಿನಾಯ್ಕರ್ ಸಾಹೇಬ್ರು ನಮ್ಮ ಜೊತೆ ನಿಂತರು. ವೈದ್ಯಕೀಯ ಸಿಬ್ಬಂದಿಗಳಿಗೆ ಇದೊಂದು ಸತ್ವ ಕಾಲ. ನಿರಂತರವಾಗಿ ಸಾವುಗಳು ಜರುಗುತ್ತಿದ್ದವು. ಸೋಂಕು ತೀವ್ರವಾಗಿತ್ತು. ಆಗ ಡಾ. ಹುಲಿನಾಯ್ಕರ್ ಅವರು "ನಾವು ವೈದ್ಯರು, ನಮಗೆ ಈಗ ರೋಗಿಯ ಪ್ರಾಣ ಮುಖ್ಯ. ನೆಪ ಹೇಳಿದರೆ ಪ್ರಯೋಜನವಿಲ್ಲ. ಕೆಲಸ ಮಾಡಬೇಕು" ಎಂದು ಹುರಿದುಂಬಿಸುತ್ತಿದ್ದರು.

ವೈದ್ಯಕೀಯ ತುರ್ತು ಸಂದರ್ಭವನ್ನು ಹೇಗೆ ನಿರ್ವಹಣೆ ಮಾಡಬೇಕು ಎಂದು ಹೇಳಿ ಕೊಟ್ಟವರು ಶ್ರೀದೇವಿ ಸಂಸ್ಥೆಯ ಅಧ್ಯಕ್ಷರು ಮತ್ತು ಹಿರಿಯರಾದ ಪೂಜ್ಯ ಡಾ.ಎಂ.ಆರ್. ಹುಲಿನಾಯ್ಕರ್ ಅವರು. ಅವರಿಗೆ ಭಕ್ತಿಪೂರ್ವಕ ನಮಸ್ಕಾರಗಳು.

■ ನಿರೂಪಣೆ: ಡಾ.ಕೆ.ಆರ್.ಕಮಲೇಶ್



# ಗಣ್ಯರ ದೃಷ್ಟಿಯಲ್ಲಿ ಡಾ.ಎಂ.ಆರ್. ಹುಲಿನಾಯ್ಕರ್

## ದೈವಶಕ್ತಿಗೆ ಶರಣು

ಡಾ.ಹುಲಿನಾಯ್ಕರ್ ಅವರ ಕುಟುಂಬ ನೋಡಿದರೆ ನನಗೆ ತುಂಬ ಸಂತೋಷವಾಗುತ್ತದೆ. ಶ್ರೀ ದುರ್ಗಾಂಬಿಕಾದೇವಿಯ ಪ್ರತಿಷ್ಠಾಪನಾ ಕಾಲದಿಂದಲೂ ನಾನು ಗಮನಿಸುತ್ತಾ ಬಂದಿದ್ದೇನೆ. ಡಾ. ಹುಲಿನಾಯ್ಕರ್ ದಂಪತಿ ಅತ್ಯಂತ ದೈವಭಕ್ತರು. ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಅನ್ಯೋನ್ಯವಾಗಿದ್ದಾರೆ. ಈ ಕುಟುಂಬ ದೈವಶಕ್ತಿಯನ್ನು ನಂಬಿ ಪ್ರಾಮಾಣಿಕವಾದ ದುಡಿಮೆ ಮಾಡುತ್ತಿದೆ. ಇದರಿಂದ ಅವರಿಗೆ ಸತ್ಫಲ ದೊರೆಯುವುದರಲ್ಲಿ ಸಂಶಯವಿಲ್ಲ. ಅವರ ಮುಂದಿನ ಬದುಕಿನಲ್ಲಿ ಯಥೇಚ್ಛವಾದ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇನೆ.

■ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ
ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರು

## ಸಾಹಸಶೀಲರು

ಸೆಪ್ಟೆಂಬರ್ ಕೊನೆಯ ವಾರದಲ್ಲಿ ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆ ಮತ್ತು ಶ್ರೀ ದುರ್ಗಾಂಬಿಕಾ ದೇವಿಯ ದೇವಸ್ಥಾನ ಚಾರಿಟಬಲ್ ಟ್ರಸ್ಟ್ ನೀಡುವ ಶ್ರೀದೇವಿ ರಮಣ ಮಹರ್ಷಿ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಹೋಗಿದ್ದೆ. ಆಗ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಕಟ್ಟಿ ಬೆಳೆಸಿರುವ ಶ್ರೀದೇವಿ ಶಿಕ್ಷಣ ಸಂಸ್ಥೆಗಳನ್ನು ನೋಡಿ ಆಶ್ಚರ್ಯಚಕಿತನಾದೆ. ಅದೇ ರೀತಿ ಸಂತೋಷವೂ ಆಯಿತು. ದೂರದ ಧಾರವಾಡದಿಂದ ತುಮಕೂರಿಗೆ ಬಂದು, ಹಿಂದುಳಿದ ಸಮುದಾಯದಲ್ಲಿ ಜನಿಸಿದ್ದರೂ ತಮ್ಮ ದುಡಿಮೆಯಿಂದಲೇ ಎಲ್ಲರನ್ನೂ ಒಲಿಸಿಕೊಂಡು ಇಂತಹ ಶ್ರೇಷ್ಠ ಗುಣಮಟ್ಟದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿರುವುದು ಮತ್ತು ಸಾಮಾಜಿಕ, ಅಧ್ಯಾತ್ಮ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ನೋಡಿದಾಗ ಡಾ.ಹುಲಿನಾಯ್ಕರ್ ಬಗ್ಗೆ ಹೆಮ್ಮೆಯಾಗುತ್ತದೆ. ಅವರಿಗೆ ಶ್ರೀ ದುರ್ಗಾಂಬಿಕಾದೇವಿ ಸನ್ಮಂಗಳವನ್ನುಂಟು ಮಾಡಲಿ ಎಂದು ಹಾರೈಸುತ್ತೇನೆ.

■ ಡಾ.ಎಂ.ವೀರಪ್ಪ ಮೊಯಿಲಿ
ಮಾಜಿ ಮುಖ್ಯಮಂತ್ರಿ ಮತ್ತು ಮಾಜಿ ಕೇಂದ್ರ ಸಚಿವರು

## ಗುಣ ಮೆಚ್ಚುವವರು

ನಮ್ಮ ಕಡೆಯವರಾದ ಡಾ.ಹುಲಿನಾಯ್ಕರ್ ಅವರನ್ನು ಅಭಿನಂದಿಸಲೇಬೇಕು. ಅವರ ಪ್ರಯತ್ನದಿಂದಾಗಿ, ಮರೆಯಾಗಿದ್ದ ನ್ಯಾಯಮೂರ್ತಿಎಂ.ಎನ್.ವೆಂಕಟಾಚಲಯ್ಯ ಅವರಂತಹ ಅಮೂಲ್ಯ ವಜ್ರ ಇಂದು ನಮ್ಮ ಕಣ್ಣಿಗೆ ಬಿದ್ದಿದೆ. ಗುಣವನ್ನು ಮೆಚ್ಚುವ ಮತ್ತು ಪ್ರತಿಭಾವಂತರನ್ನು ಗುರುತಿಸುತ್ತಿರುವ ಡಾ.ಹುಲಿನಾಯ್ಕರ್ ಅವರು ಎಲ್ಲರ ಗೌರವಕ್ಕೆ ಪಾತ್ರರಾಗಿದ್ದಾರೆ.

■ ಡಿ.ಆರ್.ಪಾಟೀಲ
ಗದಗಿನ ಮಾಜಿ ಶಾಸಕರು ಮತ್ತು ಸಹಕಾರಿಗಳು

## ಕಿಂಚಿತ್ತೂ ಅಹಂಕಾರವಿಲ್ಲ

ಡಾ.ಹುಲಿನಾಯ್ಕರ್ ಅವರು ನಮ್ಮ ಕಡೆಯವರು. ಅವರನ್ನು ನೋಡಿದಾಗೆಲ್ಲಾ ನನಗೆ ಆಶ್ಚರ್ಯವಾಗುತ್ತದೆ. ಇಂತಹ ಶ್ರೇಷ್ಠ ಶಿಕ್ಷಣ ಸಂಸ್ಥೆ ಮತ್ತು ಆಸ್ಪತ್ರೆಗಳನ್ನು ಮಾಡಿದ್ದರೂ ಅವರಲ್ಲಿ ಕಿಂಚಿತ್ತೂ ಅಹಂಕಾರವಿಲ್ಲ. ನಾನು ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲೀಕರನ್ನು ನೋಡಿದ್ದೇನೆ. ಅವರಲ್ಲಿ ಕೃತಕತೆ ಮತ್ತು ವ್ಯಕ್ತಿ ಪ್ರತಿಷ್ಠೆ ತುಂಬಿರುತ್ತದೆ.

ಡಾ.ಹುಲಿನಾಯ್ಕರ್‌ರಂತಹ ಅತ್ಯಂತ ಸರಳ ಮತ್ತು ನಿರಹಂಕಾರಿ ವ್ಯಕ್ತಿಗಳು ತುಂಬ ಅಪರೂಪ. ಅವರನ್ನು ನೋಡಿ ಕಲಿಯುವುದು ಬಹಳವಿದೆ. ಅವರು ಹೇಳಿದ ಇಂಚಿಗೇರಿ ಸಂಪ್ರದಾಯವನ್ನು ನಾನು ನೋಡಿದ್ದೇನೆ. ಅದೊಂದು ಅವಧೂತ ಪರಂಪರೆಯ ಪಂಥ. ದೇವರನ್ನು ಕಾಣಲು, ಮುಟ್ಟಲು ಅವಧೂತ ಪರಂಪರೆಯಲ್ಲಿ ಯಾವುದೇ ನಿರ್ಬಂಧ ಹೇರುವುದಿಲ್ಲ.

ಡಾ.ಎಂ.ಆರ್.ಹುಲಿನಾಯ್ಕರ್ ಅವರು ಅವಧೂತ ಪರಂಪರೆಗೆ ಅನುಗುಣವಾಗಿ ಬೆಳೆದಿದ್ದಾರೆ. ತಮ್ಮ ಕುಟುಂಬ ಮತ್ತು ಸಿಬ್ಬಂದಿಯನ್ನು ಅಂತಹುದೇ ಆದರ್ಶದಲ್ಲಿ ಬೆಳೆಯಲು ಪ್ರೇರಣೆ ನೀಡಿರುವ ಡಾ.ಹುಲಿನಾಯ್ಕರ್ ಅವರನ್ನು ಅಭಿನಂದಿಸುತ್ತೇನೆ

■ ಬಸವರಾಜ ಬೊಮ್ಮಾಯಿ
ಮಾಜಿ ಮುಖ್ಯಮಂತ್ರಿಗಳು ಮತ್ತು ಶಾಸಕರು
(ಶ್ರೀದೇವಿ ರಮಣ ಮಹರ್ಷಿ ಪ್ರಶಸ್ತಿ ವಿತರಣೆ ಸಂದರ್ಭ)

## ಸ್ನೇಹಶೀಲ ನಡೆ, ನುಡಿ

ತುಮಕೂರಿನ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ಸಂಸ್ಥಾಪಕರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರಲ್ಲಿ ಪ್ರಾಮಾಣಿಕವಾದ ದುಡಿಮೆಯಿದೆ. ಮಹತ್ವವಾದದ್ದನ್ನು ಸಾಧಿಸಬೇಕೆಂಬ ಗುರಿಯಿದೆ. ಅವರು ಶ್ರೀದೇವಿ ನರ್ಸಿಂಗ್ ಬೆಳೆಸಿದ ರೀತಿ ಯುವವೈದ್ಯರಿಗೆ ಆದರ್ಶಪ್ರಾಯವಾದದ್ದು. ಅವರು ಪೇಶೆಂಟ್ ವಿಚಾರದಲ್ಲಿ ಎಷ್ಟೊಂದು ಕಾಳಜಿ ವಹಿಸುತ್ತಾರೆ ಎಂದರೆ ಇಂದಿಗೂ ಪ್ರತಿಯೊಂದು ಪೇಶೆಂಟ್ ನಿರಂತರವಾಗಿ ಅವರ ಸಂಪರ್ಕದಲ್ಲಿರುತ್ತಾರೆ. ವೈದ್ಯರಿಗೆ ಪೇಶೆಂಟ್‌ಗಳೇ ನಿಜವಾದ ದೇವರು. ವೈದ್ಯರು ಮಾತ್ರ ದೇವರಲ್ಲ, ಪೇಶೆಂಟ್‌ಗಳು ದೇವರೇ ಹೌದು! ಅವರು ಪೂರ್ಣವಾಗಿ ನಂಬಿ ನಮ್ಮ ಬಳಿ ಬಂದಾಗ ಅವರಿಗೆ ಉತ್ತಮ ರೀತಿ ಚಿಕಿತ್ಸೆ ಕೊಡುವುದು ವೈದ್ಯರ ಪ್ರಾಥಮಿಕ ಕರ್ತವ್ಯವಾಗಿದೆ. ಅದನ್ನು ಡಾ.ಹುಲಿನಾಯ್ಕರ್ ಯಶಸ್ವಿಯಾಗಿ ಮಾಡಿದ್ದಾರೆ.

ಡಾ.ಹುಲಿನಾಯ್ಕರ್ ಅವರು ತುಮಕೂರಿನ ಆರೋಗ್ಯ ವಲಯದ ನಾಯಕರು. ಅವರ ಬದುಕು ಸಂಪೂರ್ಣವಾಗಿ ವೃತ್ತಿಗೆ ಸಮರ್ಪಿತವಾದ ಕಾರಣ ಅವರಿಗೆ ಯಶಸ್ಸು ದೊರಕಿದೆ.

ಇಂತಹ ಯಶಸ್ಸನ್ನು ಅವರು ಪುನಃ ಸಮಾಜಕ್ಕೆ ಅರ್ಪಿಸಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಬಹು ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅವರ ಶಿಕ್ಷಣ ಸಂಸ್ಥೆಯಲ್ಲಿ ವಿವಿಧ ಕೋರ್ಸ್‌ಗಳಲ್ಲಿ ಸಾವಿರಾರು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಅಧ್ಯಯನ ಮಾಡುತ್ತಿರುವುದು ಅವರ ಸಾಧನೆಗೆ ಸಾಕ್ಷ್ಯ ಒದಗಿಸಿದೆ.

ಕೊನೆಯದಾಗಿ, ಮೆಡಿಕಲ್ ಕಾಲೇಜು ಸಹ ಪ್ರಾರಂಭಿಸಿದ್ದಾರೆ. ನನಗೆ ತಿಳಿದಂತೆ ಕುರುಬ ಸಮಾಜದ ವ್ಯಕ್ತಿಯೊಬ್ಬರು ಪ್ರಾರಂಭಿಸಿದ ಮೊದಲ ಮೆಡಿಕಲ್ ಕಾಲೇಜು ಶ್ರೀದೇವಿ ವೈದ್ಯಕೀಯ ಕಾಲೇಜ್ ಎಂದರೆ ತಪ್ಪಿಲ್ಲ.

ಡಾ.ಎಂ.ಆರ್.ಹುಲಿನಾಯ್ಕರ್ ಅವರ ಯಶಸ್ಸಿಗೆ ಅವರ ನಗುಮುಖ ಮತ್ತು ಸ್ನೇಹಶೀಲ ನಡೆ, ನುಡಿ ಕಾರಣವಾಗಿದೆ. ಅವರ ಕುಟುಂಬದವರು ಸಹ ಸುಸಂಸ್ಕೃತ ವ್ಯಕ್ತಿಗಳು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳಿದಂತೆ "ಜೀವಿ ಯಾವುದೇ ಅನುಕಂಪ, ದುಃಖ ಹಾಗೂ ಸ್ವಾರ್ಥವಿಲ್ಲದೆ ನಿರ್ಲಿಪ್ತನಾಗಿ ತನ್ನ ಕರ್ತವ್ಯಗಳನ್ನು ಕಾಯಾ, ವಾಚಾ ಹಾಗೂ ಮನಸಾ ಮಾಡಿದರೆ ಅವರಿಗೆ ಇಹಪರಗಳೆರಡರಲ್ಲೂ ಶ್ರೇಯಸ್ಸು ದೊರೆಯುತ್ತದೆ". ಡಾ.ಎಂ.ಆರ್. ಹುಲಿನಾಯ್ಕರ್ ಅವರು ತಮ್ಮ ಕರ್ತವ್ಯಗಳನ್ನು ಈ ದೃಷ್ಟಿಯಿಂದ ಮಾಡುತ್ತಿದ್ದಾರೆ ಎನ್ನುವುದು ನನ್ನ ಭಾವನೆ. ಅವರಿಗೆ ಮತ್ತು ಅವರ ಕುಟುಂಬಕ್ಕೆ ಮತ್ತಷ್ಟು ಸತ್ಫಲಗಳು ದೊರೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ

ಆಚಾರ್ಯ ಡಾ.ಎಂ.ನಾಗರಾಜ್
ಸಂಸ್ಥಾಪಕರು, ಸುವರ್ಣಮುಖಿ ಸಂಸ್ಕೃತಿಧಾಮ
ವಡೇರಹಳ್ಳಿ ಕಗ್ಗಲಿಪುರ, ಹಾರೋಹಳ್ಳಿ ತಾಲ್ಲೂಕು.



# ನನಗೆ ಆದರ್ಶಪ್ರಾಯರು





**ಮನದ ಮಾತು**

**ಡಾ. ರಮಣ ಎಂ ಹುಲಿನಾಯ್ಕರ್**
ಕಾರ್ಯನಿರ್ವಾಹಕ ಸಂಪಾದಕರು
ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು

ಅಪ್ಪಾಜಿ ಅವರಿಗೆ 75 ವರ್ಷ ತುಂಬಿ ಸಂದರ್ಭದಲ್ಲಿ ಅವರು ಬರೆದಿರುವ 'ಅಂತರಂಗದ ಅವಲೋಕನ' ಆತ್ಮಕಥನವನ್ನು ಬಿಡುಗಡೆ ಮಾಡುವ ಶುಭ ಸನ್ನಿವೇಶದಲ್ಲಿ, 'ಶ್ರೀದೇವಿ ಅಂತರಂಗ' ಮಾಸಪತ್ರಿಕೆ ವಿಶೇಷ ಸಂಚಿಕೆ ಹೊರತರುತ್ತಿರುವುದು ಸ್ವಾಗತಾರ್ಹ ವಿಚಾರ. ಈ ಪತ್ರಿಕೆ ಪ್ರಥಮ ವರ್ಷ ಮುಗಿಸಿ, ದ್ವಿತೀಯ ವರ್ಷಕ್ಕೆ ಕಾಲಿಡುತ್ತಿದೆ. ಅದಕ್ಕೆ ಲೇಖನ ಬರೆಯುವಂತೆ ಸೂಚಿಸಿದ್ದಾರೆ. ಅಪ್ಪಾಜಿ ಕುರಿತು ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ದೊರೆತ ಸದವಕಾಶವೆಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ನನ್ನ ಮತ್ತು ಅಪ್ಪಾಜಿ ಅವರ ಸಂಬಂಧವನ್ನು ಮೂರು ಹಂತಗಳಲ್ಲಿ ವಿಶ್ಲೇಷಿಸಲು ಬಯಸುತ್ತೇನೆ. ಮೊದಲ ಹಂತ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಎಂ.ಡಿ.ಶಿಕ್ಷಣ ಪಡೆಯುವ ತನಕ. ಎರಡನೆಯ ಹಂತ ಶ್ರೀದೇವಿ ನರ್ಸಿಂಗ್ ಹೋಂನಲ್ಲಿ ವೃತ್ತಿಗೆ ಪ್ರವೇಶ ಪಡೆದು, ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ವೈದ್ಯಕೀಯ ಕಾಲೇಜಿಗೆ ಸ್ಥಿರವಾದ ಅಸ್ತಿಭಾರ ಹಾಕಿದ ಸಂದರ್ಭ. ಮೂರನೆಯ ಹಂತ ಪ್ರಸ್ತುತ ಅವರ ಜೊತೆ ನಿರಂತರವಾಗಿ ಕಲಿಕೆ ಪ್ರಕ್ರಿಯೆ.

ಅಪ್ಪಾಜಿ ಅರ್ಥಾತ್ ಡಾ.ಎಂ.ಆರ್. ಹುಲಿನಾಯ್ಕರ್ ಅತ್ಯಂತ ಶಿಸ್ತಿನ ಮನುಷ್ಯರೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಶ್ರೀದೇವಿ ನರ್ಸಿಂಗ್ ಹೋಂ ಪ್ರಾರಂಭಿಸಿದ ದಿನಗಳಲ್ಲಿ ಅವರು ಬೆಳಗಿನ ಜಾವ 4 ಗಂಟೆಗೆ ಏಳುತ್ತಿದ್ದರು. ಪೂಜಾ ಕಾರ್ಯಗಳನ್ನು ಮುಗಿಸಿ, 5.30ಕ್ಕೆ ಆಪರೇಷನ್ ಥಿಯೇಟರ್‌ಗೆ ಹೋಗುತ್ತಿದ್ದರು.

ನಾವು ಶಾಲೆಗೆ ಹೋದ ಸಂದರ್ಭದಲ್ಲಿ ಮಧ್ಯಾಹ್ನ ಮನೆಗೆ ಬರುತ್ತಿದ್ದರು. ಇನ್ನು ರಾತ್ರಿ 11 ಗಂಟೆಗೆ ಮನೆಗೆ ಬರುತ್ತಿದ್ದರು. ಅವರು ಹೋಗುವುದಕ್ಕೆ ಮುಂಚೆ ನಾವಿನ್ನೂ ಮಲಗಿರುತ್ತಿದ್ದೆವು. ರಾತ್ರಿ ಬರುವಾಗ ಮಲಗಿ ಬಿಟ್ಟಿರುತ್ತಿದ್ದೆವು. ನಾನು ಕಂಡಂತೆ ಅವರಷ್ಟು ಶ್ರಮ ವಹಿಸಿ ಕೆಲಸ ಮಾಡುವವರು ತುಂಬಾ ಅಪರೂಪ. ಎಷ್ಟೋ ದಿನ ಅವರ ಜೊತೆ ಮಾತುಕತೆಯಿರುತ್ತಿರಲಿಲ್ಲ. ನನ್ನ ವ್ಯಾಸಂಗದ ವಿಚಾರದಲ್ಲಿ ಅವರು ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು.

ನಮ್ಮ ತಾಯಿ ಶಾಂತಾದುರ್ಗಾದೇವಿ ಅವರು ನಮ್ಮನ್ನೆಲ್ಲಾ ನಿರ್ವಹಣೆ ಮಾಡಿದರು. ನಮ್ಮಲ್ಲಿ ಶಕ್ತಿ ಮತ್ತು ಸ್ಫೂರ್ತಿ ತುಂಬಿದವರು ಅವರೇ! ಪಾಠ ಪ್ರವಚನದಲ್ಲಿ ಶ್ರದ್ಧೆ, ದೇವರಲ್ಲಿ ಭಕ್ತಿ, ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳುವುದು, ಉತ್ತಮ ಚಿಂತನೆಗಳನ್ನು ಮಾಡುವುದು ಮೊದಲಾದ ವಿಚಾರಗಳಲ್ಲಿ ನಮ್ಮ ತಾಯಿ ನಮಗೆ ಪ್ರೇರಣಾದಾಯಕರಾಗಿದ್ದಾರೆ. ಅಪ್ಪಾಜಿ ಸಮಯ ಕೊಟ್ಟಿಲ್ಲ ಎನ್ನುವ ಕೊರತೆ ಬಾರದಂತೆ ಅಮ್ಮ ನಮ್ಮನ್ನು ಬೆಳೆಸಿದ್ದಾರೆ.

ಇಷ್ಟಾದರೂ ಅಪ್ಪಾಜಿ ನಮ್ಮ ಶೈಕ್ಷಣಿಕ ಪ್ರಗತಿಯನ್ನು ಗಮನಿಸುತ್ತಿದ್ದರು. ಶಾಲೆಯಲ್ಲಿ ನಡೆಯುವ ಪೋಷಕರ ಸಭೆಗಳಿಗೆ ತಪ್ಪಿಸುತ್ತಿರಲಿಲ್ಲ. ಶೈಕ್ಷಣಿಕವಾಗಿ ಹಿಂದುಳಿದಿದ್ದರೆ ಆ ಕಡೆ ಗಮನ ಹರಿಸುವಂತೆ ಸೂಚಿಸುತ್ತಿದ್ದರು. ನಾವೇನಾದರೂ ಹುಷಾರು ತಪ್ಪಿದರೆ ಚಿಕಿತ್ಸೆ ಕೊಡುತ್ತಿದ್ದರು. ಅದಕ್ಕಿಂತ ಹೆಚ್ಚಾಗಿ ಆತ್ಮವಿಶ್ವಾಸ ಬೆಳೆಸಿಕೊಳ್ಳುವಂತೆ, ಎಂತಹುದೇ ಪರಿಸ್ಥಿತಿಯಲ್ಲೂ ಧೈರ್ಯದಿಂದ ಮುನ್ನುಗ್ಗುವಂತೆ ಪ್ರೇರಣೆ ಕೊಡುತ್ತಿದ್ದರು.

ಅಪ್ಪಾಜಿ ಮಕ್ಕಳನ್ನು ಕುರಿತು ಎಂತಹ ಭಾವನಾತ್ಮಕ ಪ್ರೀತಿಯಿಟ್ಟುಕೊಂಡಿದ್ದರು ಎಂಬುದು ಆಗ ಅರ್ಥವಾಗಿರಲಿಲ್ಲ. ಈಗ ಅವರ ಒಂದೊಂದು ಕೆಲಸವೂ ಅರ್ಥವಾಗುತ್ತಾ ಹೋಗುತ್ತಿದೆ. ಅವರೆಂದೂ ಶಬ್ದಗಳಲ್ಲಿ ಪ್ರೀತಿ, ವಿಶ್ವಾಸಗಳನ್ನು ಹೇಳಿದವರಲ್ಲ. ಭಾವನೆಗಳನ್ನು ತುಂಬಾ ಗಾಂಭೀರ್ಯದಿಂದ ಅಭಿವ್ಯಕ್ತಗೊಳಿಸುತ್ತಿದ್ದರು. ಅದಕ್ಕೆ ಅವರು ಬಾಲ್ಯದಲ್ಲಿ ಬೆಳೆದ ವಾತಾವರಣ ಕಾರಣವಿರಬಹುದು. ಕೆಲವೇ ಮಾತುಗಳಲ್ಲಿ ಎಲ್ಲ ರೀತಿಯ ಭಾವನೆಗಳನ್ನೂ ಹೇಳುವ ಗುಣ ಅವರಲ್ಲಿದೆ.

ಅಪ್ಪಾಜಿ ಬಾಲ್ಯದಲ್ಲೇ ತಮ್ಮ ತಂದೆ, ತಾಯಿಯನ್ನೊಳಗೊಂಡ ಕುಟುಂಬದ ನಿರ್ವಹಣೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಯಾವುದೇ ಭಾವನಾತ್ಮಕ ಮಾತಿಗಿಂತ ಅವರಿಗೆ ಕರ್ತವ್ಯ ಮುಖ್ಯವಾಗಿತ್ತು. ತಮ್ಮ ಒಡಹುಟ್ಟಿದವರಿಗೆ ಎಲ್ಲ ವಿಧದಲ್ಲೂ ಆಸರೆಯಾಗಿ ನಿಲ್ಲಬೇಕಾಗಿತ್ತು.

ನಮ್ಮ ತಾಯಿ ಯಾವಾಗಲೂ ಅಪ್ಪಾಜಿ ಅವರ ದುಡಿಮೆ ಮತ್ತು ಅನನ್ಯ ನಿಷ್ಠೆ ನಿಮಗೆ ಆದರ್ಶವಾಗಬೇಕು ಎಂದು ಹೇಳುತ್ತಿದ್ದರು. ಅಪ್ಪಾಜಿಯಲ್ಲಿನ ನೈತಿಕತೆ ಮತ್ತು ಸರಳ ಬದುಕು ನಮ್ಮ ತಾಯಿಗೆ ಪ್ರಿಯವಾಗಿತ್ತು. ಅಪ್ಪಾಜಿ ನಮ್ಮ ಜೊತೆ ಕಾಲ ಕಳೆಯುತ್ತಿಲ್ಲ ಎಂಬ ವಿಚಾರವನ್ನು ಪ್ರಸ್ತಾಪಿಸಲು ಅಮ್ಮ ನಮಗೆ ಅವಕಾಶವನ್ನೇ ಕೊಡಲಿಲ್ಲ. ಅದೊಂದು ದೊಡ್ಡ ವಿಚಾರವಲ್ಲ ಎನ್ನುವುದು ಅವರ ಭಾವನೆ.



ನನಗೆ ಅಪ್ಪಾಜಿಯಲ್ಲಿನ ಅತ್ಯಂತ ಪ್ರಿಯವಾದ ನಡೆ ಎಂದರೆ ಅವರಲ್ಲಿರುವ ದೈವಭಕ್ತಿ. ಈ ತನಕ ಅವರು ಎಂದೂ ದೇವರ ಪೂಜೆ ಮತ್ತು ಧ್ಯಾನವನ್ನು ಬಿಟ್ಟಿದ್ದನ್ನು ನಾನು ನೋಡಿಲ್ಲ. ಎಷ್ಟೇ ಒತ್ತಡವಿದ್ದರೂ ಆ ಎರಡು ಕೆಲಸಗಳು ನಡೆಯಲೇಬೇಕು. ಅವರ ದೈವಶ್ರದ್ಧೆ ನಮ್ಮೆಲ್ಲರ ಮೇಲೆ ಅಗಣಿತವಾದ ಪ್ರಭಾವ ಬೀರಿದೆ.

ಎರಡನೆಯ ಹಂತ ನಾನು ಮುಂಬೈನಿಂದ ಮೆಡಿಸಿನ್‌ನಲ್ಲಿ ಎಂ.ಡಿ. ಪದವಿ ಪಡೆದು ಶ್ರೀದೇವಿ ನರ್ಸಿಂಗ್ ಹೋಂಗೆ ಬಂದು ವೃತ್ತಿ ಆರಂಭಿಸಿದೆ. ಆಗ ಅಪ್ಪಾಜಿ ಕ್ರಿಯಾಶೀಲ ಸರ್ಜನ್ ಆಗಿದ್ದರು. ಹೆಚ್ಚು ಕಡಿಮೆ ಪ್ರತಿ ದಿನ, ಗಳಿಗೆ ಅವರೊಡನೆ ಸಂಪರ್ಕ ಬರತೊಡಗಿತು. ಪ್ರಾರಂಭದಲ್ಲಿ ನನಗೆ ಎಂ.ಡಿ. ಪಡೆದವ, ವೈದ್ಯಶಾಸ್ತ್ರದಲ್ಲಿ ಆಧುನಿಕ ಬೆಳವಣಿಗೆ ತಿಳಿದವ ಎನ್ನುವ ಹೆಮ್ಮೆಯಿತ್ತು. ಕೆಲವೇ ದಿನಗಳಲ್ಲಿ ಅಪ್ಪಾಜಿ ಜೊತೆ ಕೆಲಸ ಮಾಡತೊಡಗಿದ ಮೇಲೆ, ನಾನು ಕಲಿತಿರುವುದು ಯಾವುದಕ್ಕೂ ಪ್ರಯೋಜನಕ್ಕೆ ಬರುವುದಿಲ್ಲ ಎನಿಸಿತು. ಶ್ರೀದೇವಿ ನರ್ಸಿಂಗ್ ಹೋಂನಲ್ಲಿ ಪ್ರಾಯೋಗಿಕ ತರಬೇತಿ ಪಡೆದ ಮೇಲೆ ಪಠ್ಯ ಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳಬಹುದು ಎಂಬ ಸತ್ಯ ಮನವರಿಕೆಯಾಯಿತು. "ರೋಗಿಗಳನ್ನು ಪರೀಕ್ಷೆ ಮಾಡುವುದು, ಅವರನ್ನು ಮಾತನಾಡಿಸುವುದು, ಅವರಿಂದ ರೋಗ ನಿರ್ಣಯಕ್ಕೆ ಬೇಕಾದ ಅಂಶಗಳನ್ನು ಪಡೆಯುವುದು, ತಲೆಹರಟೆ ಸಿಬ್ಬಂದಿಯನ್ನು ಸರಿ ದಾರಿಗೆ ತರುವುದು, ಸರ್ಕಾರಿ ಅಧಿಕಾರಿಗಳನ್ನು ಸಂಭಾಳಿಸುವುದು, ನರ್ಸಿಂಗ್ ಹೋಂನ ಆಡಳಿತ ನಿರ್ವಹಣೆ, ಬಡವರ ಮತ್ತು ಅಸಹಾಯಕರ ವಿಚಾರದಲ್ಲಿ ಹೊಂದಿರಬೇಕಾದ ಅನುಕಂಪ..." ಮೊದಲಾದ ಹತ್ತಾರು ಸಂಗತಿಗಳನ್ನು ಆ ಕಾಲದಲ್ಲಿ ಕಲಿತೆ. ಅವು ಅಪ್ಪಾಜಿಯಿಂದ ಬೋಧಿಸಲ್ಪಟ್ಟ ವಿಷಯಗಳು. ಇವು ಶಾಲಾ ಕೊಠಡಿಯ ಬೋಧನೆಯಲ್ಲ. ಜೀವಿತದ ಪಾಠಗಳು. ಅಪ್ಪಾಜಿ ಜೊತೆ ಕಳೆದ ಪ್ರತಿ ನಿಮಿಷ ಮತ್ತು ಗಂಟೆ ನನಗೆ ಕಲಿಕೆಯ ಕಾಲವಾಗಿದೆ. ಈಗ ನೆನೆದರೆ ಅವು ನನ್ನ ಬದುಕಿನ ಅಮೂಲ್ಯ ಕ್ಷಣಗಳು ಎನಿಸುತ್ತದೆ. ಅಪ್ಪಾಜಿಯಂತಹ ಗುರು ದೊರೆಯುವುದು ತುಂಬ ಅಪರೂಪ.

ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಾರಂಭದ ದಿನಗಳನ್ನು ನೆನೆದರೆ ಮೈ ರೋಮಾಂಚನವಾಗುತ್ತದೆ. ಪ್ರಾರಂಭದಲ್ಲಿ ಹೊಸ ವೈದ್ಯಕೀಯ ಕಾಲೇಜಿನಂತೆ ನಮ್ಮ ಸಂಸ್ಥೆ ಕೆಲಸ ಮಾಡುತ್ತಿತ್ತು. ಎಂ.ಸಿ.ಐ. ವೀಕ್ಷಣೆ, ಎರಡು ವರ್ಷ ಎಂ.ಬಿ.ಬಿ.ಎಸ್. ಪ್ರವೇಶಕ್ಕೆ ಅಡಚಣೆ, ಅದರಿಂದ ಉಂಟಾದ ಅನೇಕ ಸಮಸ್ಯೆಗಳ ಸರಮಾಲೆ, ಆರ್ಥಿಕ ಮತ್ತು ಮಾನಸಿಕ ಕ್ಲೇಶಗಳು, ವಿದ್ಯಾರ್ಥಿ ಮತ್ತು ಪೋಷಕರಿಂದ ಬಿರುಸು ನುಡಿಗಳು, ಪ್ರವೇಶಕ್ಕೆ ಅನುಮತಿ ಕೊಡಿಸುವಂತೆ ನ್ಯಾಯಾಲಯಕ್ಕೆ ಮನವಿ, ವಕೀಲರ ಜೊತೆ ಮಾತುಕತೆ, ಸರ್ಕಾರಿ ಅಧಿಕಾರಿಗಳಲ್ಲಿ ಅಹವಾಲು ಸಲ್ಲಿಕೆ, ರಾಜಕೀಯ ನಾಯಕರ ಭೇಟಿ, ಸಂಸ್ಥೆಯ ನೌಕರರಿಗೆ ಸಕಾಲದಲ್ಲಿ ವೇತನ ಪಾವತಿ ಮಾಡಲು ಸಾಧ್ಯವಾಗದಿರುವುದು, ಪರಿಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಕೊಡುವುದು, ಬ್ಯಾಂಕ್‌ಗಳಿಂದ ಕಂತು ಪಾವತಿಗೆ ಒತ್ತಾಯ ಒಂದೇ, ಎರಡೇ.

ಈ ಸಂದರ್ಭದಲ್ಲಿ ಅಪ್ಪಾಜಿ ಸಹ ಒತ್ತಡಕ್ಕೊಳಗಾಗಿದ್ದರೂ ಯಾರ ಮೇಲೂ ಅದು ಪ್ರಭಾವ ಬೀರದಂತೆ ನೋಡಿಕೊಂಡರು. ಇನ್ನು ಮುಂದುವರಿದಂತೆ ನಮಗೆ ಮನುಷ್ಯರ ನೈಜ ಮುಖದ ದರ್ಶನ ಮಾಡಿಸಿದರು. ಅವರು ಯಾವಾಗಲೂ ದೃಢಚಿತ್ತದಿಂದ ಸಕಾರಾತ್ಮಕ ಚಿಂತನೆಯಿಂದ ದೈವಶ್ರದ್ಧೆಯಿಂದ ತಮ್ಮ ಪ್ರಯತ್ನಗಳನ್ನು ಮುಂದುವರಿಸುತ್ತಿದ್ದರು. ಈ ಸಂದರ್ಭವನ್ನು ಹೇಗೆ ಎದುರಿಸಬೇಕು ಎಂಬುದನ್ನು ನಮಗೂ ಹೇಳಿಕೊಟ್ಟರು. ಶ್ರೀ ದುರ್ಗಾಂಬಿಕಾದೇವಿಯ ಆಶೀರ್ವಾದದಿಂದ ಕಷ್ಟಗಳನ್ನು ದಾಟಿ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳನ್ನು ಉಳಿಸಿಕೊಂಡೆವು.

"ಬದುಕು ಸದಾ ಕಾಲ ಸಂತೋಷವಾಗಿ, ಸುಖವಾಗಿ ಮತ್ತು ಸ್ಥಿರವಾಗಿರುವುದಿಲ್ಲ. ಎಲ್ಲರಿಗೂ ಕಷ್ಟಗಳು ಬಂದೇ ಬರುತ್ತವೆ. ಅವುಗಳಿಗೆ ಹೆದರಿ ಓಡಿ ಹೋಗಲು ಸಾಧ್ಯವಿಲ್ಲ. ಜೀವನದಲ್ಲಿ ಸಮಸ್ಯೆಗಳು ಶಾಶ್ವತವಾಗಿರುವುದಿಲ್ಲ. ಅವು ನಿಗದಿತ ಕಾಲದಲ್ಲಿರುವವು. ಸಮಸ್ಯೆಗಳು ಬಂದಾಗ ಅವನ್ನು ಧೈರ್ಯದಿಂದ ಎದುರಿಸಬೇಕು. ಕಷ್ಟ ಕಾಲದ ನಿರ್ವಹಣೆ ವ್ಯಕ್ತಿತ್ವದ ಭಾಗವಾಗಬೇಕು. ಜೀವನದಲ್ಲಿ ಕಷ್ಟಗಳು ಕಾಣಿಸಿಕೊಂಡಾಗ ಅವು ಸಹಜವಾಗಿ ಬರುವಂತಹವು ಎನ್ನುವ ಮನೋಧರ್ಮ ಬೆಳೆಸಿಕೊಳ್ಳಬೇಕು. ದೈವಶ್ರದ್ಧೆ ಜೀವನದಲ್ಲಿದ್ದರೆ ಕಷ್ಟದ ದಿನಗಳನ್ನು ಎದುರಿಸಲು ತಾಳ್ಮೆ ಮತ್ತು ಮಾನವೀಯ ಮುಖವಾದ ಚಿಂತನೆ ಗೋಚರವಾಗುತ್ತದೆ. ಇವುಗಳಿಂದ ಸಂಕಷ್ಟದ ದಿನಗಳಿಂದ ಬೇಗ ಹೊರಬರಬಹುದು. ಇವು ಜೀವನಮೌಲ್ಯಗಳಾಗಬೇಕು." ಇವುಗಳು ನಾನು ಅಪ್ಪಾಜಿಯಿಂದ ಕಲಿತ ಪಾಠಗಳು.



ಮೂರನೆಯ ಹಂತ ಪ್ರಸ್ತುತ ನಾನು ಅಪ್ಪಾಜಿ ಜೊತೆ ಕೆಲಸ ಮಾಡುವ ಸನ್ನಿವೇಶ. ಈಗ ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ನಿರ್ವಹಣೆ ಜೊತೆ ಹತ್ತು ಹಲವು ವಿಷಯಗಳಲ್ಲಿ ನಮಗೆ ಅಪ್ಪಾಜಿ ಪ್ರತಿ ದಿನ ಮಾರ್ಗದರ್ಶನ ಮಾಡುತ್ತಿರುತ್ತಾರೆ. ಅವರ ಜೊತೆಯಿದ್ದಾಗ ಪ್ರತಿ ಗಂಟೆ, ಪ್ರತಿ ನಿಮಿಷ ನಮಗೆ ಕಲಿಕೆಯ ಕಾಲವಾಗಿರುತ್ತದೆ. ನನ್ನ ಕಣ್ಣಿನಲ್ಲಿ ಅವರೊಬ್ಬ ಆದರ್ಶ ವ್ಯಕ್ತಿ. ಅವರ ಬದುಕು ಅನೇಕ ಸಾಹಸಗಳ ಮತ್ತು ಅದರ ಯಶಸ್ಸಿನ ದಾಖಲೆಯಾಗಿದೆ. ಅವರ ಸದಾ ಕಾಲದ ನಗುಮುಖವೇ ದೊಡ್ಡ ಸ್ಫೂರ್ತಿ ಮತ್ತು ಪ್ರಯತ್ನಶೀಲತೆಗೆ ಪ್ರೇರಣೆ ನೀಡುವಂತಹುದು.

ದೇವರು ಎಲ್ಲಾ ಆದರ್ಶಗಳನ್ನು ನನ್ನ ತಾಯಿಗೆ ಕೊಟ್ಟು ಬಿಟ್ಟಿದ್ದಾನೆ. ಅವರು ನಮಗಾಗಿ ಬಹಳಷ್ಟು ತ್ಯಾಗ ಮಾಡಿದ್ದಾರೆ. ತಮ್ಮ ಪೂರ್ಣ ಬದುಕನ್ನು ಸಮಾಜ ಮತ್ತು ಕುಟುಂಬಕ್ಕೆ ಅರ್ಪಿಸಿರುವ ತಂದೆ-ತಾಯಿಗಳ ಬಗ್ಗೆ ನನಗೆ ಹೆಮ್ಮೆಯಿದೆ. ಜೊತೆಗೆ ಪೂಜ್ಯ ಭಾವನೆಯಿದೆ. ಅಮ್ಮ ನಮಗೆ ಅಪ್ಪಾಜಿ ಎಂದರೆ ದೇವತಾಶಕ್ತಿಯಿರುವ ಸತ್ಪುರುಷರು ಎನ್ನುವ ಭಾವನೆ ಬಿತ್ತಿದ್ದರು. ಆಗ ಅವರ ಮಾತು ಅರ್ಥವಾಗಿರಲಿಲ್ಲ. ಈಗ ಆ ಮಾತಿನ ನಿಜವಾದ ಅರ್ಥ ತಿಳಿಯುತ್ತಿದೆ. ಅವರ ಆದರ್ಶ ನಡೆ, ನುಡಿಗಳನ್ನು ಶ್ರೀದೇವಿ ಶಿಕ್ಷಣ ಸಂಸ್ಥೆ ತನ್ನ ಆದರ್ಶವೆಂದು ಭಾವಿಸುತ್ತದೆ.

ಅಪ್ಪಾಜಿ ತಮ್ಮ 75ನೆಯ ವರ್ಷದ ಶುಭ ಸಂದರ್ಭದಲ್ಲಿ ತಮ್ಮ ಬದುಕಿನ ಘಟನೆಗಳನ್ನು ದಾಖಲು ಮಾಡುವ ಸ್ತುತ್ಯರ್ಹ ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಶ್ರೀ ದುರ್ಗಾಂಬಿಕಾದೇವಿ ಮತ್ತು ಶ್ರೀ ಶಂಭುಲಿಂಗೇಶ್ವರಸ್ವಾಮಿ ಇಂತಹ ಪೂಜ್ಯರಿಗೆ ಆಯುರಾರೋಗ್ಯ ಭಾಗ್ಯ ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ.

# ಇಂತಹ ಸೌಜನ್ಯಮೂರ್ತಿ ಕಾಣುವುದು ಅಪರೂಪ



■ ಎಂ.ಕೆ.ಶಿವಶಂಕರ್
ಮಾಜಿ ಅಧ್ಯಕ್ಷರು,
ದೊಡ್ಡಮರಳವಾಡಿ ಗ್ರಾಮ ಪಂಚಾಯಿತಿ,
ಹಾರೋಹಳ್ಳಿ ತಾಲ್ಲೂಕು

ನನ್ನ ಮಟ್ಟಿಗೆ ಹೇಳುವುದಾದರೆ, ಡಾ.ಎಂ.ಆರ್.ಹುಲಿನಾಯ್ಕರ್ ಅವರಂತಹ ಸೌಜನ್ಯಮೂರ್ತಿಗಳನ್ನು ಕಾಣುವುದು ಅಪರೂಪ ಎಂದೇ ಹೇಳಬಹುದು. ಅವರಲ್ಲಿ ಎಳ್ಳಷ್ಟೂ ಅಹಂಕಾರವಿಲ್ಲ. ಅವರನ್ನು ಶ್ರೀದೇವಿ ಸಂಸ್ಥೆಯಿಂದ ಹೊರಗೆ ನೋಡಿದರೆ 'ಸಾಮಾನ್ಯ ವೈದ್ಯರು' ಎಂದುಕೊಳ್ಳುತ್ತಾರೆ. ಅವರೊಬ್ಬ ಖ್ಯಾತ ಸರ್ಜನ್, ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರು. ವಿಧಾನ ಪರಿಷತ್ತಿನ ಮಾಜಿ ಸದಸ್ಯರು. ಅನೇಕ ಅವಧೂತರ ಸಂಪರ್ಕವಿರುವ ಅಧ್ಯಾತ್ಮಜೀವಿಗಳು.

ಸಿದ್ಧಗಂಗೆಯ ಪೀಠಾಧ್ಯಕ್ಷರಾಗಿದ್ದ ಪರಮ ಪೂಜ್ಯ ಡಾ.ಶಿವಕುಮಾರ ಸ್ವಾಮಿಗಳ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಡಾ.ಎಂ.ಆರ್.ಹುಲಿನಾಯ್ಕರ್ ಅನುಪಮ ಸೇವೆ ಸಲ್ಲಿಸಿದ್ದಾರೆ. ಕೊನೆಯ ದಿನಗಳಲ್ಲಿ ನಾನು ಸ್ವಾಮೀಜಿ ಅವರ ಆರೋಗ್ಯದ ಹೊಣೆಯನ್ನು ಹೊತ್ತಿದ್ದೆ. ಬೆಂಗಳೂರಿಗೆ ಕರೆದುಕೊಂಡು ಹೋಗುತ್ತಿದ್ದೆ. ಒಮ್ಮೆ ತುಮಕೂರಿನಲ್ಲಿ ಸ್ವಾಮೀಜಿ ಅವರಿದ್ದಾಗ ಅವರಿಗೆ ತೀವ್ರವಾದ ಉಸಿರಾಟದ ತೊಂದರೆಯಾಯಿತು. ಬೆಂಗಳೂರಿನಲ್ಲಿ ಅವರು ನೋಡುತ್ತಿದ್ದ ವೈದ್ಯರಿಗೆ ಕೇಳಿದೆವು. ಫಿಜಿಯೋಥೆರಪಿ ಪ್ರಾರಂಭಿಸಲು ಸಲಹೆ ಕೊಟ್ಟರು. ಆಮೇಲೆ ಅವರು 'ನಾವು ತಕ್ಷಣ ಬರುತ್ತೇವೆ. ನೀವು ಫಿಜಿಯೋ ಉಪಚಾರವನ್ನು ಪ್ರಾರಂಭಿಸಿ' ಎಂದರು. ಏನು ಮಾಡುವುದು ಎಂದುಕೊಳ್ಳುತ್ತಿರಬೇಕಾದರೆ ಶ್ರೀದೇವಿ ವೈದ್ಯಕೀಯ ಕಾಲೇಜಿನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಜ್ಞಾಪಕಕ್ಕೆ ಬಂದರು. ತಕ್ಷಣ ಅವರಿಗೆ ಫೋನ್ ಹಾಕಿದೆ. ಕೇವಲ ಹತ್ತು ನಿಮಿಷದಲ್ಲಿ ತಮ್ಮ ಕಾರಿನಲ್ಲಿ ಫಿಜಿಯೋಥೆರಪಿಸ್ಟ್‌ಗಳನ್ನು ಕರೆದುಕೊಂಡು ಬಂದರು. ಅವರ ಮಾರ್ಗದರ್ಶನದಲ್ಲಿ ಸ್ವಾಮೀಜಿಗೆ ಟ್ರೀಟ್‌ಮೆಂಟ್ ಪ್ರಾರಂಭವಾಯಿತು. ಎರಡು ಗಂಟೆಯ ನಂತರ ಬೆಂಗಳೂರಿನಿಂದ ವೈದ್ಯರ ತಂಡ ಬಂತು. ಅಂತಹ ಆಪತ್ಕಾಲದಲ್ಲಿ ಪೂಜ್ಯ ಸ್ವಾಮೀಜಿ ಚಿಕಿತ್ಸೆ ನೀಡಿದ ಡಾ.ಹುಲಿನಾಯ್ಕರ್ ನಿಜಕ್ಕೂ 'ಗ್ರೇಟ್'.

ಶ್ರೀದೇವಿ ಸಂಸ್ಥೆಯ ಆವರಣದಲ್ಲಿ ಡಾ.ಹುಲಿನಾಯ್ಕರ್ ದಂಪತಿ ಶ್ರೀ ದುರ್ಗಾಂಬಿಕಾದೇವಿಯ ಪ್ರತಿಷ್ಠಾಪನೆ ಮಾಡಲು ಸಂಕಲ್ಪ ಮಾಡಿದರು. ಬೆಂಗಳೂರಿನಿಂದ ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರು ಸೇರಿದಂತೆ ಅತಿಥಿಗಳನ್ನು ಕರೆತರುವ ಜವಾಬ್ದಾರಿ ನನ್ನ ಪಾಲಿಗೆ ದೊರೆಯಿತು. ಐದು ವರ್ಷ ನಿರಂತರವಾಗಿ ದೇವಿಯ ಆರಾಧನೆ ಮಾಡಿ ಶ್ರೀ ದುರ್ಗಾಂಬಿಕಾದೇವಿಯನ್ನು ಒಲಿಸಿಕೊಂಡು, ಈ ದಂಪತಿಯು ಅಲ್ಲಿ ಆಕೆಯನ್ನು ನೆಲೆಗೊಳಿಸಿದ್ದಾರೆ. ಇದರಿಂದಾಗಿ ಅವರ ಬದುಕು ಸಾರ್ಥಕವಾಗಿದೆ ಎನ್ನುವುದು ನನ್ನ ಭಾವನೆ.

ಮಿತ್ರರಾದ ಕಮಲೇಶ್ ಅವರ ತಾಯಿ ದಿವಂಗತ ಸರೋಜಮ್ಮ ಅವರಿಗೆ ಡಾ.ಹುಲಿನಾಯ್ಕರ್ ವಿಚಾರದಲ್ಲಿ ಅಗಾಧವಾದ ಪ್ರೇಮ. ಅವರ ಮಗ ಶ್ರೀ ಕಮಲೇಶ್ ಮತ್ತು ಅವರ ಮಡದಿ ಶ್ರೀಮತಿ ಭಾರತಿ ಅವರಿಗೂ ಡಾ.ಹುಲಿನಾಯ್ಕರ್ ದಂಪತಿಯ ವಿಚಾರದಲ್ಲಿ ಪೂಜ್ಯ ಭಾವನೆಯಿದೆ. ಅಮೆರಿಕದಲ್ಲಿರುವ ಕಮಲೇಶರ ಮಗಳು ಶಾಶ್ವತಿ, ಅಳಿಯ ಗುರುಮೂರ್ತಿ ಅವರೂ ಹುಲಿನಾಯ್ಕರ್ ದಂಪತಿಯಲ್ಲಿ ಪೂಜ್ಯ ಭಾವನೆ ಹೊಂದಿದ್ದಾರೆ. ಅವರಿಂದ ನನಗೆ ಡಾ. ಹುಲಿನಾಯ್ಕರ್ ಕುಟುಂಬದ ಸಂಪರ್ಕ ಬಂತು. ಇದು ನನ್ನ ಬಾಳಿನ ಅದೃಷ್ಟ. ದೇವಿಯ ಕೃಪೆ ಹುಲಿನಾಯ್ಕರ್ ಕುಟುಂಬಕ್ಕೆ ನಿರಂತರವಾಗಿರಲಿ ಎನ್ನುವುದು ನನ್ನ ಪ್ರಾರ್ಥನೆ.

# ಸಿಬ್ಬಂದಿಯಲ್ಲಿನ ಭಾವೈಕ್ಯತೆಗೆ ಕಾರಣೀಭೂತರು



■ ಎಂ.ಎಸ್.ಪಾಟೀಲ್
ನಿರ್ದೇಶಕರು,
ಮಾನವ ಸಂಪನ್ಮೂಲ ವಿಭಾಗ,
ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳು

ನನ್ನ ಮತ್ತು ಅಪ್ಪಾಜಿಯವರ ಕೊನೆಯ ಮಗಳು ಅಂಬಿಕಾರವರ ಮದುವೆ 2011ರಲ್ಲಿ ನೆರವೇರಿತು. ನಾನು ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಇನ್ಫೋಸಿಸ್ ಕಂಪೆನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆನು. ನಾವಿಬ್ಬರು ಆಗ ಬೆಂಗಳೂರಿನಲ್ಲಿ ನೆಲೆಸಿದ್ದೆವು. ಅಂಬಿಕಾರವರು ಮೊದಲಿನಿಂದಲೂ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ಫೈನಾನ್ಸ್ ಮತ್ತು ಅಕೌಂಟ್ ವಿಭಾಗಗಳನ್ನು ನೋಡಿಕೊಳ್ಳುತ್ತಿದ್ದರು. ಮದುವೆಯಾದ ನಂತರವೂ ತುಮಕೂರಿಗೆ ಬಂದು ಕಾರ್ಯ ನಿರ್ವಹಿಸುತ್ತಿದ್ದರು. ನಾನು ಹುಬ್ಬಳ್ಳಿಯ ಗೋಪನಕೊಪ್ಪ ಬಡಾವಣೆಯಲ್ಲಿ ಹುಟ್ಟಿ ಬೆಳೆದಿದ್ದು, ನಮ್ಮ ಕಡೆ ಡಾಕ್ಟರ್ ಹುಲಿನಾಯ್ಕರ್, ಅಂದರೆ ಅಪ್ಪಾಜಿ ದಂತಕಥೆ ಎನಿಸಿದ್ದರು. ಹುಬ್ಬಳ್ಳಿಯ KMC ಮೆಡಿಕಲ್ ಕಾಲೇಜಿನಲ್ಲಿ MBBS ಮತ್ತು ಒಖಗಳನ್ನು ಮಾಡಿ ತುಮಕೂರಿನಲ್ಲಿ ಶ್ರೀದೇವಿ ಆಸ್ಪತ್ರೆಯನ್ನು ನಿರ್ಮಿಸಿ ಇಲ್ಲಿನವರಿಗೂ ಚಿಕಿತ್ಸೆ ನೀಡುತ್ತಿರುವ ಉದಾರಿಗಳೆಂದು ಅನೇಕರು ಹೇಳುತ್ತಿರುತ್ತಾರೆ. 1987ರಿಂದಲೂ ನವಲಗುಂದ ತಾಲೂಕಿನಿಂದ ತುಮಕೂರಿನ ಶ್ರೀದೇವಿ ನರ್ಸಿಂಗ್ ಹೋಂಗೆ ಹೋಗಿ ಚಿಕಿತೆ ಪಡೆದು ಹಿಂದಿರುಗಿದ ಸಂಗತಿಗಳನ್ನು ಅನೇಕರು ಹೇಳುತ್ತಿದ್ದರು.

ಅಪ್ಪಾಜಿ, ಎಲ್ಲರನ್ನೂ ತುಂಬಾ ಪ್ರೀತಿಯಿಂದ ಕಾಣುತ್ತಾರೆ. ಕಷ್ಟ ಎಂದು ಬಂದವರಿಗೆ ಬರಿಗೈಯಲ್ಲಿ ಎಂದು ಕಳುಹಿಸಿಲ್ಲ. ಅನೇಕ ಸಂಬಂಧಿಕರು ಊರಿನಿಂದ ಚಿಕಿತ್ಸೆಗಾಗಿ ಬಂದವರನ್ನು ಆರು ತಿಂಗಳಿಂದ ಒಂದುವರ್ಷದವರೆಗೆ ಮನೆಯಲ್ಲೇ ಇರಿಸಿಕೊಂಡು ಚಿಕಿತ್ಸೆ ನೀಡಿ ಗುಣಪಡಿಸಿ ಕಳಿಸಿದ್ದಾರೆ. ಸಂಬಂಧಿಕರಷ್ಟೇ ಅಲ್ಲದೇ, ಆ ಭಾಗದ ಸ್ವಾಮೀಜಿಗಳನ್ನು ಸಹ ತಮ್ಮ ಮನೆಯಲ್ಲಿಯೇ ಇರಿಸಿಕೊಂಡು ತುಂಬಾ ದಿನಗಳ ಕಾಲ ಚಿಕಿತ್ಸೆ ನೀಡಿದ ನಿದರ್ಶನಗಳಿವೆ. ಅಮ್ಮನವರು ಮತ್ತು ಮಕ್ಕಳು ಎಲ್ಲರೂ ಈ ಕಾರ್ಯದಲ್ಲಿ ಕೈಜೋಡಿಸಿ ಹಸಿದು ಬಂದವರಿಗೆ ಅನ್ನ ಕೊಟ್ಟು ಆರೋಗ್ಯ ಆರೈಕೆ ಕೊಟ್ಟು ಸೇವೆಯನ್ನು ಮಾಡಿದ್ದಾರೆ.

2013ರಲ್ಲಿ ಶ್ರೀದೇವಿ ವಿದ್ಯಾಸಂಸ್ಥೆಗೆ ಮೆಡಿಕಲ್ ಕಾಲೇಜು ಮಂಜೂರಾಯಿತು. ಅಪ್ಪಾಜಿಯವರು "ನೀವಿಬ್ಬರೂ ಇಲ್ಲಿಗೆ ಬಂದುಬಿಡಿ" ಎಂಬ ಸಲಹೆ ಕೊಟ್ಟರು. 2014ರಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗಕ್ಕೆ ನಿರ್ದೇಶಕನಾಗಿ ನಾನು ಬಂದೆ.

ಅಪ್ಪಾಜಿ ಜೊತೆ ಕೆಲಸ ಮಾಡುತ್ತಿದ್ದರೇ ಅದೊಂದು ಸೌಭಾಗ್ಯ. ಯಾವುದೇ ಕೆಲಸವಾಗಬಹುದು ಅವರು ಅದರ ಬಗ್ಗೆ ಮನನ ಮಾಡಿಕೊಂಡು ಪರಿಣಿತರ ಅಭಿಪ್ರಾಯ ಪಡೆದುಕೊಳ್ಳುತ್ತಿದ್ದರು. ಮೀಟಿಂಗ್‌ಗಳಲ್ಲಿ ಯಾರ ಮೇಲೂ ತಮ್ಮ ನಿರ್ಧಾರಗಳನ್ನು ಹೇರುವುದಿಲ್ಲ. ಎಲ್ಲರನ್ನೂ ಕೂಡಿಸಿಕೊಂಡು ಅಭಿಪ್ರಾಯ ವಿನಿಮಯ ಮಾಡಿಕೊಳ್ಳುತ್ತಾರೆ. ಎಲ್ಲರಿಗೂ ತಮ್ಮ ಅಭಿಪ್ರಾಯ ಹೇಳಲು ಅವಕಾಶ ಮಾಡಿಕೊಡುತ್ತಾರೆ. ಅಲ್ಲಿ ವ್ಯಕ್ತಿಗೆ ಪ್ರಾಮುಖ್ಯತೆ ಇಲ್ಲ, ಸಂಸ್ಥೆಗೆ ಅವರ ಅಭಿಪ್ರಾಯದಿಂದಾಗುವ ಅನುಕೂಲ ಮುಖ್ಯವಾಗಿರುತ್ತದೆ.

2015–16 ಮತ್ತು 2017–18ರ ಶೈಕ್ಷಣಿಕ ವರ್ಷಗಳಲ್ಲಿ ನಮ್ಮ ಮೆಡಿಕಲ್ ಕಾಲೇಜ್ ಪ್ರವೇಶಕ್ಕೆ ತುಂಬಾ ತೊಂದರೆಯಾಯಿತು. ಒಂದು ವರ್ಷ ತಾಂತ್ರಿಕ ಕಾರಣದಿಂದ ಎಂಜಿನಿಯರಿಂಗ್ ಕಾಲೇಜು ಪ್ರವೇಶಕ್ಕೂ ತೊಂದರೆ ಆಯಿತು. ಈ ಸ್ಥಿತಿಯನ್ನು ನಾವು ಯಾರು ನಿರೀಕ್ಷೆ ಮಾಡಿರಲಿಲ್ಲ. ಬ್ಯಾಂಕ್‌ಗಳಿಗೆ ಕಂತು ಪಾವತಿ ಮಾಡಬೇಕಿತ್ತು. ಸಿಬ್ಬಂದಿಗಳಿಗೆ ಸಂಬಳ ಸಾರಿಗೆ ನೀಡಬೇಕಿತ್ತು. ಇರುವ ಸಿಬ್ಬಂದಿಗಳನ್ನು ಉಳಿಸಿಕೊಳ್ಳುವ ಮತ್ತು ಅನೇಕ ಹೊಸ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲೇ ಬೇಕಾದ ಕ್ಲಿಷ್ಟಕರ ಸನ್ನಿವೇಶ ಎದುರಾಗಿತ್ತು. ಸಿಬ್ಬಂದಿಗಳಿಗೆ 3 ರಿಂದ 6 ತಿಂಗಳಿನವರೆಗೂ ಸಂಬಳ ನೀಡಲು ಕಷ್ಟವಾಗಿತ್ತು. ತುಂಬಾ ಜನರು ಸಂಸ್ಥೆಯನ್ನು ತೊರೆಯುವ ನಿರ್ಧಾರ ಮಾಡಿದರು ಮತ್ತು ಬ್ಯಾಂಕಿನವರು ನಮ್ಮ ಮೇಲೆ ಒತ್ತಡ ತಂದರು. ಅಂಬಿಕಾರವರು ಶ್ರೀದೇವಿ ಸಂಸ್ಥೆಯ ಹಣಕಾಸಿನ ಮುಖ್ಯಸ್ಥರಾಗಿ ಎದುರಿಸಿದ ದೊಡ್ಡ ಸವಾಲು ಇದಾಗಿತ್ತು. ದೊಡ್ಡ ಪರ್ವತ ತಲೆ ಮೇಲೆ ಬಿದ್ದ ಹಾಗಾಯಿತು.

ಸಂಸ್ಥೆಯ ಪರಿಸ್ಥಿತಿ ನಮಗಿಂತ ಅಪ್ಪಾಜಿ ಅವರಿಗೆ ಚೆನ್ನಾಗಿ ಗೊತ್ತಿತ್ತು. ಈ ಸಂಕಷ್ಟ ಕಂಡಾಗ ಎಲ್ಲಡೆ ಕಗ್ಗತ್ತಲು ತುಂಬಿದೆ, ಬೆಳಕಿನ ಕಿಂಡಿ ಕಾಣುತ್ತಿಲ್ಲ ಎಂದುಕೊಳ್ಳುತ್ತಿದ್ದೆವು. ಪ್ರತಿಯೊಬ್ಬರಲ್ಲೂ ದುಗುಡ ಆತಂಕ ಮನೆ ಮಾಡಿತ್ತು. ಅಪ್ಪಾಜಿ ನಮ್ಮನ್ನು ಮತಷ್ಟು ಹತ್ತಿರಕ್ಕೆ ಕರೆದುಕೊಂಡರು ಅನೇಕ ಸಭೆಗಳನ್ನು ಮಾಡಿದವು. ಬ್ಯಾಂಕ್ ಮೊದಲಾದ ಹಣಕಾಸು ಸಂಸ್ಥೆಗಳನ್ನು ಸಂಪರ್ಕ ಮಾಡಿದವು. ವ್ಯಕ್ತಿಗಳನ್ನು ನೋಡಿದೆವು. ಅಂಬಿಕಾ ಎಡೆಬಿಡದೆ ಹಣಕಾಸು ಸಂಸ್ಥೆಗಳಿಗೆ ಪ್ರಾಜೆಕ್ಟ್ ರಿಪೋರ್ಟ್ ಸಲ್ಲಿಸಿದರು. ಅವರು ಪ್ರತಿ ದಿನವೂ ದಣಿವರಿಯದೆ, ಎಡೆಬಿಡದೆ ಬೆಂಗಳೂರಲ್ಲದೇ ದೆಹಲಿ, ಚೆನ್ನೈ, ಮುಂಬೈಗಳಂತಹ ನಗರಗಳನ್ನು ಸುತ್ತಿ ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳನ್ನು ಸಂಪರ್ಕಿಸಿದ್ದರು.

ಅಂತಹ ಸಂದರ್ಭದಲ್ಲಿ ನಮಗೆಲ್ಲ ಅಪ್ಪಾಜಿ "ಹೆದರುವ ಅಗತ್ಯವಿಲ್ಲ ಬದುಕು ಗ್ರಾಫ್ ಇದ್ದಂತೆ. ಗೆರೆ ಮೇಲಕ್ಕೆ ಕೆಳಕ್ಕೆ ಹೋಗುತ್ತದೆ. ನಿಮ್ಮ ಕೆಲಸಗಳನ್ನು ಶ್ರದ್ದೆಯಿಂದ ಪ್ರಾಮಾಣಿಕವಾಗಿ ಮಾಡಿರಿ, ದೇವರ ಮೇಲೆ ಭಕ್ತಿ ಇಟ್ಟು ಮುಂದೆ ಹೋಗಿ" ಎನ್ನುತ್ತಿದ್ದರು.

ಆ ಸಂದರ್ಭದಲ್ಲಿಯೂ ಅಪ್ಪಾಜಿಯವರು ಇಡೀ ಸಂಸ್ಥೆಯ ಚೈತನ್ಯ ಶಕ್ತಿಯಾಗಿ ಹೊಮ್ಮಿದ್ದರು. ಅವರು ಎಂದಿಗೂ ಎದೆಗುಂದದೆ ಸದಾ ಹಸನ್ಮುಖಿಯಾಗಿ ನಮಗೆಲ್ಲರಿಗೂ ಧೈರ್ಯ ಹೇಳುತ್ತಿದ್ದರು. ಅವರ ಮನಸ್ಸಿನಲ್ಲಿ ಎಂತಹ ಹೊಯ್ದಾಟವಿತ್ತು ಎಂಬುದು ನಮಗೆ ತಿಳಿಯುತ್ತಿತ್ತು.

ಅಪ್ಪಾಜಿ ಹೇಳಿದಂತಹ ಕಷ್ಟದ ದಿನಗಳು ಮಾಯವಾಗಿ ಸಹಜ ಉಸಿರಾಟದ ದಿನಗಳು ಬಂದವು. ಈಗ ಆ ದಿನಗಳನ್ನು ನೆನೆದರೆ, ನಮ್ಮನ್ನೆಲ್ಲ ಒಂದುಗೂಡಿಸಿದ ಅಪ್ಪಾಜಿ ಮತ್ತು ಅಮ್ಮ ಅವರನ್ನು ಮರೆಯುವಂತಿಲ್ಲ. ಯಾವುದೇ ಸಿಬ್ಬಂದಿ ತಪ್ಪು ಮಾಡಿದರೆ – "ಅವರ ಮೇಲೆ ಕ್ರಮ ಜರುಗಿಸುವ ಮುನ್ನ ಅವರ ಕುಟುಂಬದ ಬಗ್ಗೆ ಒಮ್ಮೆ ಯೋಚಿಸಿ ಆಮೇಲೆ ನಿರ್ಧಾರ ತೆಗೆದುಕೊಳ್ಳಿ" ಎಂದು ಹೇಳುತ್ತಾರೆ. ಸುಮಾರು ಎರಡು ಸಾವಿರ ಸಿಬ್ಬಂದಿಗಳು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾರೆ. ಎಲ್ಲರ ಅಭಿವೃದ್ಧಿಗೂ ಅಪ್ಪಾಜಿಯವರೇ ಪ್ರೇರಣೆ.

▶▶ 11ನೇ ಪುಟಕ್ಕೆ...

# ದೂರದೃಷ್ಟಿಯ ವ್ಯಕ್ತಿತ್ವ



■ ಡಾ. ಗಂಗಾಧರ ಕೊಡ್ಲಿಯವರ
ತುಮಕೂರು

ಡಾ. ಎಂ. ಆರ್. ಹುಲಿನಾಯ್ಕರ್ ಅವರೊಡನೆ ಮೂರೂವರೆ ದಶಕಗಳ ಒಡನಾಟ ನನ್ನದು. ನಮ್ಮ ಬದುಕಿನಲ್ಲಿ ಚಿಂತನ ಮಂಥನದ ಜೊತೆಗೆ ಅನೇಕ ಕಾಲಘಟ್ಟಗಳಲ್ಲಿ ಜೊತೆ ಜೊತೆಯಾಗಿ ನಾವು ಸಾಗಿದ್ದೇವೆ. ಆ ಪಯಣದಲ್ಲಿ ಸಾಕಷ್ಟು ಫಲಗಳು ದೊರಕಿವೆ. ಅದರಲ್ಲಿ ಪ್ರಮುಖವಾಗಿರುವುದು ಜೀವನಾನುಭವ. ಅದು ಬದುಕಿನ ಮೀಮಾಂಸೆಯೂ ಹೌದು.

ವೃತ್ತಿಯಲ್ಲಿ ವೈದ್ಯರಾಗಿ, ಶಸ್ತ್ರಚಿಕಿತ್ಸಕರಾಗಿ ಅವರು ಮಾಡಿದ ಸೇವೆ ಹಾಗೂ ಸಾಧನೆಗಳು ಅಪಾರ. ಈ ಸಾಧನೆಗಳ ಮಾಹಿತಿಗಳ ಅನಾವರಣ ಇನ್ನೂ ಆಗಬೇಕಿದೆ. ಡಾ. ಎಂ.ಆರ್. ಹುಲಿನಾಯ್ಕರ್ ಅವರು ಮಿತಭಾಷಿಗಳು. ಮಿಗಿಲಾಗಿ ಮಹತ್ವದ್ದನ್ನು ಸಾಧಿಸಬೇಕು ಎನ್ನುವ ತವಕ ಉಳ್ಳವರು. ತಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಇತರರ ಆಲೋಚನೆಗಳನ್ನು ಕೇಳುವ, ಸ್ವೀಕರಿಸುವ ವಿಶಾಲ ಮನೋಭಾವವುಳ್ಳವರು.

ಕೇವಲ ವೃತ್ತಿಯನ್ನಷ್ಟೇ ಸ್ವೀಕರಿಸಿದವ ಸಾಮಾನ್ಯ ವ್ಯಕ್ತಿಯಾಗುತ್ತಾನೆ. ವೃತ್ತಿಯ ಜೊತೆ ಪ್ರವೃತ್ತಿಗೆ ಮಹತ್ವ ಕೊಡುವವನು ಸಾಧಕನಾಗುತ್ತಾನೆ. ಅಂತಹವರಲ್ಲಿ ತಾನು ಸದಾ ಕ್ರಿಯಾಶೀಲನಾಗಿರಬೇಕು ಎಂಬ ತುಡಿತವಿರುತ್ತದೆ. ಸಮಾಜ ನನಗೇನು ಮಾಡಿದೆ ಎಂಬುದಕ್ಕಿಂತ, ಸಮಾಜಕ್ಕೆ ನಾನೇನು ಮಾಡಿದ್ದೇನೆ ಎಂಬ ಚಿಂತನೆ ಅವನಲ್ಲಿರುತ್ತದೆ. ಇಂತಹ ಚಿಂತನೆಗಳಿಗೆ ತಮ್ಮನ್ನು ತೆರೆದುಕೊಂಡವರು ಡಾ. ಎಂ.ಆರ್. ಹುಲಿನಾಯ್ಕರ್ ಅವರು. ಕಷ್ಟಗಳನ್ನೇ ಸವಾಲಾಗಿ ಸ್ವೀಕರಿಸಿ ಜಯಶಾಲಿಯಾದವರು. ಅವರು ಕಡು–ಕಷ್ಟದ ಬೆಂಕಿಯಲ್ಲಿ ಅರಳಿದ ಹೂ ಎಂದರೆ ತಪ್ಪಾಗಲಾರದು.

ಅವರ ಪ್ರವೃತ್ತಿ ಒಂದು ಕ್ಷೇತ್ರಕ್ಕೆ ಸೀಮಿತವಾಗಿರದೆ, ಶಿಕ್ಷಣ, ರಾಜಕೀಯ, ಸಮಾಜಸೇವೆ, ಧಾರ್ಮಿಕ ಮತ್ತು ಅಧ್ಯಾತ್ಮ ಕ್ಷೇತ್ರಗಳನ್ನೊಳಗೊಂಡು ವಿಶಾಲ ವ್ಯಾಪ್ತಿ ಅವರ ಬದುಕಿಗಿದೆ. ಮಾತು ಸಾಧನೆಯಾಗಬಾರದು, ಸಾಧನೆ ಮಾತಾಗಬೇಕು ಎನ್ನುವುದು ಮನವರಿಕೆಯಾಗಿರುವುದು ಅವರ ಸಾಧನೆಗೆ ಪೂರಕವಾಗಿದೆ.

ಡಾ. ಎಂ. ಆರ್. ಹುಲಿನಾಯ್ಕರ್ ಅವರ 75ನೇ ವರುಷದ ವಸಂತದ ಹೊತ್ತಿನಲ್ಲಿ ಡಾ. ಕೆ.ಆರ್. ಕಮಲೇಶರವರ ನಿರೂಪಣೆಯಲ್ಲಿ ಡಾ. ಎಂ.ಆರ್. ಹುಲಿನಾಯ್ಕರ ಅವರ ಆತ್ಮಕಥನ "ಅಂತರಂಗದ ಅವಲೋಕನ" ಗ್ರಂಥ ಲೋಕಾರ್ಪಣೆಯಾಗುತ್ತಿರುವುದು ಸ್ವಾಗತಾರ್ಹ ವಿಚಾರ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಅವರ ಆತ್ಮಕಥನ ಸಮಾಜಕ್ಕೆ ಪ್ರೇರಣೆ ನೀಡಲಿ. ಓದುಗರು ಖಂಡಿತ ಈ ಗ್ರಂಥವನ್ನು ಸ್ವಾಗತಿಸುತ್ತಾರೆ ಎಂಬ ನಂಬಿಕೆ ನನ್ನಲ್ಲಿದೆ.

ಡಾ.ಎಂ.ಆರ್. ಹುಲಿನಾಯ್ಕರ್ ಅವರ ಸೇವಾ ಕಾರ್ಯಗಳನ್ನು ಗುರುತಿಸಿ ಅಮೃತ ಮಹೋತ್ಸವ ಸಮಿತಿಯವರು ಹುಲಿನಾಯ್ಕರ್ ದಂಪತಿಗೆ ಸನ್ಮಾನ ಮಾಡುತ್ತಿರುವುದು ಕೂಡ ಸಂತೋಷದ ಸಂಗತಿ. ಸಮಾರಂಭ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.


# ಯಶಸ್ಸಿಗೆ ಅರ್ಪಣಾ ಮನೋಭಾವದ ದುಡಿಮೆ ಅಗತ್ಯ

## ಡಾ.ಎಂ.ಆರ್.ಹುಲಿನಾಯ್ಕರ್ ಅವರ 'ಅಂತರಂಗದ ಅವಲೋಕನ' ಗ್ರಂಥದ 'ಸಾಹಸಶೀಲತೆಗೆ ದೊರೆತ ಮನ್ನಣೆ' ಅಧ್ಯಾಯದಿಂದ ಆಯ್ದ ಭಾಗ

ವೈದ್ಯಕೀಯಶಾಸ್ತ್ರವು ಪಠ್ಯಜ್ಞಾನಕ್ಕಿಂತ ಆಸಕ್ತಿ ಮತ್ತು ಅರ್ಪಣಾ ಮನೋಭಾವದ ದುಡಿಮೆಗೆ ಒಲಿದ ವಿದ್ಯೆ ಎಂದರೆ ತಪ್ಪಿಲ್ಲ. ಇದರಲ್ಲಿ ಡಿಗ್ರಿ ಪಡೆಯುವುದು ಶಿಷ್ಟಾಚಾರದ ವಿಧಿ ಮಾತ್ರ. ಪೂರ್ಣ ಯಶಸ್ಸು ನಮ್ಮ ನಮ್ಮ ದುಡಿಮೆಯ ಮೇಲೆ ನಿಂತಿರುತ್ತದೆ. ಇದಕ್ಕೊಂದು ಘಟನೆ ನೆನಪಿಗೆ ಬರುತ್ತಿದೆ.

ದಕ್ಷಿಣ ಆಫ್ರಿಕಾದ ಮೂರು ರಾಜಧಾನಿಗಳಲ್ಲಿ ಒಂದಾಗಿರುವ ಕೇಪ್‌ಟೌನ್‌ಗೆ ಸಾಕಷ್ಟು ದೂರದ ಗ್ರಾಮವೊಂದರಲ್ಲಿ ಹ್ಯಾಮಿಲ್ಟನ್(Hamilton) ಎಂಬುವವನ ಪೋಷಕರಿದ್ದರು. ಅವರು ಕಪ್ಪುವರ್ಣಕ್ಕೆ ಸೇರಿದವರು. ಆಡು, ಕುರಿಗಳನ್ನು ಮೇಯಿಸುವ ಕೃಷಿಕ ವೃತ್ತಿಯಲ್ಲಿದ್ದರು. ಹ್ಯಾಮಿಲ್ಟನ್ ಸಹ ಅದನ್ನೇ ಮಾಡುತ್ತಿದ್ದ. ಯಾವ ಶಾಲೆಗೂ ಹೋದವನಲ್ಲ. ಓದು, ಬರಹ ಅವನಿಗೆ ಅಪರಿಚಿತವಾಗಿತ್ತು. ಈ ಕುಟುಂಬದ ಯಜಮಾನನಿಗೆ ಆರೋಗ್ಯದ ಸಮಸ್ಯೆ ಕಾಣಿಸಿಕೊಂಡ ಮೇಲೆ ಅವರು ಆ ಗ್ರಾಮ ಬಿಟ್ಟು ಕೇಪ್‌ಟೌನ್‌ಗೆ ವಲಸೆ ಬಂದರು. ಶಾರೀರಿಕವಾಗಿ ಗಟ್ಟಿಮುಟ್ಟಾಗಿದ್ದ ಹ್ಯಾಮಿಲ್ಟನ್ ಕೇಪ್‌ಟೌನ್‌ನ ಮೆಡಿಕಲ್ ಯೂನಿವರ್ಸಿಟಿಯ ಕಟ್ಟಡವೊಂದರ ನಿರ್ಮಾಣದಲ್ಲಿ ಕೂಲಿಯವನಾಗಿ ಸೇರಿಕೊಂಡ. ಸುಮಾರು ವರ್ಷಗಳ ನಂತರ ಆ ಕಟ್ಟಡದ ಕಾಮಗಾರಿ ಮುಗಿಯಿತು. ಇವನ ಶಾರೀರಿಕ ದೃಢತೆ ಮತ್ತು ಕೆಲಸದಲ್ಲಿದ್ದ ಆಸಕ್ತಿಯನ್ನು ಗಮನಿಸಿದ ವಿಶ್ವವಿದ್ಯಾನಿಲಯ ಈತನಿಗೆ ವಿಶ್ವವಿದ್ಯಾನಿಲಯದ ಟೆನ್ನಿಸ್ ಕ್ರೀಡಾಂಗಣದ ತೋಟಗಾರಿಕೆ ವಿಭಾಗದಲ್ಲಿ ಕೆಲಸ ನೀಡಿತು. ಅಲ್ಲೂ ಈತ ಅದೇ ನಿಷ್ಠೆಯಿಂದ ಕೆಲಸ ಮುಂದುವರಿಸಿದ.

ಸುಮಾರು ಒಂದು ವರ್ಷದ ನಂತರ ಅದ್ಭುತ ಘಟನೆಯೊಂದು ನಡೆಯಿತು. ಈತನ ಕೆಲಸದ ವಿಚಾರದಲ್ಲಿ ಎಲ್ಲರಿಗೂ ಮೆಚ್ಚುಗೆಯಿತ್ತು. ಇದೇ ವಿಶ್ವವಿದ್ಯಾನಿಲಯದ ಸರ್ಜರಿ ವಿಭಾಗದಲ್ಲಿದ್ದ ಪ್ರೊ. ರಾಬರ್ಟ್ ಜಾಯ್ಸ್ (Robert Joyce) ಅವರು 360 ಕೋನದಲ್ಲಿ ತನ್ನ ಕತ್ತನ್ನು ತಿರುಗಿಸುವ ಜಿರಾಫೆ ಕುರಿತು ಸಂಶೋಧನೆ ಮಾಡುತ್ತಿದ್ದರು. ಆದರೆ ಮನುಷ್ಯ 360 ಡಿಗ್ರಿಯಲ್ಲಿ ಕತ್ತನ್ನು ತಿರುಗಿಸಿದರೆ ಮೂರ್ಛೆಗೊಳಗಾಗುತ್ತಾನೆ! ಜಿರಾಫೆ ಹೀಗೆ ಕತ್ತನ್ನು ತಿರುಗಿಸಿದರೂ ಮೂರ್ಛೆಗೊಳಗಾಗುವುದಿಲ್ಲ. ಅಂದರೆ ಜಿರಾಫೆ ಕತ್ತಿನ ಅನಾಟಮಿ ಹೇಗಿರುತ್ತದೆಂಬುದು ಅವರ ಸಂಶೋಧನೆಯ ವಸ್ತು. ಅದಕ್ಕೆ ಜಿರಾಫೆಯ ಕತ್ತನ್ನು ಪ್ರೊ.ರಾಬರ್ಟ್ ಜಾಯ್ಸ್ ಹೇಳಿದ ರೀತಿ ಹಿಡಿದಿಟ್ಟಿರಬೇಕಾಗಿತ್ತು. ಜಿರಾಫೆಗೆ ಅರಿವಳಿಕೆ ಕೊಟ್ಟು ಅಪರೇಷನ್ ಮಾಡುತ್ತಿದ್ದರೂ ಅದರ ಚಲನೆಯನ್ನು ಸರಿಯಾಗಿ ನೋಡಿಕೊಳ್ಳಬೇಕಾಗಿತ್ತು. ಈ ಕೆಲಸ ಮಾಡಲು ಯಾರಿದ್ದಾರೆ ಎಂದು ತಲಾಷ್ ಮಾಡುತ್ತಿರಬೇಕಾದರೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ಹ್ಯಾಮಿಲ್ಟನ್ ಅವರ ಕಣ್ಣಿಗೆ ಬಿದ್ದ. ಶಾರೀರಿಕವಾಗಿ ದೃಢನಾಗಿದ್ದ ಆತ ಸರಿಯೆಂದು ಭಾವಿಸಿದ ಪ್ರೊ.ರಾಬರ್ಟ್ ಆತನನ್ನು ಕರೆದು 'ಈ ಕೆಲಸ ಮಾಡುತ್ತೀಯಾ' ಎಂದರು. ಆತ 'ಎಸ್' ಎಂದ. ಪ್ರೊ.ರಾಬರ್ಟ್ ತಮ್ಮ ಸಂಶೋಧನೆ ಮಾಡಲು ಪ್ರಾರಂಭಿಸಿದರು. ಪ್ರತಿ ದಿನ ಜಿರಾಫೆ ಕತ್ತನ್ನು ಎಂಟು ಗಂಟೆಗಳ ಕಾಲ ಒಂದೇ ಭಂಗಿಯಲ್ಲಿ ಹಿಡಿದುಕೊಂಡು ನಿಂತಿರಬೇಕಾಗಿತ್ತು. ಡಾ.ರಾಬರ್ಟ್ ಅನೇಕ ಸಲ ವಿಶ್ರಾಂತಿ ಪಡೆಯುತ್ತಿದ್ದರು. ಜಿರಾಫೆಯನ್ನು ಹಿಡಿದಿದ್ದ ಹ್ಯಾಮಿಲ್ಟನ್‌ಗೆ ವಿಶ್ರಾಂತಿ ಇರುತ್ತಿರಲಿಲ್ಲ. ಸುಮಾರು ಮೂರು ತಿಂಗಳು ಈ ಸಂಶೋಧನೆಗಾಗಿ ಹ್ಯಾಮಿಲ್ಟನ್ ಶ್ರಮ ವಹಿಸಿದ. ಪ್ರೊ.ರಾಬರ್ಟ್ ಕೆಲಸ ಮುಗಿಯಿತು ಎಂದಾಕ್ಷಣ ಆತ ತನ್ನ ತೋಟದ ಕೆಲಸಕ್ಕೆ ಹಿಂದಿರುಗಿದ. ಹ್ಯಾಮಿಲ್ಟನ್ ಪ್ರೊ.ರಾಬರ್ಟ್ ಅವರಿಂದ ಏನನ್ನೂ ಬಯಸಲಿಲ್ಲ. ಕೆಲಸ ಮಾಡಲು ನನಗೆ ದೊರೆತ ಅವಕಾಶವೆಂದು ಆತ ಭಾವಿಸಿದ್ದ. ಪ್ರೊ. ರಾಬರ್ಟ್ ಅವರಿಗೆ ಹ್ಯಾಮಿಲ್ಟನ್‌ನ ಏಕಾಗ್ರತೆ, ಕೆಲಸ ಮಾಡಬೇಕೆಂಬ ಉತ್ಸಾಹ ಮತ್ತು ಮಾಡಿದ ಕೆಲಸದಿಂದ ಯಾವುದಾದರೊಂದು



ಹ್ಯಾಮಿಲ್ಟನ್

ರೀತಿ ಪ್ರಯೋಜನ ಪಡೆಯಲೇಬೇಕು ಎಂಬ ಮನೋಭಾವವಿಲ್ಲದಿರುವುದು ಮೆಚ್ಚುಗೆಯಾಯಿತು. ಸ್ವಲ್ಪ ದಿನವಾದ ಮೇಲೆ ಅವನನ್ನು ಪ್ರೊ. ರಾಬರ್ಟ್ ತಮ್ಮ ಸರ್ಜರಿ ವಿಭಾಗದ ಲ್ಯಾಬ್‌ನ ಸಹಾಯಕನನ್ನಾಗಿ ನೇಮಿಸಿಕೊಂಡರು. ನಂತರ ಅವನನ್ನು O.T. ಶಸ್ತ್ರಚಿಕಿತ್ಸಾ ವಿಭಾಗಕ್ಕೆ ಕಳುಹಿಸಲಾಯಿತು. 1958ರಲ್ಲಿ ಹ್ಯಾಮಿಲ್ಟನ್ ಲ್ಯಾಬ್‌ನಲ್ಲಿ ಸಹಾಯಕನಾದ.

ಅಮೆರಿಕದ ಹೆಸರಾಂತ ಹೃದ್ರೋಗತಜ್ಞರಾಗಿದ್ದ ಪ್ರೊ.ಬರ್ನಾರ್ಡ್ (Prof. Barnard) ಅವರು ಶಸ್ತ್ರಚಿಕಿತ್ಸಾವಿಭಾಗಕ್ಕೆ ಆಗಮಿಸಿದರು. ಶ್ರೇಯುತರು ಹೃದಯದ ಬೈಪಾಸ್ ಸರ್ಜರಿ ಮತ್ತು ಬದಲಿ ಹೃದಯ ಜೋಡಣೆಯ(Heart Transplant) ಶಸ್ತ್ರಚಿಕಿತ್ಸೆಯಲ್ಲಿ ವಿಶ್ವದಲ್ಲೇ ಪ್ರಸಿದ್ಧಿಯಾಗಿದ್ದರು. ಪ್ರೊ.ಬರ್ನಾರ್ಡ್ ಅವರು ಅಮೆರಿಕದಲ್ಲಿ ಖ್ಯಾತ ಹೃದ್ರೋಗತಜ್ಞರಾಗಿದ್ದರೂ ಬೈಪಾಸ್ ಸರ್ಜರಿ ಮತ್ತು ಬದಲಿ ಹೃದಯ ಜೋಡಣೆಯ ಮೊದಲ ಆಪರೇಷನ್‌ನ್ನು ಕೇಪ್‌ಟೌನ್ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲೇ ಮಾಡಿದ್ದರು. ಇಂತಹ ಆಪರೇಷನ್‌ಗಳನ್ನು ಎಲ್ಲೆಡೆ ಮಾಡಲಾಗುತ್ತಿದೆ. ಈ ವಿಚಾರದಲ್ಲಿ ಪ್ರೊ.ಬರ್ನಾರ್ಡ್ ಅವರು ಮೂಲ ಪುರುಷರಾಗಿದ್ದಾರೆ. ಅವರಿಗೆ ಹ್ಯಾಮಿಲ್ಟನ್ ಸಹಾಯಕನಾದ. ಪ್ರೊ.ಬರ್ನಾರ್ಡ್ ಪ್ರತಿದಿನ ಐವತ್ತಕ್ಕೂ ಹೆಚ್ಚಿನ ಶಸ್ತ್ರಚಿಕಿತ್ಸೆ ಮಾಡುತ್ತಿದ್ದರು. ಶಸ್ತ್ರಚಿಕಿತ್ಸೆಗೊಳಗಾದ ಎಲ್ಲ ಪೇಶೆಂಟ್‌ಗೂ ಹೊಲಿಗೆ ಹಾಕುವ ಕೆಲಸವನ್ನು ಆತನಿಗೆ ಕೊಡಲಾಯಿತು. ಈ ಕೆಲಸದಲ್ಲಿ ಆತನಿಗೆ ಎಂತಹ ಸಿದ್ಧಿ ದೊರೆತಿತ್ತೆಂದರೆ ಅವನ ಬೆರಳು ಅದಕ್ಕಾಗಿಯೇ ಮಾಡಿದ್ದವೋ ಎಂಬಷ್ಟು ಸರಾಗವಾಗಿ ಆಡುತ್ತಿದ್ದವು. ಆ ಸಂದರ್ಭದಲ್ಲಿ ಆತನಿಗೆ ಶರೀರದ ವಿವಿಧ ಭಾಗಗಳ ಪರಿಜ್ಞಾನ ಚೆನ್ನಾಗಿ ಆಯಿತು. ಆತನಿಗೆ ಶಸ್ತ್ರಚಿಕಿತ್ಸಕರಿಗೆ ಸಹಾಯಕನಾಗುವ ಕೆಲಸ ದೊರೆಯಿತು. ಹ್ಯಾಮಿಲ್ಟನ್ ಪ್ರೊ.ಬರ್ನಾರ್ಡ್ ಅವರಿಗೆ ಮಾತ್ರವಲ್ಲ, ಬೇರೆ ಶಸ್ತ್ರಚಿಕಿತ್ಸಕರಿಗೂ ಸಹಾಯಕನಾಗಿ ಕೆಲಸ ಮಾಡುತ್ತಿದ್ದ. ಎಲ್ಲ ಸರ್ಜನ್‌ಗಳು ಹ್ಯಾಮಿಲ್ಟನ್ ಬೇಕು ಎಂದೇ ಹೇಳುತ್ತಿದ್ದರು. ಲಿವರ್(Liver) ಯಕೃತ್ ಆಪರೇಷನ್ ಮಾಡಬೇಕಾದರೆ ಹ್ಯಾಮಿಲ್ಟನ್ ವಿಶೇಷವಾದ ಶುದ್ಧರಕ್ತನಾಳದ ಇರುವಿಕೆಯನ್ನು ಕಂಡುಹಿಡಿದ. ಈಗಲೂ ಲಿವರ್ ಆಪರೇಷನ್ ಮಾಡುವವರು ಹ್ಯಾಮಿಲ್ಟನ್‌ನ ಸಂಶೋಧನೆಯ ರಕ್ತನಾಳವನ್ನು ಗಮನಿಸಿ ಮುಂದುವರಿಯುತ್ತಾರೆ. ಇದಕ್ಕಾಗಿ ಆತನಿಗೆ ವಿಶ್ವವಿಖ್ಯಾತಿ ದೊರೆಯಿತು. ಹ್ಯಾಮಿಲ್ಟನ್ ಶಸ್ತ್ರಚಿಕಿತ್ಸೆಯಲ್ಲಿ ತಾನು ಪಡೆದ ಜ್ಞಾನವನ್ನು ಜೂನಿಯರ್ ಡಾಕ್ಟರ್‌ಗಳಿಗೆ ಹೇಳುತ್ತಿದ್ದ. ಇದನ್ನು ಗಮನಿಸಿದ ಪ್ರಾಧ್ಯಾಪಕರು ಆತನಿಗೆ ಬೋಧನೆ ಮಾಡಲು ಪ್ರೋತ್ಸಾಹಿಸಿದರು.

2003ರಲ್ಲಿ ಕೇಪ್‌ಟೌನ್ ಮೆಡಿಕಲ್ ಯೂನಿವರ್ಸಿಟಿಯ ಪದವಿಪ್ರದಾನ ಸಮಾರಂಭದಲ್ಲಿ ವಿಶ್ವವಿದ್ಯಾನಿಲಯದ ಮುಖ್ಯಸ್ಥರಾದ ಪ್ರೊ.ಡೇವಿಡ್ ಡೆಂಟ್(Prof. David Dent) ಅವರು "ವಿಶ್ವಕ್ಕೆ ಅನೇಕ ಶಸ್ತ್ರಚಿಕಿತ್ಸಾತಜ್ಞರನ್ನು ಕಾಣಿಕೆಯಾಗಿ ಕೊಟ್ಟ ಹ್ಯಾಮಿಲ್ಟನ್ ಅವರಿಗೆ ವಿಶ್ವವಿದ್ಯಾನಿಲಯ 'ಮಾಸ್ಟರ್ ಆಫ್ ಮೆಡಿಸಿನ್' ಪದವಿಯನ್ನು ಗೌರವಪೂರ್ವಕವಾಗಿ ಪ್ರದಾನ ಮಾಡುತ್ತಿದೆ" ಎಂದು ಹೇಳಿದ್ದರು. ಈ ಮಾತುಗಳನ್ನು ಕೇಳಿದ ತಕ್ಷಣ ಸಭಾಂಗಣದಲ್ಲಿ ನೆರೆದಿದ್ದ ಸಮಸ್ತರೂ ಎದ್ದು ನಿಂತು ಹ್ಯಾಮಿಲ್ಟನ್‌ಗೆ ಚಪ್ಪಾಳೆ ತಟ್ಟಿ ಗೌರವ ಅರ್ಪಣೆ ಮಾಡಿದರು. ಹ್ಯಾಮಿಲ್ಟನ್ ಸುಮಾರು ಐವತ್ತು ವರ್ಷ ಕೇಪ್‌ಟೌನ್‌ನ ಮೆಡಿಕಲ್ ಯೂನಿವರ್ಸಿಟಿಯೊಡನೆ ಸಂಬಂಧವಿಟ್ಟುಕೊಂಡಿದ್ದ.

ಓದು ಬರಹ ಬಾರದ ವ್ಯಕ್ತಿಯೊಬ್ಬರು ವಿಶ್ವಕ್ಕೆ ಅನೇಕ ಸರ್ಜನ್‌ಗಳನ್ನು ಕಾಣಿಕೆಯಾಗಿ ಕೊಡುವುದೆಂದರೆ ಸಾಮಾನ್ಯದ ಕೆಲಸವೇ? ಮೇಲ್ನೋಟಕ್ಕೆ ಇದು ಸರಳವೆಂದು ಕಂಡರೂ ಆಳದಲ್ಲಿ ವ್ಯಕ್ತಿಯೊಬ್ಬರ ದೃಢ ಮಾನಸಿಕ ಸಂಕಲ್ಪ, ಸಾಹಸಶೀಲತೆ, ಕರ್ತವ್ಯಪ್ರಜ್ಞೆ ಮತ್ತು ಅಂದಿನ ಪ್ರಾಧ್ಯಾಪಕರು ನೀಡಿದ ಪ್ರೋತ್ಸಾಹವನ್ನು ಸದುಪಯೋಗಪಡಿಸಿಕೊಂಡಿದ್ದಕ್ಕೆ ಇದೊಂದು ನಿದರ್ಶನದಂತೆ ಕಂಡುಬರುತ್ತದೆ.

### ಶ್ರೀದೇವಿ ನರ್ಸಿಂಗ್ ಹೋಂನಲ್ಲಿದ್ದ ಪ್ರತಾಪನ ನೆನಪು

ಇಂತಹ ಘಟನೆಗಳು ಎಲ್ಲ ದೇಶದಲ್ಲೂ ನಡೆಯಲು ಸಾಧ್ಯ. ನನ್ನ ಅನುಭವಕ್ಕೂ ಇಂತಹ ಘಟನೆ ಬಂದಿದೆ. ಯಾವುದೇ ವ್ಯಕ್ತಿ ಕೆಲಸದಲ್ಲಿ ಯಶಸ್ಸು ಪಡೆಯಲು ಆತನಿಗೆ ಶ್ರದ್ಧೆಯಿರಬೇಕು. ಶ್ರದ್ಧೆ ಹುಟ್ಟಲು ಕೆಲಸದ ಅಗತ್ಯ ವ್ಯಕ್ತಿಗಿರಬೇಕು. ಈ ಕೆಲಸದಿಂದಲೇ ತನ್ನ ಜೀವನ ನಿರ್ವಹಣೆಯಾಗುತ್ತದೆಂಬ ಭಾವನೆ ಅವನಲ್ಲಿದ್ದರೆ, ಆತ ತನ್ನೆಲ್ಲ ಶಕ್ತಿ, ಸಾಮರ್ಥ್ಯಗಳನ್ನು ತಾನು ಮಾಡುವ ಕೆಲಸದಲ್ಲಿ ವಿನಿಯೋಗಿಸುತ್ತಾನೆ. ಆತನಿಗೆ ಕೆಲಸದ ಮಹತ್ವ ತಿಳಿಯುತ್ತದೆ. ನಮ್ಮ ಪ್ರತಾಪನ ವಿಚಾರವನ್ನೇ ಇದಕ್ಕೆ ಉದಾಹರಣೆಯಾಗಿ ಹೇಳಬಹುದು.

1988ರಲ್ಲಿ ಒಂದು ದಿನ ನನ್ನ ಭಾವಮೈದುನ ವಿ.ಎಸ್.ಮರಿಸ್ವಾಮಿ ಒಮ್ಮೆ "ಭಾವಾಜಿ, ನಮ್ಮ ವಿಜಯ ಬ್ಯಾಂಕ್‌ನಲ್ಲಿ ಪ್ರತಾಪ್ ಎನ್ನುವ ಹುಡುಗನಿದ್ದಾನೆ. ಬೆಳ್ಳಾವಿ ಕಡೆಯವನು. ಗುತ್ತಿಗೆ ಆಧಾರದ ಮೇಲೆ ಆರೇಳು ವರ್ಷದಿಂದ ಕೆಲಸ ಮಾಡುತ್ತಿದ್ದಾನೆ. ಮೇಲ್ವರ್ಗದ ಲಿಂಗಾಯತ ಸಮುದಾಯದ ಈ ಹುಡುಗನಿಗೆ ನಮ್ಮ ಬ್ಯಾಂಕ್‌ನಲ್ಲಿ ಕೆಲಸ ಕಾಯಂ ಆಗುತ್ತಿಲ್ಲ. ಒಂದೆರಡು ಹುದ್ದೆಗಳು ಖಾಲಿಯಾದರೂ ಅದು ಮೀಸಲಾತಿಗೆ ಹೋಗುತ್ತಿವೆ. ಪಾಪ ಒಳ್ಳೆಯ ಹುಡುಗ, ನರ್ಸಿಂಗ್ ಹೋಮ್‌ನಲ್ಲಿ ಯಾವುದಾದರೂ ಕೆಲಸ ಕೊಡಿ" ಎಂದರು. "ಆಗಲಿ, ಅವನನ್ನು ನೋಡೋಣ ಕಳುಹಿಸು" ಎಂದೆ. ಮಾರನೆಯ ದಿನ ಬಂದ ವ್ಯಕ್ತಿಯೇ ಪ್ರತಾಪ್. ಅವನು ಎಸ್.ಎಸ್.ಎಲ್.ಸಿ.ಯನ್ನು ಕಷ್ಟಪಟ್ಟು ಮಾಡಿದ್ದ. ಈತನಿಗೆ ಏನು ಕೆಲಸ ಕೊಡುವುದು ಎಂದುಕೊಂಡು "ನೋಡಪ್ಪ ನಮ್ಮಲ್ಲಿ ವಾರ್ಡ್‌ಬಾಯ್ ಕೆಲಸವಿದೆ ಮಾಡ್ತೀಯಾ"



ಎಂ.ಆರ್.ಪ್ರತಾಪ್

ಎಂದೆ. "ಆಯ್ತು ಸಾರ್" ಎಂದ. "ಸರಿ ನಾಳೆಯಿಂದ ಬಾ" ಎಂದೆ. "ನಾಳೆ ಏಕೆ ಸಾರ್? ಇವತ್ತಿನಿಂದಲೇ ಕೆಲಸ ಮಾಡ್ತೀನಿ" ಎಂದು ಕೆಲಸ ಪ್ರಾರಂಭಿಸಿದ. ವ್ಯಕ್ತಿಗೆ ಕೆಲಸದ ಅಗತ್ಯವಿದ್ದರೆ ಆತ ಸ್ಟೇಟಸ್ ನೋಡುವುದಿಲ್ಲ. ಎರಡು-ಮೂರು ತಿಂಗಳಲ್ಲೇ ತನ್ನ ಕೆಲಸದಿಂದ ಪ್ರತಾಪ್ ಎಲ್ಲರಿಗೂ ಬೇಕಾದವನಾದ. ಒಂದು ದಿನ ಆತನನ್ನು ಕರೆದು "ಶಸ್ತ್ರಚಿಕಿತ್ಸಾ ಕೊಠಡಿ(O.T.)ಯಲ್ಲಿ ಬಸಪ್ಪ ಎನ್ನುವ ಅಟೆಂಡರ್ ಇದ್ದಾನೆ. ನೀನು ಅವನ ಜೊತೆ ಹೋಗಿ ಕೆಲಸ ಕಲಿತುಕೊ" ಎಂದೆ. ನನ್ನ ನಿರೀಕ್ಷೆಯಂತೆ ಬಸಪ್ಪ ಒಂದು ವರ್ಷದೊಳಗೆ ಕೆಲಸ ಬಿಟ್ಟ. ಪ್ರತಾಪ್ ಇಷ್ಟು ಹೊತ್ತಿಗೆ O.T.ಯಲ್ಲಿ ಕೆಲಸ ಮಾಡುವುದಕ್ಕೆ ಅರ್ಹನಾಗಿದ್ದ. ಅಲ್ಲಿಂದ ಈ ತನಕ ಅಂದರೆ ಮೂವತ್ತೆರಡು ವರ್ಷಗಳ ಕಾಲ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಕೆಲಸ ಮಾಡಿದ ಅನುಭವ ಅವನದು. ಆತ ಎಷ್ಟು ಆಪರೇಷನ್‌ಗಳಿಗೆ ಸಹಾಯಕನಾಗಿ ಕೆಲಸ ಮಾಡಿರಬಹುದು ಎಂಬುದನ್ನು ಯೋಚಿಸಿ. ಪ್ರಾರಂಭದ ದಿನಗಳಲ್ಲಿ ನಮಗೆ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಅಷ್ಟೊಂದು ಸೌಲಭ್ಯಗಳಿರುತ್ತಿರಲಿಲ್ಲ. ಒಂದೇ ಆಪರೇಷನ್ ಥಿಯೇಟರ್‌ನಲ್ಲಿ ಎರಡೆರಡು ಆಪರೇಷನ್ ಮಾಡಬೇಕಾದ ತುರ್ತು ಪ್ರಸಂಗಗಳು ಬರುತ್ತಿದ್ದವು. ಬಲಗಡೆ ಟೇಬಲ್‌ನಲ್ಲಿ ನಾನು ಹರ್ನಿಯಾ ಆಪರೇಷನ್ ಮಾಡುತ್ತಿರಬೇಕಾದರೆ, ಮತ್ತೊಬ್ಬ ವೈದ್ಯರು ಸ್ವಲ್ಪ ದೂರದಲ್ಲಿ ಎಡಗಡೆಯಿದ್ದ ಟೇಬಲ್‌ನಲ್ಲಿ ಪೈಲ್ಸ್ ಆಪರೇಷನ್ ಮಾಡುತ್ತಿದ್ದರು. ಎರಡು ಆಪರೇಷನ್‌ಗಳಿಗೆ ಬೇರೆ ಬೇರೆ ನರ್ಸ್‌ಗಳಿರುತ್ತಿದ್ದರು. ಎಲ್ಲ ಸಂದರ್ಭದಲ್ಲಿ ನಮಗಿಬ್ಬರಿಗೂ ಪ್ರತಾಪ್ ಬೇಕಾಗುತ್ತಿದ್ದ. ತುಂಬ ಜಾಣ್ಮೆಯಿಂದ ಆತ ಗೊಂದಲವಿಲ್ಲದೆ ಪರಿಸ್ಥಿತಿಯನ್ನು ನಿಭಾಯಿಸುತ್ತಿದ್ದ.

ಪ್ರತಾಪ್ ಚಟುವಟಿಕೆಯುಳ್ಳ ವ್ಯಕ್ತಿ. ಅವನನ್ನು ಕರೆದು "ಪ್ರತಾಪ್, ನಾಳೆ ಇಷ್ಟು ಆಪರೇಷನ್ ಆಗಬೇಕು ನೋಡು" ಎನ್ನುತ್ತಿದ್ದೆ. ತಕ್ಷಣ ಆತ ಅರಿವಳಿಕೆ ತಜ್ಞರಾದ ಡಾ.ರೇಣುಕಾ ಪ್ರಸಾದ್ ಅವರನ್ನು ಸಂಪರ್ಕಿಸುತ್ತಿದ್ದ. ಯಾವ್ಯಾವ



ಡಾ.ಎಂ.ಆರ್.ಹುಲಿನಾಯ್ಕರ್ ಜೊತೆಯಲ್ಲಿ ಕೆಲಸ ಮಾಡಿದ, ಮಾಡುತ್ತಿರುವ, ದೇವಿಯ ಆರಾಧನಾ ಕಾರ್ಯದಲ್ಲಿ ನಿರತರಾಗಿರುವವರು-ಎಡಗಡೆಯಿಂದ ಶ್ರೀ ಚಂದ್ರಶೇಖರ್ ಪನೇರು, ಶ್ರೀ ದುರ್ಗಾಂಬಿಕಾದೇವಿ ಅರ್ಚಕರು, ಹುಸೇನ್ ಖಾನ್(ಅಕ್ರಂ) ದೇವಾಲಯದ ಮತ್ತು ಶ್ರೀದೇವಿ ಸಂಸ್ಥೆಯ ಕಬ್ಬಿಣದ ಕೆಲಸಗಳನ್ನು ಮಾಡಿಕೊಟ್ಟಿರುವವರು, ಡಾ.ಹುಲಿನಾಯ್ಕರ್, ಶ್ರೀಮತಿ ನಜರತ್ ಉನ್ನಿಸಾ, ಶ್ರೀದೇವಿ ಆಸ್ಪತ್ರೆಯಲ್ಲಿ ಮೂವತ್ತು ಮೂರು ವರ್ಷ ಕೆಲಸ ಮಾಡಿ ನಿವೃತ್ತರಾಗಿರುವವರು, ಶ್ರೀಮತಿ ರೂಪ ನಟೇಶ್‌ವರ್ಣೆ, ಶ್ರೀದೇವಿ ಆಸ್ಪತ್ರೆ ಮತ್ತು ಶ್ರೀದೇವಿ ವಿದ್ಯಾಸಂಸ್ಥೆಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿರುವವರು ಮತ್ತು ಪ್ರತಾಪ್, ಡಾ.ಹುಲಿನಾಯ್ಕರ್ ಆಪರೇಷನ್‌ಗಳಿಗೆ O.T.ಯಲ್ಲಿ ಎರಡು ದಶಕಗಳ ಕಾಲ ಅವರ ಸಹಾಯಕರಾಗಿದ್ದವರು

ಶ್ರೀದೇವಿ ಕುಟುಂಬ

ಸಮಯದಲ್ಲಿ ಆಪರೇಷನ್ ಮಾಡಬಹುದು ಎಂದು ನಿರ್ಧರಿಸಿ ನನಗೆ ಹೇಳುತ್ತಿದ್ದ. ಡಾ.ರೇಣುಕಾಪ್ರಸಾದ್ ತುಮಕೂರು ಜನರಲ್ ಆಸ್ಪತ್ರೆಯಲ್ಲಿ ಅರಿವಳಿಕೆ ತಜ್ಞರಾಗಿದ್ದರು. ಅವರು ಬೆಳಗ್ಗೆ ಕೆಲಸಕ್ಕೆ ಹೋಗುವ ಮೊದಲೇ ನಾಲ್ಕು ಕೇಸ್ ಮುಗಿಸುವಂತೆ ಪ್ಲಾನ್ ಮಾಡುತ್ತಿದ್ದ. ನಾನು ಬೆಳಗ್ಗೆ 5.30ಕ್ಕೆ ನರ್ಸಿಂಗ್ ಹೋಮ್‌ಗೆ ಬರುವ ಹೊತ್ತಿಗೆ ಆಪರೇಷನ್‌ಗೆ ಬೇಕಾದ ಪ್ರಾಥಮಿಕ ಕೆಲಸಗಳು ಮುಗಿದಿರುತ್ತಿದ್ದವು. ಆತ ಪ್ರತಿನಿತ್ಯ ಬೆಳ್ಳಾವಿಯಿಂದ ಬರುತ್ತಿದ್ದ. ಬೆಳ್ಳಾವಿ ತುಮಕೂರಿಗೆ ಸುಮಾರು 10 ಕಿ.ಮೀ. ದೂರದಲ್ಲಿದೆ. ಬೆಳಗ್ಗೆ 6 ಗಂಟೆಗೆ ಆಪರೇಷನ್ ಎಂದರೆ ಆತ 5 ಗಂಟೆಗೆ ನರ್ಸಿಂಗ್ ಹೋಮ್‌ಗೆ ಬರಬೇಕು. ಇಲ್ಲ ರಾತ್ರಿ ನರ್ಸಿಂಗ್ ಹೋಮ್‌ನಲ್ಲೇ ಮಲಗಬೇಕು. ಎರಡನ್ನೂ ಆತ ಅನುಸರಿಸುತ್ತಿದ್ದ.

ಆಪರೇಷನ್ ಥಿಯೇಟರ್‌ನಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಸೂಕ್ಷ್ಮವಾದ ಗ್ರಹಿಕೆಯಿರಬೇಕು. ಆತ ಸೋಮಾರಿಯಾಗಿರಬಾರದು. ಮರೆವಿನ ಸ್ವಭಾವದವನಾಗಿರಬಾರದು. ಹಿಂದೆ ಹಲವು ಸಲ ಹೇಳಿಕೊಟ್ಟ ಕೆಲಸಗಳನ್ನು ಅಗತ್ಯವಿದ್ದಾಗ ನೆನಪಿಸಿಕೊಂಡು ಮಾಡುತ್ತಿರಬೇಕು. ಆಪರೇಷನ್ ಥಿಯೇಟರ್‌ನಲ್ಲಿ ಸರ್ಜನ್, ಅರಿವಳಿಕೆತಜ್ಞ, ಸಹಾಯಕರಾಗಿ ಬರುವ ವೈದ್ಯಕೀಯ ಸಿಬ್ಬಂದಿ ಮತ್ತು ನರ್ಸ್‌ಗಳಿದ್ದು, ಅವರಿಗೆ ನಿರ್ದಿಷ್ಟ ಜವಾಬ್ದಾರಿಗಳಿರುತ್ತವೆ. ಇವರ ಜೊತೆ ಡಿ.ಗ್ರೂಪ್‌ನ ಸಹಾಯಕ ಸಿಬ್ಬಂದಿಯಿತ್ತಾರೆ. ಇವರಿಗೂ ಪ್ರತ್ಯೇಕವಾದ ಹೊಣೆಗಾರಿಕೆಯಿರುತ್ತದೆ.

ಶಸ್ತ್ರಚಿಕಿತ್ಸಾತಜ್ಞರು ಇಂತಹವರಿಗೆ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಅವರ ಕೆಲಸವೇನು ಎಂಬ ಬಗ್ಗೆ ಪ್ರಾಯೋಗಿಕವಾಗಿ ತರಬೇತುಗೊಳಿಸಿರುತ್ತಾರೆ. ವಿವಿಧ ಆಪರೇಷನ್‌ಗಳಿಗೆ ಬಳಸುವ ವೈದ್ಯಕೀಯ ಉಪಕರಣಗಳು ಯಾವುವು? ಆಪರೇಷನ್ ನಂತರ ಅವುಗಳನ್ನು ಹೇಗೆ Sterilization ಮಾಡಬೇಕು. ಈ ಉಪಕರಣಗಳನ್ನು ಅನೇಕ ಹಂತದಲ್ಲಿ ಸ್ಟೆರಿಲೈಸೇಷನ್ ಅಂದರೆ ಈ ಉಪಕರಣಗಳಲ್ಲಿ ಸೂಕ್ಷ್ಮವಾಗಿರುವ ರೋಗಾಣುಗಳನ್ನು ಕೊಲ್ಲುವ ಪ್ರಕ್ರಿಯೆಗೆ ಸಾಕಷ್ಟು ತರಬೇತಿ ಅಗತ್ಯವಿರುತ್ತದೆ. ಕೆಲವು ಉಪಕರಣಗಳನ್ನು ಸ್ಪಿರಿಟ್ ಹಾಗೂ ಅದಕ್ಕೆಂದೇ ಬರುವ ಔಷಧಗಳಿಂದ ಸ್ಟೆರಿಲೈಸೇಷನ್ ಮಾಡಬೇಕಾಗಿರುತ್ತದೆ.

ಇ.ಎನ್.ಟಿ., ಕಣ್ಣು, ಹೊಟ್ಟೆ, ಕರುಳು, ಯಕೃತ್, ಗಂಟಲು, ಗರ್ಭಕೋಶ ಹಾಗೂ ಮೂಳೆಯ ಕಾಯಿಲೆಗಳ ಆಪರೇಷನ್ ಸಂದರ್ಭದಲ್ಲಿ ಅದಕ್ಕೆ ಬೇಕಾದ ವಿಶೇಷ ವೈದ್ಯಕೀಯ ಉಪಕರಣಗಳಿರುತ್ತವೆ. ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡರೆ ಐನೂರು ಉಪಕರಣಗಳಾಗಬಹುದು. ಕಣ್ಣು, ಕಿವಿ, ಗರ್ಭಕೋಶ, ಕರುಳು ಹಾಗೂ ಮೂಳೆಗೆ ಸಂಬಂಧಪಟ್ಟಂತೆ ವೈದ್ಯರು ನಾಳೆ ಆಪರೇಷನ್ ಮಾಡುತ್ತೇನೆ ಎಂದು ಸಮಯ ನಿಗದಿ ಮಾಡಿದರೆ ಪ್ರತಾಪ್ ಅಂತಹವರು ಪೂರ್ಣವಾಗಿ ಸಿದ್ಧರಾಗಿರಬೇಕು. ಅವರಿಗೆ ಒ.ಟಿ.ಯಲ್ಲಿರುವ ನರ್ಸ್‌ಗಳು ಹಾಗೂ ವೈದ್ಯರು ಮಾರ್ಗದರ್ಶನ ಮಾಡುತ್ತಾರೆ. ಅದು ಬೇರೆ ಮಾತು. ಈ ನೌಕರನಿಗೆ ಸಂಬಂಧಪಟ್ಟ ವೈದ್ಯಕೀಯ ಉಪಕರಣಗಳು ಗೊತ್ತಿಲ್ಲದಿದ್ದರೆ ಅಥವಾ ಅವುಗಳ ಹೆಸರು ಪರಿಚಿತವಾಗಿಲ್ಲದಿದ್ದರೆ ಅವರು ಏನೂ ಮಾಡಲಾಗದು. ಇವರೇ ಸ್ಟೋರ್‌ಗೆ ಹೋಗಿ ಎಲ್ಲವನ್ನೂ ತಂದು ಸ್ಟೆರಿಲೈಸ್ ಮಾಡಲು ಸಾಧ್ಯವೇ? ಉದಾಹರಣೆಗೆ ಹೇಳುವುದಾದರೆ Artery Forcepsನಲ್ಲೇ ಬೇರೆ ಬೇರೆ ವಿಧಗಳಿರುತ್ತವೆ. Straight artery, Curved 6', Right Angle artery forceps ಉಪಕರಣಗಳು ಬೇರೆ ರೀತಿಯವು, ಅದರ ಉಪಯೋಗ ಸಹ ಭಿನ್ನವಾಗಿರುತ್ತದೆ. Adson artery forceps ಉಪಕರಣದಲ್ಲೂ ಅಲ್ಪಸ್ವಲ್ಪ ಭಿನ್ನವಾದ ಹೆಸರಿದ್ದು ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಬರುವ ಹೊಸಬರಿಗೆ ಗಾಬರಿ ಹುಟ್ಟಿಸಬಹುದು. Mosquito Forceps 6' ಹೆಸರು ಚಿರಪರಿಚಿತವೆನಿಸಿದರೂ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಅದರ ಸ್ಥಾನ ಬೇರೆಯದೇ ಆಗಿರುತ್ತದೆ. Sponge holder ಹಾಗೂ Needle Holder ಗಳು ಪ್ರತ್ಯೇಕವಾದ ವೈದ್ಯಕೀಯ ಉಪಕರಣಗಳಾಗಿವೆ. ಇನ್ನು ಕತ್ತರಿಗಳಲ್ಲಿ ಸಾಕಷ್ಟು ವೈವಿಧ್ಯಗಳಿರುತ್ತವೆ. ನಾವು ಆಪರೇಷನ್ ಮಾಡುತ್ತಿರಬೇಕಾದರೆ ನಮಗೆ ಬೇಕಾದ ಉಪಕರಣಗಳನ್ನು ಕೊಡುವಂತೆ ನರ್ಸ್‌ಗಳ ಕಡೆ ನೋಡುತ್ತೇವೆ. ಯಾವ ಶಸ್ತ್ರಚಿಕಿತ್ಸಕರೂ ತಮಗೆ ಇಂತಹ ಉಪಕರಣಗಳು ಬೇಕೆಂದು ವಿಶೇಷ ಸಂದರ್ಭದಲ್ಲಿ ಹೊರತುಪಡಿಸಿ ಜೋರಾಗಿ ಕೇಳುವುದಿಲ್ಲ. ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿರುವವರಿಗೆ ಇಂತಹ ಆಪರೇಷನ್‌ಗೆ ಯಾವ್ಯಾವ ಉಪಕರಣಗಳು ಬೇಕೆಂಬುದು ಮೊದಲೇ ಗೊತ್ತಿರುತ್ತದೆ. ಅನೇಕ ಸಲ ನರ್ಸ್‌ಗಳ ಪಕ್ಕದಲ್ಲಿರುವ ಪ್ರತಾಪ್ ಆ ಕಡೆ ನೋಡುವ ಮೊದಲೇ ನಮ್ಮ ಕೈಗೆ ಆ ಉಪಕರಣ ಕೊಟ್ಟುಬಿಟ್ಟಿರುತ್ತಾನೆ. ನಮ್ಮ ಜೊತೆ ಶಸ್ತ್ರಚಿಕಿತ್ಸೆಗೆ ಸಹಾಯ ಮಾಡಲು ಎಂ.ಬಿ.ಬಿ.ಎಸ್. ಇಲ್ಲವೇ ಎಂ.ಎಸ್. ಮಾಡಿರುವ ವೈದ್ಯರಿರುತ್ತಾರೆ. ಅದೇ ರೀತಿ ನರ್ಸ್‌ಗಳು ನರ್ಸಿಂಗ್ ವಿಷಯದಲ್ಲಿ ಬಿ.ಎಸ್‌ಸಿ. ಮತ್ತು ಎಂ.ಎಸ್‌ಸಿ. ಮಾಡಿರುತ್ತಾರೆ. ಇವರಿಗೆ ಪಠ್ಯವಾಗಿ ಈ ವೈದ್ಯಕೀಯ ಉಪಕರಣಗಳ ಬಗೆಗೆ ಪಾಠ ಮಾಡಿರುತ್ತಾರೆ. ಅವರನ್ನು ಆಪರೇಷನ್ ಥಿಯೇಟರ್‌ಗೆ ಕರೆದುಕೊಂಡು ಪ್ರಾಯೋಗಿಕ ತರಬೇತಿ ಸಹ ಕೊಟ್ಟಿರುತ್ತಾರೆ. ಪ್ರತಾಪ್‌ನಂತಹವರ ವಿಚಾರ ಹಾಗಲ್ಲ. ಅವರು ನಮ್ಮಂತಹ ನರ್ಸಿಂಗ್ ಹೋಮ್‌ಗೆ ಬಂದ ಮೇಲೆ ಈ ವೈದ್ಯಕೀಯ ಉಪಕರಣಗಳ ಹೆಸರನ್ನು ಕೇಳಿರುತ್ತಾರೆ ಹಾಗೂ ನೋಡಿರುತ್ತಾರೆ. ಅವರಿಗೆ ಸರ್ಜನ್‌ಗಳು ಪ್ರಾಯೋಗಿಕವಾಗಿ ಕೆಲಸ ಕಲಿಸಿರುತ್ತಾರೆ.

ಇಂಜೆಕ್ಷನ್ ಕೊಡುವ ವಿಷಯದಲ್ಲೂ ಹೀಗೆ. ಹಿಂದೆ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಡಾಕ್ಟರ್, ನರ್ಸ್‌ಗಳು ಇಂಜೆಕ್ಷನ್ ಕೊಡುವ ರೀತಿಯನ್ನು ನೋಡಿ ಕಲಿತು ಆರೋಗ್ಯ ಸಿಬ್ಬಂದಿಯೂ ತಾವೇ ಇಂಜೆಕ್ಷನ್ ಕೊಡುವ ಡಾಕ್ಟರ್ ಆದ ಪ್ರಸಂಗಗಳಿವೆ. ಖಾಸಗಿವಲಯದ ಆಸ್ಪತ್ರೆಗಳಲ್ಲಿ ಅಂತಹುದು ನಡೆಯಲು ಸಾಧ್ಯವಿಲ್ಲ.

ಆಪರೇಷನ್‌ಗಳಲ್ಲೂ ಅನೇಕ ವಿಧಗಳಿರುತ್ತವೆ. ಎಂಡೋಸ್ಕೋಪಿ (Endoscopy), ಕೊಲೊನೊಸ್ಕೋಪಿ (Colonoscopy), ಬ್ರಾಂಕೊಸ್ಕೋಪಿ (Bronchoscopy), ಸಿಸ್ಟೋಸ್ಕೋಪಿ (Cystoscopy), ಲೆಪ್ರೊಸ್ಕೋಪಿ (Laparoscopy), ಟಾನ್ಸಿಲ್‌ಕ್ಟಮಿ (Toncillectomy), ಅಪೆಂಡಿಸೆಕ್ಟಮಿ (Appendicectomy), ಗ್ಯಾಸ್ಟ್ರೋಜಿಜುನೋಸ್ಟಮಿ (Gastrojejunostomy) ನೆಫ್ರೆಕ್ಟಮಿ (Nephrectomy) ಮುಂತಾದ ಹತ್ತಾರು ಆಪರೇಷನ್‌ಗಳನ್ನು ನರ್ಸಿಂಗ್ ಹೋಮ್‌ನಲ್ಲಿ ಪ್ರತಿನಿತ್ಯ ಮಾಡುತ್ತಿರುತ್ತೇವೆ. ಜೊತೆಗೆ ಹೃದಯ ಹಾಗೂ ಮೂತ್ರಪಿಂಡ ಸಮಸ್ಯೆಗಳಿಗೂ ಶಸ್ತ್ರಚಿಕಿತ್ಸೆ ಮಾಡುತ್ತೇವೆ.

ಇಂತಹ ಯಾವುದೇ ಆಪರೇಷನ್‌ಗಳನ್ನು ನೆನೆದಾಗ ಪ್ರತಾಪ್‌ನಂತಹ ಸಿಬ್ಬಂದಿಯ ನೆರವು ಜ್ಞಾಪಕಕ್ಕೆ ಬರುತ್ತದೆ. ಅವರಿಗೆ ಯಾವುದೇ ಪದವಿಗಳಿರುವುದಿಲ್ಲ. ಆದರೆ ಅವರ ಸಹಾಯವಿಲ್ಲದೆ ಶಸ್ತ್ರಚಿಕಿತ್ಸೆ ಮಾಡಲು ಸಾಧ್ಯವಿಲ್ಲ. ಶೈಕ್ಷಣಿಕ ಪದವಿಗಳಿಲ್ಲದಿದ್ದರೂ ಆಪರೇಷನ್ ಥಿಯೇಟರ್‌ನಲ್ಲಿ ನುರಿತ ವೈದ್ಯರು ಮತ್ತು ನರ್ಸ್‌ಗಳ ಜೊತೆ ಹಲವಾರು ವರ್ಷ ಕೆಲಸ ಮಾಡಿದ ಅನುಭವ ಅವರ ಪಾಲಿಗಿರುತ್ತದೆ. ಈ ಅನುಭವವೇ ಅವರಿಗೆ ವಿಶೇಷವಾದ ಕೌಶಲ್ಯವನ್ನು ಕಲಿಸಿರುತ್ತದೆ. ಇಂತಹ ಕೌಶಲ್ಯವನ್ನು ಕರಗತ ಮಾಡಿಕೊಳ್ಳಲು ಆ ವ್ಯಕ್ತಿಗೆ ಆಸಕ್ತಿ, ಕಲಿಕೆಯ ಗುಣ ಮತ್ತು ಅಗತ್ಯ ಮಾರ್ಗದರ್ಶನ ಬೇಕಾಗುತ್ತದೆ. ಪ್ರತಾಪ್‌ಗೆ ಅಂತಹ ಗುಣಗಳಿದ್ದವು. ಶ್ರೀದೇವಿ ಆಸ್ಪತ್ರೆಯ ಬೆಳವಣಿಗೆಯಲ್ಲಿ ಅವನಂತಹ ಅನೇಕರಿಗೆ ಪಾಲು ದೊರೆಯುತ್ತದೆ. ಇತ್ತೀಚೆಗೆ ಪ್ರತಾಪ್‌ಗೆ ರಕ್ತ ಕ್ಯಾನ್ಸರ್ ಕಾಣಿಸಿಕೊಂಡಿತು. ಅವನನ್ನು ಬೆಂಗಳೂರಿನ ದೊಡ್ಡ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸುತ್ತಿದ್ದೇನೆ. ಬೇಗ ಗುಣಮುಖನಾಗಲೆಂದು ದೇವಿಯಲ್ಲಿ ಪ್ರಾರ್ಥನೆ ಸಲ್ಲಿಸುತ್ತೇನೆ.

**(ದಿನಾಂಕ 26.10.2023ರಂದು ಬೆಳ್ಳಾವಿ ಹೋಬಳಿ ಮಾವಿನಕುಂಟೆಯಲ್ಲಿ ಎಂ.ಆರ್.ಪ್ರತಾಪ್ ನಿಧನರಾದರು.)**



**ಭಾರತ ಸರ್ಕಾರದ ಸೇವೆಯಲ್ಲಿದ್ದ ಡಾ.ಹುಲಿನಾಯ್ಕರ್ ಮಾವ ವಿ.ಷಣ್ಮುಖಪ್ಪಾಜಿ ಅತ್ತೆ ಮಾತೃಶ್ರೀ ಹನುಮಂತಮ್ಮ ಷಣ್ಮುಖಪ್ಪ**

# ನಮ್ಮ ಮನೆತನದ ಬೆಳಕು

**▪ ವಿ.ಷಣ್ಮುಖಪ್ಪ (ಅಪ್ಪಾಜಿ)**
**ಭಾರತ ಸರ್ಕಾರದ ನಿವೃತ್ತ ಅಧಿಕಾರಿ**

ನಾನು ಮೂಲತಃ ಸಂಡೂರಿನವನು. ಭಾರತ ಸರ್ಕಾರದ ಸಚಿವಾಲಯದಲ್ಲಿ ಅಧಿಕಾರಿಯಾಗಿ ದೆಹಲಿಯಲ್ಲಿದ್ದೆ. ಕರ್ನಾಟಕದಿಂದ ಆಯ್ಕೆಯಾದ ಅನೇಕ ಸಚಿವರ ವಿಶೇಷಾಧಿಕಾರಿಯಾಗಿ ಕೆಲಸ ಮಾಡಿದ್ದೇನೆ. ನಾನು ಕೇಂದ್ರ ಸರ್ಕಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ಉಪ ಸಚಿವರಾಗಿದ್ದ ಶ್ರೀ ಕೊಂಡಜ್ಜಿ ಬಸಪ್ಪ ಅವರ ಕಚೇರಿಯಲ್ಲಿದ್ದಾಗ ಒಮ್ಮೆ ಸಚಿವರ ಜೊತೆ ಉತ್ತರ ಕರ್ನಾಟಕದ ಕಡೆ ಪ್ರವಾಸ ಹೋಗಿದ್ದೆ.

ಆ ಸಂದರ್ಭದಲ್ಲಿ ಡಾ. ಆಲೂರು ಅವರು, ಡಾ.ಎಂ.ಆರ್.ಹುಲಿನಾಯ್ಕರ್ ಅವರನ್ನು ನನಗೆ ತೋರಿಸಿ 'ಇವರು ನಿಮ್ಮವರು, ಎಂ.ಬಿ.ಬಿ.ಎಸ್. ಮಾಡಿ ನವಲಗುಂದದಲ್ಲಿ ಖಾಸಗಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ' ಎಂದರು. ನಮ್ಮ ಮಗಳು ದುರ್ಗಾ ಹೊಸಪೇಟೆಯಲ್ಲಿನ ಅವರ ಅಜ್ಜಿ ಮನೆಗೆ ಬಂದಿದ್ದಳು. ಇವರಿಗೆ ತೋರಿಸಿದೆವು. ಅದೃಷ್ಟವೋ ಎಂಬಂತೆ ಇಬ್ಬರೂ ಒಪ್ಪಿದರು. 1977ರ ಮೇ ತಿಂಗಳಲ್ಲಿ ವಿವಾಹವಾಗಿ ಡಾ.ಹುಲಿನಾಯ್ಕರ್ ನಮ್ಮ ಅಳಿಯರಾದರು. ಅಲ್ಲಿಂದ ಇಲ್ಲಿಯತನಕ ಅವರು ನಮ್ಮ ಮನೆತನಕ್ಕೆ ಮಗನ ಸಮನಾಗಿ ಕೆಲಸ ಮಾಡಿದ್ದಾರೆ.

ಡಾ.ಹುಲಿನಾಯ್ಕರ್ ಅವರು ಕಷ್ಟಸಹಿಷ್ಣುಗಳು. ಅವರ ತಂದೆ, ತಾಯಿ ಮತ್ತು ಒಡಹುಟ್ಟಿದವರಿಗೆ ಬಾಲ್ಯದಿಂದಲೂ ಸಹಾಯ ಮಾಡುತ್ತಾ ಬಂದಿದ್ದಾರೆ. 1986ರಲ್ಲಿ ಸರ್ಕಾರಿ ಸೇವೆಗೆ ರಾಜೀನಾಮೆ ನೀಡಿ 'ಶ್ರೀದೇವಿ ನರ್ಸಿಂಗ್ ಹೋಂ' ಪ್ರಾರಂಭ ಮಾಡಿದರು. ನಮ್ಮ ಉಳಿದ ಮಕ್ಕಳ ಮದುವೆಗೂ ಡಾ.ಹುಲಿನಾಯ್ಕರ್ ಅವರೇ ಸಹಾಯ ಮಾಡಿದ್ದರು. ಎಲ್ಲರೂ ಕರ್ನಾಟಕದಲ್ಲಿದ್ದರು. ನನ್ನ ಮಡದಿ ಹನುಮಂತಮ್ಮ ಅವರು, ಮಕ್ಕಳು ಮತ್ತು ಮೊಮ್ಮಕ್ಕಳು ಕರ್ನಾಟಕದಲ್ಲಿರುವ ಕಾರಣ ನಾವೂ ಕರ್ನಾಟಕಕ್ಕೆ ಹೋಗೋಣ ಎಂದು ಒತ್ತಾಯ ಮಾಡಿದರು. ಹೀಗಾಗಿ ಕೇಂದ್ರ ಸರ್ಕಾರದಲ್ಲಿದ್ದ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದು ತುಮಕೂರಿಗೆ ಪತ್ನಿ ಸಮೇತ ಬಂದೆ.

ನನಗೆ ಶ್ರೀದೇವಿ ನರ್ಸಿಂಗ್ ಹೋಂನಲ್ಲಿ ಕೆಲಸ ಮಾಡಲು ಡಾ.ಹುಲಿನಾಯ್ಕರ್ ಅವಕಾಶ ಕೊಟ್ಟರು. ಅಕೌಂಟ್ಸ್ ವಿಭಾಗದ ಚಾರ್ಜ್ ತೆಗೆದುಕೊಂಡೆ. ಡಾ.ಹುಲಿನಾಯ್ಕರ್ ಅವರು ಸ್ವಭಾವತಃ ಉದಾರಿಗಳು. ಅವರಿಗೆ ಅವರು ಇವರು ಎಂಬ ಭೇದವಿಲ್ಲ. ಎಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವ ಗುಣವಿದೆ.

ನಮಗೆ ಅನೇಕ ಕಷ್ಟಗಳು ಬಂದಿವೆ. ಮಡದಿ ಹನುಮಂತಮ್ಮ ಅವರು ಕ್ಯಾನ್ಸರ್ ರೋಗಕ್ಕೆ ತುತ್ತಾದರು. ಮಗ ಮರಿಸ್ವಾಮಿ ಜೊತೆ ಮಗಳು ಶಾಂತಾದುರ್ಗಾದೇವಿ ಮತ್ತು ಅಳಿಯ ಡಾ.ಹುಲಿನಾಯ್ಕರ್ ಅವರು ಬಹಳ ಶ್ರಮವಹಿಸಿ ನನ್ನ ಮಡದಿಯನ್ನು ಕ್ಯಾನ್ಸರ್ ಕಾಯಿಲೆಯಿಂದ ಮುಕ್ತಗೊಳಿಸಿದರು. ಎರಡನೆಯ ಮಗ ಅಕಾಲಿಕವಾಗಿ ನಿಧನನಾದ. ಅಂತಹ ಸಂದರ್ಭಗಳಲ್ಲಿ ನಮ್ಮ ಜೊತೆ ಡಾ.ಹುಲಿನಾಯ್ಕರ್ ದಂಪತಿ ನಿಂತರು. ಒಮ್ಮೆ ಡಾ. ಹುಲಿನಾಯ್ಕರ್ ಅವರ ಸ್ನೇಹಕ್ಕೊಳಗಾದವರು ಎಂದೂ ಅದರಿಂದ ಹೊರಬರಲು ಇಷ್ಟಪಡುವುದಿಲ್ಲ. ಅವರ ಸ್ನೇಹದ ಸೆಳೆತ ಅಂತಹುದು. ಅವರಲ್ಲಿ ನಿರ್ಮಲವಾದ ಪ್ರೀತಿಯಿದೆ.

ಡಾ.ಹುಲಿನಾಯ್ಕರ್ ಮತ್ತು ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ಅವರ ಕುಟುಂಬ ಅಂದರೆ ನಮ್ಮ ಮೊಮ್ಮಕ್ಕಳು ನಡೆಯಲಿ. ಅದರಿಂದ ಅವರಿಗೆ ಉತ್ತಮ ಫಲಗಳು ದೊರೆಯುತ್ತವೆ. ಡಾ.ಹುಲಿನಾಯ್ಕರ್ ಕುಟುಂಬದ ಮೇಲೆ ಶ್ರೀ ದುರ್ಗಾಂಬಿಕಾದೇವಿ ಮತ್ತು ಪೂಜ್ಯ ರಮಣ ಮಹರ್ಷಿಗಳ ಆಶೀರ್ವಾದ ಸದಾ ಇರಲಿ ಎಂದು ಪ್ರಾರ್ಥಿಸುತ್ತೇನೆ.

# ಸಿಬ್ಬಂದಿಯಲ್ಲಿನ ಭಾವೈಕ್ಯತೆಗೆ ಕಾರಣೀಭೂತರು

▶▶ 9ನೇ ಪುಟದಿಂದ...

"ಸ್ವಂತಕ್ಕೆ ಏನು ಇಲ್ಲ ಎಲ್ಲವೂ ಸಮಾಜಕ್ಕೆ ಮತ್ತು ಸೇವೆಗೆ" ಎಂಬ ವೇದವಾಕ್ಯವನ್ನು ಯಾವಾಗಲೂ ನಮ್ಮೆಲ್ಲರಿಗೂ ಹೇಳುತ್ತಿರುತ್ತಾರೆ. ನಮಗೂ ಮತ್ತು ಎಲ್ಲಾ ಸಿಬ್ಬಂದಿಗಳಿಗೂ – "ಸೇವೆಯಲ್ಲೂ ದೇವರನ್ನು ಕಾಣಿ. ಯಾವುದೇ ರೋಗಿಯಾಗಿರಲಿ ವಿದ್ಯಾರ್ಥಿಯಾಗಿರಲಿ ಸಾಮಾನ್ಯ ಜನರೇ ಆಗಿರಲಿ ಕಷ್ಟ ಎಂದು ಬಂದಾಗ ಅದಕ್ಕೆ ಸ್ಪಂದಿಸಿ ಮತ್ತು ನಮ್ಮ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಹಾಯ ಮಾಡಿ" ಎಂದು ಪ್ರೇರೇಪಿಸುತ್ತಾರೆ.

"ಶ್ರೀದೇವಿ ಕುಟುಂಬ" ಎನ್ನುವುದು ಅಲಂಕಾರದ ಶಬ್ದವಲ್ಲ. ನಿಜವಾದ ಅರ್ಥದಲ್ಲಿ ನಾವೆಲ್ಲ ಒಂದು ಕುಟುಂಬದವರಂತೆ ಕೆಲಸ ಮಾಡುತ್ತಿದ್ದೇವೆ. ಅಪ್ಪಾಜಿ ಸಿಬ್ಬಂದಿಗಳಿಗೆ ಸಂಬಳ ಪಡೆಯುವ ನೌಕರರು ಎನ್ನುವ ಭಾವನೆ ಬಾರದಂತೆ ನಾವೆಲ್ಲ ಒಂದೇ ಬಳಗ ಎನ್ನುವ ಭಾವನೆ ಮಾಡಿಸಿದ್ದಾರೆ. ಈ ಕಾರಣಕ್ಕಾಗಿ ಸಂಸ್ಥೆಯ ಎಲ್ಲಾ ನೌಕರರಲ್ಲೂ ಅಗತ್ಯವಾದ ಭಾವೈಕ್ಯತೆ ಇದೆ.

ಅಪ್ಪಾಜಿಯವರಂತಹ ಮೇರು ವ್ಯಕ್ತಿತ್ವದವರೊಂದಿಗೆ ಕರ್ತವ್ಯ ನಿರ್ವಹಿಸುವುದೇ ನಮ್ಮ ಸೌಭಾಗ್ಯ.



# ಶ್ರೀದೇವಿ ಅಂತರಂಗ ಮಾಸಪತ್ರಿಕೆಗೆ ತುಂಬಿದೆ ವರ್ಷ ತಂದಿದೆ ಸಮಾಧಾನ

ಕರ್ನಾಟಕದ ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಹಲವು ವಿಕ್ರಮಗಳನ್ನು ಸಾಧಿಸಿ ಮನೆ ಮಾತಾಗಿರುವವರು ತುಮಕೂರಿನ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಯ ಸಂಸ್ಥಾಪಕರೂ, ಶ್ರೀದೇವಿ ಆಸ್ಪತ್ರೆಯ ಪ್ರವರ್ತಕರು ಮತ್ತು ಖ್ಯಾತ ಸರ್ಜನ್ ಡಾ.ಎಂ. ಆರ್.ಹುಲಿನಾಯ್ಕರ್. ಶ್ರೀಯುತರು ಕಳೆದ ವರ್ಷದ  ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಕನ್ನಡನಾಡಿನ ಸಾಂಸ್ಕೃತಿಕ ಜಗತ್ತಿಗೆ 'ಶ್ರೀದೇವಿ ಅಂತರಂಗ' ಎಂಬ ಮಾಸಪತ್ರಿಕೆಯನ್ನು ಕೊಡುಗೆಯನ್ನಾಗಿ ನೀಡಿದರು. ಈ ಪತ್ರಿಕೆ 'ಶಿಕ್ಷಣ, ಸೇವೆ, ಅಧ್ಯಾತ್ಮದ ಪಯಣ' ಎನ್ನುವ ಧ್ಯೇಯವಾಕ್ಯವನ್ನಿಟ್ಟುಕೊಂಡಿತ್ತು. ಪ್ರಾಯೋಗಿಕವಾಗಿ ಪತ್ರಿಕೆ  ತನ್ನ ಕೆಲಸ ಪ್ರಾರಂಭಿಸಿದ ಕಾರಣ ಪತ್ರಿಕೆಗೆ ಯಾವುದೇ ಬೆಲೆಯನ್ನು ನಿಗದಿ ಮಾಡಿರಲಿಲ್ಲ. ಶ್ರೀದೇವಿ ಶಿಕ್ಷಣ ಸಂಸ್ಥೆಯ ಭಾಗವಾಗಿರುವ 'ಶ್ರೀದೇವಿ ಮೀಡಿಯಾ ಸೆಂಟರ್'  ಪತ್ರಿಕೆಯ ಪ್ರಕಟಣೆಯ ಜವಾಬ್ದಾರಿ ಹೊತ್ತಿದೆ.

ಪತ್ರಿಕೆ ತನ್ನದೇ ಆದ ಸಂಪಾದಕ ಮಂಡಲಿಯನ್ನು ರಚಿಸಿಕೊಂಡಿತ್ತು. ಪ್ರಧಾನ ಸಂಪಾದಕರಾಗಿ ಡಾ.ಎಂ.ಆರ್.ಹುಲಿನಾಯ್ಕರ್, ಗೌರವ ಸಂಪಾದಕರಾಗಿ ಡಾ.ಕೆ.ಆರ್.ಕಮಲೇಶ್, ಕಾರ್ಯನಿರ್ವಾಹಕ ಸಂಪಾದಕರಾಗಿ ಡಾ.ರಮಣ ಎಂ.ಹುಲಿನಾಯ್ಕರ್, ಸಂಪಾದಕರಾಗಿ ಅಂಬಿಕಾ ಎಂ.ಹುಲಿನಾಯ್ಕರ್, ಸಂಯೋಜಕ ಸಂಪಾದಕರಾಗಿ ಎಂ.ಎಸ್.ಪಾಟೀಲ್, ಸಲಹಾ ಸಂಪಾದಕರಾಗಿ ಎನ್.ಭಾರತಿ, ಸಂಪಾದಕ ಮಂಡಲಿಯ ಸದಸ್ಯರಾಗಿ ಡಾ.ಭವಾನಿ ಸ್ಟಾಲಿನ್, ಡಾ.ಮನೋನ್ಮಣಿ, ಡಾ.ಲಾವಣ್ಯ ರಮಣ, ಸಹಾಯಕ ಸಂಪಾದಕರಾಗಿ ಎನ್.ಆನಂದ, ಪುಟ ವಿನ್ಯಾಸಕಾರರಾಗಿ ಸುಮಾ ಸಾಗರ್ ಮತ್ತು ಮುದ್ರಕರಾಗಿ ಮಾರುತಿ ಪ್ರಿಂಟರ್ಸ್‌ನ ಹೆಚ್.ಪ್ರಕಾಶ ಅವರುಗಳಿದ್ದಾರೆ.

ಶ್ರೀದೇವಿ ಅಂತರಂಗ ಪತ್ರಿಕೆ 12 ಸಂಚಿಕೆಗಳನ್ನು ಹೊರತಂದಿದೆ. ತನ್ನ ಧ್ಯೇಯಗಳಿಗೆ ಅನುಗುಣವಾಗಿ ಲೇಖನ, ವಿಶೇಷ ಲೇಖನ ಮತ್ತು ವರದಿಯನ್ನು ಪ್ರಕಟಿಸಿದೆ. ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ಜರುಗಿದ ವಿವಿಧ ಕಾರ್ಯಚಟುವಟಿಕೆಗಳನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಅನೇಕ ಕಾಯಿಲೆ ಮತ್ತು ಅದಕ್ಕೆ ಸಂಬಂಧ ಚಿಕಿತ್ಸೆಯ ವಿವರಗಳನ್ನು ಓದುಗರಿಗೆ ಒದಗಿಸಿರುವ ಕಾರಣ ಆರೋಗ್ಯ ಕುರಿತಂತೆ ಜನರಲ್ಲಿ ಜ್ಞಾನಾಭಿವೃದ್ಧಿಯಾಗಿರುವುದನ್ನು ಗಮನಿಸಬಹುದು. ವಿಶ್ವವಿದ್ಯಾನಿಲಯ, ಅನೇಕ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ, ಸ್ಥಳೀಯ ಸಂಸ್ಥೆಗಳು, ಸರ್ಕಾರದ ಕಚೇರಿ, ಸಚಿವರು ಮತ್ತು ಶಾಸಕರು ಜೊತೆಗೆ ವಿವಿಧ ವಲಯದ ಗಣ್ಯರು ಪತ್ರಿಕೆ ಓದುತ್ತಿರುವುದರಿಂದ ವ್ಯಾಪಕ ಪ್ರಮಾಣದಲ್ಲಿ 'ಶ್ರೀದೇವಿ ಅಂತರಂಗ' ತನ್ನ ಜಾಲವನ್ನು ವಿಸ್ತಾರಗೊಳಿಸಿಕೊಂಡಿದೆ.

ಪತ್ರಿಕೆ ಪ್ರಾರಂಭದಿಂದಲೂ ಶೈಕ್ಷಣಿಕ ಮತ್ತು ಸಮಾಜದಲ್ಲಿ ಸಕಾರಾತ್ಮಕ ಬೆಳವಣಿಗೆಯಲ್ಲಿ ಆಸ್ತಕಿ ಹೊಂದಿದೆ. ಸಿಂಗಲ್ ಡೆಮ್ಮಿ (ಟ್ಯಾಬ್ಲೋ ಆಕರ) ಆಕಾರದ 8 ಪುಟದ ಈ ಪತ್ರಿಕೆ ಬಹುವರ್ಣದ ಮುದ್ರಣ ಹೊಂದಿದೆ. ಪ್ರತಿ ಪುಟದ ವಿನ್ಯಾಸ ವೈವಿಧ್ಯಮಯವಾಗಿದೆ. ಅತ್ಯುತ್ತಮ ಕಾಗದ ಬಳಕೆ ಮತ್ತು ಏಕಪ್ರಕಾರದ ಮುದ್ರಣದ ಗುಣಮಟ್ಟದಿಂದಾಗಿ ಪತ್ರಿಕೆ ಜನರಾಕರ್ಷಣೆಗೆ ಪಾತ್ರವಾಗಿದೆ.

ಶ್ರೀದೇವಿ ಅಂತರಂಗ ಪತ್ರಿಕೆಯ 12ಸಂಚಿಕೆಗಳ ಸಿಂಹಾವಲೋಕನ ಮಾಡಿದರೆ ಪತ್ರಿಕೆ ಮಾಡಿರುವ, ಮಾಡುತ್ತಿರುವ ಶ್ಲಾಘನೀಯ ಕಾರ್ಯ ತಿಳಿಯುತ್ತದೆ. ಶ್ರೀದೇವಿ ಅಂತರಂಗ ಪತ್ರಿಕೆ ಮೊದಲ ಸಂಚಿಕೆ. ಪತ್ರಿಕೆಯಲ್ಲಿ 'ಪ್ರಧಾನ ಸಂಪಾದಕರ ಅಂತರಂಗ,' ಸಂಪಾದಕರ 'ಅನಿಸಿಕೆ', ಕಾರ್ಯನಿರ್ವಾಹಕ ಸಂಪಾದಕರ 'ಮನದ ಮಾತು' ಮತ್ತು ಕೊನೆಯಲ್ಲಿ ಅಧ್ಯಾತ್ಮದ ವಿಚಾರಕ್ಕಾಗಿ 'ಅರ್ಚನೆ' ಎಂಬ ಶಾಶ್ವತ ಶೀರ್ಷಿಕೆಗಳನ್ನು ಮಾಡಿಕೊಳ್ಳಲಾಗಿದೆ. ಆ ಮಾಸಗಳ ವೈಶಿಷ್ಟ್ಯಕ್ಕೆ ಅನುಗುಣವಾಗಿ ವಿಶೇಷ ಲೇಖನ ಸಹ ಪ್ರಕಟವಾಗಿದೆ.

ಪ್ರಧಾನ ಸಂಪಾದಕರ ಅಂತರಂಗ ಮತ್ತು ಅರ್ಚನೆ ಶೀರ್ಷಿಕೆಗಳನ್ನು ಹೆಚ್ಚು ಕಡಿಮೆ ಎಲ್ಲಾ ಸಂಚಿಕೆಗಳಲ್ಲೂ ಕಾಣಬಹುದು. ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳು ಆಯಾಯ ತಿಂಗಳು ಮಾಡಿದ ಕಾರ್ಯಕ್ರಮಗಳ ವರದಿಯಿದೆ. ಶ್ರೀದೇವಿ ಆಸ್ಪತ್ರೆ 800 ಹಾಸಿಗೆಗಳ ದೊಡ್ಡ ಆಸ್ಪತ್ರೆ. ಪ್ರತಿದಿನ ಹತ್ತಾರು ಆಪರೇಷನ್‌ಗಳು ನಡೆಯುತ್ತವೆ. ಅದರಿಂದ ಅಪರೂಪದ ಕಾಯಿಲೆಗಳು ಗುಣವಾಗಿ ಪೇಶೆಂಟ್ ಮನೆಗೆ ಹೋಗಿರುತ್ತಾರೆ. ಸಾರ್ವಜನಿಕರ ತಿಳಿವಳಿಕೆಗಾಗಿ ಇಲ್ಲಿನ ವೈದ್ಯರೇ ಪ್ರಮುಖ ಆಪರೇಷನ್‌ಗಳ ವಿವರಗಳನ್ನು ನೀಡಿದ್ದಾರೆ.

ಜೊತೆಗೆ ಶ್ರೀದೇವಿ ಆಸ್ಪತ್ರೆ ಅನೇಕ ಕ್ಯಾಂಪ್‌ಗಳನ್ನು ಹಮ್ಮಿಕೊಂಡಿದ್ದು, ಅದರ ಉಪಯೋಗ ಸಾರ್ವಜನಿಕರು ಪಡೆದುಕೊಂಡಿದ್ದಾರೆ. ಅದರ ವಿವರಗಳನ್ನು ಸುದ್ದಿಯ ರೂಪದಲ್ಲಿ ಕೊಡಲಾಗಿದೆ. ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಶ್ರೀ ದುರ್ಗಾಂಬಿಕಾದೇವಿ ಈ ಕ್ಯಾಂಪಸ್‌ನ ಅಧಿದೇವತೆ. ಆಕೆಗೆ ವಿಶೇಷ ದಿನಗಳಲ್ಲಿ ನಡೆಯುವ ಪೂಜಾ ಕಾರ್ಯಗಳ ವಿವರವನ್ನು ಕೊಡಲಾಗಿದೆ. ಜೊತೆಗೆ ಅರ್ಚನೆ ವಿಭಾಗದಲ್ಲಿ ಅನೇಕ ಹಬ್ಬಗಳ ವಿವರ ಕೊಡಲಾಗಿದೆ.

ಭಕ್ತಿ ಮತ್ತು ಅಧ್ಯಾತ್ಮದ ವಿಚಾರಗಳನ್ನು 'ಅರ್ಚನೆ' ಶೀರ್ಷಿಕೆಯಲ್ಲಿ ಅರ್ಥಪೂರ್ಣವಾಗಿ ವಿವರಿಸಲಾಗಿದೆ.



**'ಶ್ರೀದೇವಿ ಅಂತರಂಗ' ಮಾಸಪತ್ರಿಕೆಯ ಮೊದಲ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಸಂಯೋಜಕರು ಹಾಗೂ ರಾಷ್ಟ್ರೀಯ ಭದ್ರತಾ ಕೌನ್ಸಿಲ್ ಖಜಾಂಚಿಯಾದ ಬಸವರಾಜ ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ದೊಡ್ಡಮರಳವಾಡಿ ಗ್ರಾಪಂ ಅಧ್ಯಕ್ಷರಾದ ಎಂ.ಕೆ.ಶಿವಶಂಕರ್, ಪ್ರಜಾಪ್ರಗತಿ ದಿನಪತ್ರಿಕೆ ಸಂಪಾದಕರಾದ ಎಸ್.ನಾಗಣ್ಣ, ಕನ್ನಡಪ್ರಭ ದಿನಪತ್ರಿಕೆಯ ವರದಿಗಾರರಾದ ಉಗಮ ಶ್ರೀನಿವಾಸ್, ಉದಯವಾಣಿ ದಿನಪತ್ರಿಕೆ ವರದಿಗಾರರಾದ ಚಿ.ನಿ.ಪುರುಷೋತ್ತಮ್, ಡಾ.ರಮಣ್ ಎಂ ಹುಲಿನಾಯ್ಕರ್, ಎಂ.ಎಸ್.ಪಾಟೀಲ್, ಡಾ.ಕೆ.ಆರ್.ಕಮಲೇಶ್, ಎನ್.ಭಾರತಿ ಹಾಗೂ ಡಾ.ಲಾವಣ್ಯ ರಮಣ್ ಉಪಸ್ಥಿತರಿದ್ದರು.**




## ನವೆಂಬರ್ 2022

- ಪ್ರಧಾನ ಸಂಪಾದಕರ ಅಂತರಂಗ ಕಾಲಂನಲ್ಲಿ ಡಾ.ಎಂ. ಆರ್.ಹುಲಿನಾಯ್ಕರ್ ಅವರು ಭಾರತೀಯ ಸಮಾಜವನ್ನು ಕಾಡುತ್ತಿರುವ ಅಸ್ಪೃಶ್ಯತೆ ಆಚರಣೆ ಕುರಿತು ನೋವಿನಿಂದ ಬರೆಯುತ್ತಾರೆ. ತಮ್ಮ ಲೇಖನದಲ್ಲಿ ಗುಬ್ಬಿ ತಾಲ್ಲೂಕಿನ ನಿಟ್ಟೂರು ಮತ್ತು ಚಾಮರಾಜನಗರದ ಹೆಗ್ಗೋಠಾರ ಗ್ರಾಮಗಳ ಘಟನೆಗಳನ್ನು ಉಲ್ಲೇಖಿಸಿ ಬಸವಣ್ಣ ಮತ್ತು ಮಹಾತ್ಮ ಗಾಂಧೀಜಿ ಅವರ ಕನಸು ನನಸಾಗದ ವಿಚಾರವನ್ನು ದುಃಖದಿಂದ ಹೇಳುತ್ತಾರೆ.
- ಶ್ರೀದೇವಿ ಫಾರ್ಮಸಿ ಕಾಲೇಜಿನ ಕು.ನೇಹ ಬೇಗಂ ಎರಡನೆಯ ರ್‍ಯಾಂಕ್ ಗಳಿಸಿರುವ ವಿಚಾರ ಮುಖಪುಟದಲ್ಲಿ ಅವರ ಫೋಟೋ ಸಮೇತ ಪ್ರಕಟವಾಗಿರುವುದು ವಿದ್ಯಾರ್ಥಿಗಳಿಗೆ ಹರ್ಷ ತರುವ ವಿಚಾರವಾಗಿದೆ.
- ಸಂಪಾದಕರ ವಾಣಿ ಶೀರ್ಷಿಕೆಯಲ್ಲಿ ಸಂಪಾದಕರಾದ ಶ್ರೀಮತಿ ಅಂಬಿಕಾ ಎಂ.ಹುಲಿನಾಯ್ಕರ್ ಅವರು ಭಾರತೀಯ ಸಮಾಜದಲ್ಲಿ ಮಹಿಳೆಗೆ ಪೂಜ್ಯ ಸ್ಥಾನವಿದೆ, ಅದು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ದೊರೆಯಬೇಕು ಎಂಬ ಆಗ್ರಹ ಮಾಡಿದ್ದಾರೆ.
- ಕಾರ್ಯನಿರ್ವಾಹಕ ಸಂಪಾದಕರಾದ ಡಾ.ರಮಣ ಹುಲಿನಾಯ್ಕರ್ ಅವರ 'ಮನದ ಮಾತು' ಶೀರ್ಷಿಕೆಯಲ್ಲಿ ಶ್ರೀದೇವಿ ಅಂತರಂಗ ಪತ್ರಿಕೆಯನ್ನು ತಮ್ಮ ಸಹೋದ್ಯೋಗಿಗಳು ಹೇಗೆ ಸೃಜನಶೀಲ ವೇದಿಕೆಯನ್ನಾಗಿ ಹೇಗೆ ಪರಿವರ್ತನೆ ಮಾಡಿಕೊಳ್ಳಬಹುದು ಎನ್ನುವುದನ್ನು ಹೇಳುತ್ತಾರೆ.
- 'ವಿಶ್ವ ರೇಡಿಯಾಲಜಿ ದಿನ'ದ ಮಹತ್ವ ಕುರಿತು ವಿಶೇಷ ಲೇಖನವಿದೆ.
- ಶ್ರೀದೇವಿ ಶಿಕ್ಷಣ ಸಂಸ್ಥೆ ಮತ್ತು ಶ್ರೀ ದುರ್ಗಾಂಬಿಕಾ ದೇವಸ್ಥಾನ ಚಾರಿಟಬಲ್ ಟ್ರಸ್ಟ್ ಪ್ರತಿವರ್ಷ ನೀಡುವ 'ಶ್ರೀದೇವಿ ರಮಣ ಮಹರ್ಷಿ ಪುರಸ್ಕಾರ–2022' ಅನ್ನು ಸುವರ್ಣಮುಖಿ ಸಂಸ್ಕೃತಿಧಾಮದ ರೂವಾರಿ ಆಚಾರ್ಯ ಎಂ.ನಾಗರಾಜ್ ಅವರಿಗೆ ಪ್ರದಾನ ಮಾಡಲಾಯಿತು. ಡಾ.ಕಮಲೇಶ್ ಅವರು ಆಚಾರ್ಯ ಡಾ.ಎಂ.ನಾಗರಾಜ್ ಕುರಿತು 'ಸೇವೆಗೆ ಮುಡಿಪಿಟ್ಟ ನಂದಾದೀಪ' ಎನ್ನುವ ಕೃತಿ ರಚಿಸಿದ್ದರು. ಅದನ್ನು ಮಾಜಿ ಸಚಿವರಾದ ಹೆಚ್.ವಿಶ್ವನಾಥ್ ಬಿಡುಗಡೆ ಮಾಡಿದರು. ಮೈಸೂರಿನ ಖ್ಯಾತ ವಿದ್ವಾಂಸರು ಮತ್ತು ಅಧ್ಯಾತ್ಮಜೀವಿ ಡಾ.ಕೆ.ಅನಂತರಾಮು ಕೃತಿ ಪರಿಚಯ ಮಾಡಿಕೊಟ್ಟರು. ಪತ್ರಿಕೆಗೆ ಸಮಾರಂಭದ ವರದಿಯನ್ನು  ಸಲಹಾ ಸಂಪಾದಕರಾದ ಶ್ರೀಮತಿ ಎನ್. ಭಾರತಿ ಅವರು ಮಾಡಿದ್ದಾರೆ.
- ಡಾ.ಮನೋನ್ಮಣಿ ಅವರು ಜಪಾನಿನಲ್ಲಿರುವ ಕರ್ತವ್ಯಪ್ರಜ್ಞೆ ಕುರಿತು 'ಇಕಿಗಾಯಿ' (Ikigai) ಎನ್ನುವ ಸಿದ್ಧಾಂತವನ್ನು ಸೊಗಸಾಗಿ ವಿವರಿಸಿದ್ದಾರೆ.
- 'ವಿಶ್ವ ಮಧುಮೇಹ' ದಿನಾಚರಣೆಯ ವಿವರವಿದೆ
- ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ.ಡಿ.ಬಸವೇಶ್ ಅವರ ಪಿಹೆಚ್.ಡಿ. `Soft Computational Techniques to discover unique and precise knowledge from Big-Data' ಕುರಿತು ಕಿರು ಪರಿಚಯ ಮಾಡಿಕೊಡಲಾಗಿದೆ.
- ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ಮಕ್ಕಳಿಗಾಗಿ ಕೌಶಲ್ಯಾಭಿವೃದ್ಧಿ ಕುರಿತು ಪ್ರತಿಷ್ಠಿತ ಕಂಪನಿಗಳ ಜೊತೆ ಮಾಡಿಕೊಂಡ ಒಪ್ಪಂದದ ಸುದ್ದಿಯನ್ನು ನೋಡಬಹುದು. ಇದರ ಪ್ರಯೋಜನ ಇಲ್ಲಿನ ಮಕ್ಕಳಿಗೆ ಆಗುತ್ತದೆ.
- ಶ್ರೀದುರ್ಗಾಂಬಿಕಾ ದೇವಿಯ ಅರ್ಚಕರಾದ ಶ್ರೀಚಂದ್ರಶೇಖರ ಪನೇರು ಅವರು ಮೂಲತಃ ಉತ್ತರಾಂಚಲದವರಾದರೂ ಶೃಂಗೇರಿ ಮಠದಲ್ಲಿ ಹಲವು ವರ್ಷ ವೇದಾಭ್ಯಾಸ ಮತ್ತು ದೇವತಾರ್ಚನೆ ಕಾರ್ಯಗಳ ತರಬೇತಿ ಪಡೆದಿದ್ದಾರೆ. ಅವರು ಶ್ರೀ ದುರ್ಗಾಂಬಿಕಾದೇವಿ ಮಹಿಮೆಯನ್ನು ಹೇಳಿದ್ದಾರೆ. ದೇವಿಯ ಸಾನಿಧ್ಯದಲ್ಲಿರುವ ಶ್ರೀ ಶಂಭುಲಿಂಗೇಶ್ವರಸ್ವಾಮಿಯ ಕಾರ್ತಿಕಮಾಸದ ಪೂಜಾಕಾರ್ಯಗಳ ವಿವರವನ್ನು ನೋಡಬಹುದು.




## ಡಿಸೆಂಬರ್ 2022

- ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ, ಪತ್ರಕರ್ತರಾದ ಮಧು ನಾಗಣ್ಣ ಅವರು ವಿಶೇಷ ಚೇತನದ ಮಕ್ಕಳಿಗೆ ರಾಷ್ಟ್ರೀಯ ಚೆಸ್ ಕ್ರೀಡಾಕೂಟವನ್ನು ಆಯೋಜಿಸಿದ್ದರು. ಅದರ ಸಮಾರೋಪಕ್ಕೆ ಮಾಜಿ ಉಪಮುಖ್ಯಮಂತ್ರಿ ಮತ್ತು ಶಾಸಕರಾದ ಡಾ.ಜಿ.ಪರಮೇಶ್ವರ ಅವರು ಆಗಮಿಸಿದ್ದರು. ಈ ಕ್ರೀಡಾಕೂಟದ ವೈಶಿಷ್ಟ್ಯವನ್ನು ಕುರಿತು ಪ್ರಧಾನ ಸಂಪಾದಕರು ತಮ್ಮ 'ಪ್ರಧಾನ ಸಂಪಾದಕರ ಅಂತರಂಗ' ಶೀರ್ಷಿಕೆಯಲ್ಲಿ ಸುಂದರವಾಗಿ ಹೇಳಿದ್ದಾರೆ. ಚೆಸ್ ಕ್ರೀಡೆಯ ಇತಿಹಾಸ ಮತ್ತು ಪ್ರಮುಖ ಆಟಗಾರರ ಮಾಹಿತಿ ಲಭ್ಯವಿದೆ.
- ತುಮಕೂರು ಜಿಲ್ಲೆಯ ಕುರುಬ ಸಮಾಜದ ನಾಯಕರು ಮತ್ತು ಬಿಜೆಪಿ ಹಿರಿಯ ಮುಖಂಡರಾದ ಬಿ.ಕೆ.ಮಂಜುನಾಥ ಅವರಿಗೆ ಆತ್ಮೀಯ ಸನ್ಮಾನವನ್ನು ನೆಪವಾಗಿಟ್ಟುಕೊಂಡು ಅವರನ್ನು ಪರಿಚಯ ಮಾಡಿಕೊಡಲಾಗಿದೆ.
- ಐವತ್ತು ವರ್ಷಗಳ ಹಿಂದೆ ಎಂ.ಬಿ.ಬಿ.ಎಸ್.ಪದವಿ ಗಳಿಸಿ ಮನೆಮನೆಗೆ ಹೋಗಿ ಚಿಕಿತ್ಸೆ ನೀಡುತ್ತಿದ್ದ, ಸಾಂಕ್ರಾಮಿಕ ರೋಗಗಳ ವಿರುದ್ಧ ಜನಜಾಗೃತಿ ಮೂಡಿಸುತ್ತಿದ್ದ ಚನ್ನಗಿರಿಯ ದಿವಂಗತ ಡಾ.ಎ.ಬಸವಣ್ಣಯ್ಯ ಅವರನ್ನು ಲೇಖಕಿ ಭಾರತಿ ಅವರು ಆತ್ಮೀಯವಾಗಿ ಪರಿಚಯಿಸಿದ್ದಾರೆ.
- ಶ್ರೀದೇವಿ ಸಂಸ್ಥೆಯಲ್ಲಿ ವೃತ್ತಿಶಿಕ್ಷಣದ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೋರ್ಸ್‌ಗಳ ಮಹತ್ವವನ್ನು ಮನದಟ್ಟು ಮಾಡಿಕೊಟ್ಟಿರುವ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಕೆ.ಶ್ರೀನಿವಾಸ ಅಭಿಪ್ರಾಯವನ್ನು ಎನ್.ಆನಂದ ವರದಿ ಮಾಡಿದ್ದಾರೆ.

■ ಕಾರ್ಯನಿರ್ವಾಹಕ ಸಂಪಾದಕರಾದ ಡಾ.ರಮಣ ಎಂ.ಹುಲಿನಾಯ್ಕರ್ ಅವರು ತಮ್ಮ 'ಮನದ ಮಾತು' ಕಾಲಂನಲ್ಲಿ ವಿಶೇಷ ಚೇತನ ಮಕ್ಕಳಲ್ಲಿರುವ ಆತ್ಮವಿಶ್ವಾಸ ಮತ್ತು ಅವರಿಗೆ ಬೆಂಬಲವಾಗಿ ನಿಂತ ಅವರ ಪೋಷಕರನ್ನು ಪ್ರೀತಿಯಿಂದ ಚಿತ್ರಿಸಿದ್ದಾರೆ. ಅವರ ಪ್ರಕಾರ ನಾಗರಿಕ ಸಮಾಜ ಈ ಮಕ್ಕಳಿಂದ ಕಲಿಯುವುದು ಬಹಳವಿದೆ.

■ 'ಶ್ರೀದೇವಿ ಮತ್ತು ರಮಣ ಮಹರ್ಷಿ ನರ್ಸಿಂಗ್ ಕಾಲೇಜ್'ಗಳ ಆಶ್ರಯದಲ್ಲಿ ಪ್ರತಿವರ್ಷ 'ದಿವಂಗತ ಎಸ್.ಎನ್.ಸರೋಜಮ್ಮ ಮತ್ತು ದಿವಂಗತ ವಿಮಲಮ್ಮ ನಾರಾಯಣ ಜೋಯಿಸ್ ಪ್ರತಿಭಾ ಪುರಸ್ಕಾರ' ಸಮಾರಂಭ ಅದ್ದೂರಿಯಾಗಿ ಜರುಗುತ್ತದೆ. ಐದು ಪ್ರತಿಭಾವಂತ ನರ್ಸಿಂಗ್ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ನರ್ಸಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡಿದ ಮಹನೀಯರಿಗೆ 'ಸಾಧನಾ ಪುರಸ್ಕಾರ' ಸಮಾರಂಭದ ವರದಿಯನ್ನು ಎನ್.ಭಾರತಿ ಮಾಡಿದ್ದಾರೆ. ಈ ವರ್ಷದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ಲೋಕಸೇವಾ ಆಯೋಗದ ನಿವೃತ್ತ ಸದಸ್ಯರು ಮತ್ತು ಮಾಜಿ ಮುಖ್ಯ ಸಚೇತಕರು ಕರ್ನಾಟಕ ವಿಧಾನಪರಿಷತ್ತು, ಶ್ರೀ ಎಚ್.ಸಿ.ನೀರಾವರಿ ಆಗಮಿಸಿದ್ದು, ಅವರು ಶ್ರೀದೇವಿ ಶಿಕ್ಷಣ ಸಂಸ್ಥೆ ಮತ್ತು ಡಾ.ಹುಲಿನಾಯ್ಕರ್ ಅವರ ಕುರಿತು ಹೇಳಿದ ಮಾತುಗಳನ್ನು ಸಂಗ್ರಹಿಸಿ ಕೊಡಲಾಗಿದೆ.

■ ಶ್ರೀದೇವಿ ಅಂತರಂಗ ಪತ್ರಿಕೆಯ ಬಿಡುಗಡೆಯ ಸಂದರ್ಭದಲ್ಲಿ ಸ್ವಾಭಿಮಾನ ಆಂದೋಲನ ಸಂಯೋಜಕರು ಹಾಗೂ ರಾಷ್ಟ್ರೀಯ ಭದ್ರತಾ ಕೌನ್ಸಿಲ್ ಖಜಾಂಚಿಯಾದ ಬಸವರಾಜ ಪಾಟೀಲ್, ಪತ್ರಕರ್ತರಾದ ಉಗಮ ಶ್ರೀನಿವಾಸ್ ಮತ್ತು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾದ ಚಿ.ನಿ.ಪುರುಷೋತ್ತಮ, ಪ್ರಜಾಪ್ರಗತಿಯ ಸಂಪಾದಕರಾದ ನಾಗಣ್ಣ ಅವರುಗಳು ಭಾಗವಹಿಸಿದ್ದು, ಅವರುಗಳು ಪತ್ರಿಕೋದ್ಯಮ ಕುರಿತು ಮಾತನಾಡಿದ ವಿಚಾರಗಳನ್ನು ದಾಖಲು ಮಾಡಲಾಗಿದೆ.

■ ಶ್ರೀದೇವಿ ಶಿಕ್ಷಣ ನರ್ಸಿಂಗ್ ಕಾಲೇಜ್‌ನಲ್ಲಿ ಮನೋವಿಜ್ಞಾನದ ಪ್ರಾಧ್ಯಾಪಕರಾದ ಡಾ.ಟಿ.ಎಸ್. ಭೀಮರಾಜು ಅವರು 'ಶಾಲಾ ಮಕ್ಕಳಲ್ಲಿ ಕಲಿಕಾ ನ್ಯೂನತೆ' (DYSLEXIA in School Children) ಎನ್ನುವ ಲೇಖನ ಬರೆದಿದ್ದು, ಎಲ್ಲಾ ಪೋಷಕರಿಗೂ ಮತ್ತು ಅಧ್ಯಾಪಕರಿಗೂ ಮಾರ್ಗದರ್ಶನ ನೀಡುವ ಲೇಖನವಾಗಿದೆ.

■ 'ಕೊಲೆಸ್ಟರಾಲ್ ಇತಿ–ಮಿತಿಯಲ್ಲಿದ್ದರೆ ಆರೋಗ್ಯ' ಎನ್ನುವ ಅಪರೂಪದ ಲೇಖನವನ್ನು ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಸಮುದಾಯ ಆರೋಗ್ಯ ವಿಭಾಗದ ಪ್ರಾಧ್ಯಾಪಕರಾಗಿರುವ ಡಾ. ಡಿ.ಕೆ. ಮಹಾಬಲರಾಜು ಅವರು ಬರೆದಿದ್ದಾರೆ. ಕೊಲೆಸ್ಟರಾಲ್ ಕುರಿತು ಸಮಾಜದಲ್ಲಿರುವ ಮಿಥ್ಯೆಗಳ ಬಗ್ಗೆ ಲೇಖನ ಮಾತನಾಡುತ್ತದೆ.

■ ವ್ರತದ ಆಚರಣೆ ಹೇಗೆ ಮನುಷ್ಯನಲ್ಲಿ ಸಂಕಲ್ಪಶಕ್ತಿಯನ್ನು ವೃದ್ಧಿಸುತ್ತದೆ ಎಂಬುದನ್ನು 'ಅರ್ಚನೆ ವಿಭಾಗದಲ್ಲಿ' ತಾವು 12 ವರ್ಷಗಳ ಕಾಲ ಮಾಡಿದ 'ಶ್ರೀ ಮಂಗಳಗೌರಿ'ವ್ರತದ ಹಿನ್ನೆಲೆಯಲ್ಲಿ ಕೆಲವು ವಿಚಾರವನ್ನು ಪ್ರಸ್ತಾಪಿಸುತ್ತಾರೆ.



ಜನವರಿ 2023

■ ಈ ವರ್ಷದ ಜನವರಿ ಮೊದಲ ದಿನ ವೈಕುಂಠ ಏಕಾದಶಿಯ ದಿನ. ಕರ್ನಾಟಕದ ಶ್ರೇಷ್ಠ ಅಧ್ಯಾತ್ಮ ಉಪನ್ಯಾಸಕರೂ ಮತ್ತು ಅತ್ಯಂತ ಸರಳ ವ್ಯಕ್ತಿತ್ವದವರಾಗಿದ್ದ ಶ್ರೀ ಸಿದ್ಧೇಶ್ವರಸ್ವಾಮಿಗಳು ನಿಧನರಾಗುತ್ತಾರೆ. ಡಾ.ಎಂ.ಆರ್.ಹುಲಿನಾಯ್ಕರ್ ಅವರು ಗುರುಗಳ ಸಹಪಾಠಿ 'ವೇದಾಂತ ಕೇಸರಿ' ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಶಿಷ್ಯರು ಶ್ರೀ ಸಿದ್ಧೇಶ್ವರಸ್ವಾಮಿ. ಹೀಗಾಗಿ ಅವರ ವ್ಯಕ್ತಿತ್ವವನ್ನು ತುಂಬಾ ಆತ್ಮೀಯವಾಗಿ ಪ್ರಧಾನ ಸಂಪಾದಕರ ಕಾಲಂನಲ್ಲಿ ಡಾ.ಹುಲಿನಾಯ್ಕರ್ ಓದುಗರಿಗೆ ಮಾಡಿಕೊಟ್ಟಿದ್ದಾರೆ.

■ ಡಾ.ಲಾವಣ್ಯ ರಮಣ ಅವರು ಸಂವಿಧಾನವನ್ನು ರಾಷ್ಟ್ರ ಒಪ್ಪಿಕೊಂಡ ಜನವರಿ 26ನ್ನು ನೆಪವಾಗಿಟ್ಟುಕೊಂಡು, ಕಳೆದ 76 ವರ್ಷಗಳಿಂದ ಭಾರತೀಯ ಸಮಾಜವನ್ನು 'ನಮ್ಮ ಸಂವಿಧಾನ' ಹೇಗೆ ಮುನ್ನಡೆಸುತ್ತಿದೆ ಎಂಬುದನ್ನು 'ಭಾರತೀಯರು ಮರೆಯ ಬಾರದ ದಿನ' ಎನ್ನುವ ಲೇಖನದಲ್ಲಿ ವಿವರವಾಗಿ ತಿಳಿಸಿದ್ದಾರೆ.

■ ಸಂಪಾದಕರಾದ ಶ್ರೀಮತಿ ಅಂಬಿಕಾ ಎಂ.ಹುಲಿನಾಯ್ಕರ್ ಅವರು ಮಾತೃದಿನದ ಅಂಗವಾಗಿ ತಾಯಿಯ ಮಹತ್ವವನ್ನು ಹೇಳುತ್ತಾರೆ. ಪ್ರಧಾನಿ ನರೇಂದ್ರ ಮೋದಿ ಅವರ ತಾಯಿ ಹೀರಾ ಬೆನ್ ಕುರಿತು ಒಳ್ಳೆಯ ಮಾಹಿತಿ ಕೊಡುತ್ತಾರೆ. ತಮ್ಮ ಅಜ್ಜಿಯಂದಿರಾದ ಎಲ್ಲಮ್ಮ ರಂಗಪ್ಪ ಮತ್ತು ಹನುಮಂತಮ್ಮ ಷಣ್ಮುಖಪ್ಪ ಅವರುಗಳನ್ನು ನೆನೆದು ಅವರ ವ್ಯಕ್ತಿತ್ವದ ಯಾವ ಅಂಶಗಳು ತಮಗೆ ಇಂದಿಗೂ ಪ್ರೇರಣೆ ನೀಡಿವೆ ಎನ್ನುವುದನ್ನು ತಿಳಿಸುತ್ತಾರೆ.

■ ತುಮಕೂರು ವಿಶ್ವವಿದ್ಯಾನಿಲಯದ ಪ್ರಪ್ರಥಮ ಉಪಕುಲಪತಿ ಪ್ರೊ.ಓ.ಅನಂತರಾಮಯ್ಯ ಅವರು ನಿಧನರಾದ ಸಂದರ್ಭದಲ್ಲಿ ಅವರನ್ನು ನೆನೆಯುವುದರ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಗಿದೆ.

■ ಕಾರ್ಯನಿರ್ವಾಹಕ ಸಂಪಾದಕರಾದ ಡಾ.ರಮಣ ಎಂ.ಹುಲಿನಾಯ್ಕರ್ ಅವರು 'ಮನದ ಮಾತು' ಕಾಲಂನಲ್ಲಿ ಭಾರತದ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶ ಮಾಡುತ್ತಿರುವ ವಿದೇಶಿ ವಿಶ್ವವಿದ್ಯಾನಿಲಯಗಳನ್ನು ಕುರಿತು ವಿಶ್ಲೇಷಣೆ ಮಾಡುತ್ತಾರೆ. ವಿದೇಶಿ ವಿಶ್ವವಿದ್ಯಾನಿಲಯದ ಆಗಮನ ಭಾರತದ ಉನ್ನತ ಶಿಕ್ಷಣದ ಮೇಲೆ ಬೀರುವ ಪ್ರಭಾವವನ್ನು ಲೇಖಕರು ಓದುಗರಿಗೆ ಕಟ್ಟಿಕೊಡುತ್ತಾರೆ.

■ ಶ್ರೀದೇವಿ ವೈದ್ಯಕೀಯ ಕಾಲೇಜಿನ ಸರ್ಜರಿ ವಿಭಾಗದ ಪ್ರಾಧ್ಯಾಪಕರಾಗಿರುವ ಡಾ.ಮನೋನ್ಮಣಿ ಅವರು ಮೂಲವ್ಯಾಧಿ ಅರ್ಥಾತ್ Piles ಅಥವಾ Haemorrihoids ಕಾಯಿಲೆಗೆ ಲೇಸರ್ ಮೂಲಕ ಹೇಗೆ ಉತ್ತಮ ಚಿಕಿತ್ಸೆ ಕೊಡಬಹುದು ಎನ್ನುವುದನ್ನು ವಿವರಿಸುತ್ತಾರೆ.

■ ಅಂತಾರಾಷ್ಟ್ರೀಯ ಖ್ಯಾತಿಯ ಉದ್ಯಮಿ ರತನ್ ಟಾಟಾ ಅವರ ಕಾಯಕಯೋಗಿ ಬದುಕು ಎಲ್ಲರಿಗೂ ಪ್ರೇರಣೆ ನೀಡುವಂತಹುದು. ಹಿರಿಯ ಪತ್ರಕರ್ತರಾದ ಬಿ.ಎಸ್. ವೆಂಕಟೇಶ ಪ್ರಸಾದ್ ಅವರು ರತನ್ ಟಾಟಾ ಅವರ ಆತ್ಮಕಥನದಿಂದ ಆಸಕ್ತಿ ಹುಟ್ಟಿಸುವ 'ಸರಿ ಅನಿಸಿದ್ದನ್ನು ಮಾಡುವುದೇ ಬದುಕಿನ ಸಾರ' ಆಯ್ದು ಕನ್ನಡದ ಓದುಗರಿಗೆ ಕೊಟ್ಟಿದ್ದಾರೆ. ಈ ಲೇಖನ ರತನ್ ಟಾಟಾ ಅವರ ಜೀವನದ ದೃಷ್ಟಿಕೋನ ತಿಳಿಯುವಂತೆ ಮಾಡುತ್ತದೆ.

■ ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಹಬ್ಬಗಳಿಗೆ ವಿಶೇಷವಾದ ಮಹತ್ವವಿದೆ. ಶ್ರೀಮತಿ ಎನ್.ಭಾರತಿ ಅವರು 'ಮಕರ ಸಂಕ್ರಾಂತಿ' ಕುರಿತು ಅಪರೂಪ ಎನ್ನುವ ಮಾಹಿತಿಯನ್ನು ಒದಗಿಸುವ ಲೇಖನವನ್ನು 'ಅರ್ಚನೆ' ಕಾಲಂನಲ್ಲಿ ಬರೆದಿದ್ದಾರೆ.

■ ಶ್ರೀದೇವಿ ವಿದ್ಯಾಮಂದಿರದ ವಾರ್ಷಿಕೋತ್ಸವ ಮತ್ತು ಶ್ರೀದೇವಿ ಆಸ್ಪತ್ರೆಯ ಕೀಲು ಮತ್ತು ಮೂಳೆ ವಿಭಾಗದಿಂದ ನಡೆದ ಕಾರ್ಯಾಗಾರ 'ಮಂಡಿ ಚಿಪ್ಪಿನ ಬದಲಾವಣೆ' ಕಾರ್ಯಕ್ರಮದ ವರದಿಯಿದೆ.



ಫೆಬ್ರುವರಿ 2023

■ ಪ್ರಧಾನ ಸಂಪಾದಕರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಬಾಗಲಕೋಟೆಯಲ್ಲಿ ನಡೆದ 1968ರ ಬ್ಯಾಚ್‌ನ ಎಂ.ಬಿ.ಬಿ.ಎಸ್. ಸಹಪಾಠಿಗಳ ಸಮಾವೇಶಕ್ಕೆ ಹೋಗಿರುತ್ತಾರೆ. ಡಾ.ಹುಲಿನಾಯ್ಕರ್ ಸಹ 1968ರಲ್ಲಿ ಹುಬ್ಬಳ್ಳಿಯ ಕೆ.ಎಂ.ಸಿ.ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ವ್ಯಾಸಂಗಕ್ಕೆ ಸೇರಿದವರು. ಅವರ ಸಹಪಾಠಿಗಳು ಪ್ರತಿವರ್ಷ ಒಂದೊಂದು ಕಡೆ ಸೇರಿ ಕಷ್ಟಸುಖಗಳನ್ನು ಹಂಚಿಕೊಳ್ಳುತ್ತಾರೆ. ಈ ಸಲ ಬಾಗಲಕೋಟೆಯಲ್ಲಿ ಸೇರಿದ್ದರು. ಅದರ ಫೋಟೋ ಈ ಸಂಚಿಕೆಯಲ್ಲಿದೆ.

■ ಇದೇ ಸಂದರ್ಭದಲ್ಲಿ ಡಾ.ಎಂ.ಆರ್.ಹುಲಿನಾಯ್ಕರ್ ಅವರು ತಾವು 1962–63ರಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆದ ರೋಣ ತಾಲ್ಲೂಕಿನ ಹೊಳೆ ಆಲೂರಿಗೆ 'ಶ್ರೀ ಕಲ್ಮೇಶ್ವರ ವಿವಿಧೋದ್ದೇಶ ಪ್ರೌಢಶಾಲೆ'ಗೆ ಭೇಟಿ ನೀಡಿ, ಅಲ್ಲಿನ ಪರಿಸ್ಥಿತಿ ಕುರಿತು ತೀವ್ರ ದುಃಖದಿಂದ ತಮ್ಮ ಅಂತರಂಗದ ಮಾತುಗಳನ್ನು ದಾಖಲು ಮಾಡುತ್ತಾರೆ. ಗ್ರಾಮೀಣ ಪ್ರದೇಶದಲ್ಲಿರುವ ಈ ಶಾಲೆಗೆ ಮೂಲಭೂತ ಸೌಕರ್ಯ ಒದಗಿಸಬೇಕು ಎಂಬ ತೀವ್ರ ಕಳಕಳಿ ಅವರ ಮಾತುಗಳಲ್ಲಿದೆ.

■ ಪ್ರಧಾನ ಸಂಪಾದಕರು ಬಾದಾಮಿ ತಾಲ್ಲೂಕಿನ ಆಲದಕಟ್ಟೆಗೆ ಭೇಟಿ ಕೊಟ್ಟಿರುತ್ತಾರೆ. ತಾವು ಎಂಬತ್ತರ ದಶಕದಲ್ಲಿ ಆರ್ಥಿಕ ಸಹಾಯ ಮಾಡಿದ ಪ್ರಗತಿಪರ ರೈತ ಹನುಮಂತಪ್ಪ ಅವರನ್ನು ಪರಿಚಯಿಸುತ್ತಾ, ಭಾರತದ ರೈತರ ಕಲ್ಯಾಣಕ್ಕೆ ಸರ್ಕಾರ ಮತ್ತು ಸಮಾಜ ಮಾಡಬೇಕಾದ ಕೆಲಸಗಳನ್ನು ಜ್ಞಾಪಿಸುತ್ತಾರೆ.

■ ಸಂಪಾದಕರಾದ ಶ್ರೀಮತಿ ಅಂಬಿಕಾ ಎಂ.ಹುಲಿನಾಯ್ಕರ್ ಅವರು ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವಿಲ್ಲ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹಿಳೆಯರಿಗೆ ಮೀಸಲಾತಿ ಕೊಡಬೇಕು ಎಂದು ಆಗ್ರಹಿಸಿದ್ದಾರೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ದೊರೆತ ಮೀಸಲಾತಿಯಿಂದ ಆಗಿರುವ ಅನುಕೂಲಗಳನ್ನು ಪ್ರಸ್ತಾಪಿಸುತ್ತಾರೆ.

■ ಕ್ಯಾನ್ಸರ್ ಕುರಿತು ಜಾಗೃತಿಯ ಕಾರ್ಯಕ್ರಮ, ಶ್ರೀದೇವಿ ಆಸ್ಪತ್ರೆಯ ಚರ್ಮರೋಗ ವಿಭಾಗ ಏರ್ಪಡಿಸಿದ್ದ ಕಾರ್ಯಾಗಾರ ಹಾಗೂ ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನವರು ಹಮ್ಮಿಕೊಂಡಿದ್ದ 'ಸ್ವಿಚ್‌ಗೇರ್ ಪ್ರಯೋಗಾಲಯದ' ಉದ್ಘಾಟನಾ ಕಾರ್ಯಕ್ರಮಗಳ ವರದಿಯನ್ನು ಎನ್. ಆನಂದ ಮಾಡಿದ್ದಾರೆ.

■ ಶ್ರೀದೇವಿ ಆಸ್ಪತ್ರೆಯ ಮೈಕ್ರೋಬಯಾಲಜಿ ವಿಭಾಗದಲ್ಲಿರುವ ಡಾ. ಸೌಮ್ಯ ಕೆ. ಅವರು ಕೋವಿಡ್ 19ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ 'ಆಣ್ವಿಕ ಪ್ರಯೋಗಾಲಯ (MOLECULAR LABORATORY)'ವನ್ನು ಪರಿಚಯ ಮಾಡಿಕೊಟ್ಟಿದ್ದಾರೆ.

■ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ.ಗ್ರೇಸಿ ಹೇಮಲತಾ ಅವರ ಪಿಹೆಚ್.ಡಿ. ಪ್ರಬಂಧ ``A Study on Competency Assessment among the faculty of Arts and Science Colleges in Tumakuru District of Karnataka State"ದ ಸಾರಾಂಶವನ್ನು ಅವರ ಪರಿಚಯದೊಡನೆ ಮಾಡಿಕೊಡಲಾಗಿದೆ.

■ ಡಾ.ಲಾವಣ್ಯ ರಮಣ ಅವರು ದಿ.7.12.2020ರಂದು ಶ್ರೀ ದುರ್ಗಾಂಬಿಕಾ ದೇವಿಯು ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣವನ್ನು ಶಾಸ್ತ್ರೋಕ್ತವಾಗಿ ಪ್ರವೇಶಿಸಿ ಜಲಾಧಿವಾಸಕ್ಕೆ ಹೋದ ಪ್ರಸಂಗವನ್ನು ನೆನೆದು, ದೇವಿಯ ಆಗಮನದ ಸನ್ನಿವೇಶದಲ್ಲಿ ಭಕ್ತರಲ್ಲಿ ಉಂಟಾದ ಆವೇಶವನ್ನು ವಿವರಿಸುತ್ತಾರೆ.

■ ಶ್ರೀಮತಿ ಶಾಂತಾದುರ್ಗಾದೇವಿ ಅವರು ಕಲ್ಕತ್ತಾಕ್ಕೆ ಹೋಗಿದ್ದ ಸಂದರ್ಭದಲ್ಲಿ ಅಲ್ಲಿನ ಬೇಲೂರು ಮಠದಲ್ಲಿರುವ ಶ್ರೀ ರಾಮಕೃಷ್ಣ ಪರಮಹಂಸರ ಆರಾಧ್ಯ ದೇವತೆ ಶ್ರೀ ಕಾಳಿದೇವಿಯನ್ನು ಕಂಡ ಸಂದರ್ಭವನ್ನು ನೆನೆದು ಆಕೆಯ ಮಹಿಮೆಯನ್ನು ಭಕ್ತರಿಗೆ ಮಾಡಿಕೊಟ್ಟಿದ್ದಾರೆ.



ಮಾರ್ಚ್ 2023

■ ಪ್ರಧಾನ ಸಂಪಾದಕರು ತಮ್ಮ ಅಂತರಂಗದ ನುಡಿಯಲ್ಲಿ, ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಮತ್ತು ಸಾಮಾಜಿಕ ಪ್ರಾತಿನಿಧ್ಯ ನೀಡುವುದೇ ನಿಜವಾದ ಪ್ರಜಾಪ್ರಭುತ್ವ ಎಂದಿದ್ದಾರೆ. ಸ್ವಾತಂತ್ರ್ಯಾನಂತರ ಸಾಮಾಜಿಕ ನ್ಯಾಯಕ್ಕೆ ನಡೆದ ಹೋರಾಟವನ್ನು ದಾಖಲು ಮಾಡುತ್ತಾ, ಗ್ರೀಕ್ ತತ್ವಜ್ಞಾನಿ ಪ್ಲೇಟೋ ಮತ್ತು ಡಾ.ಅಂಬೇಡ್ಕರ್ ಅವರ ಅಭಿಪ್ರಾಯಗಳನ್ನು ಉಲ್ಲೇಖಿಸುತ್ತಾರೆ. ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿ ದೊರಕಿದ ಕಾರಣ ಅನೇಕ ಜಿಲ್ಲೆಗಳಲ್ಲಿ ಎಲ್ಲಾ ಸಮುದಾಯಗಳಲ್ಲೂ ನಾಯಕತ್ವ ಅರಳಿರುವುದನ್ನು ಜ್ಞಾಪಿಸಿಕೊಳ್ಳುತ್ತಾರೆ. ಪ್ರಧಾನ ಸಂಪಾದಕರ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳ ಅಪಾರ ಅನುಭವವನ್ನು ಈ ಲೇಖನ ಅಭಿವ್ಯಕ್ತಗೊಳಿಸುತ್ತದೆ.

■ ತುಮಕೂರಿನ ಗ್ರೇನ್ ಬ್ಯಾಂಕ್‌ನ ಅಧ್ಯಕ್ಷರು ಮತ್ತು ಉದ್ಯಮಿ ಎನ್. ಆರ್.ಜಗದೀಶ್ ಅವರು ಅಕಾಲಿಕವಾಗಿ ಮರಣ ಹೊಂದುತ್ತಾರೆ. ಪುಟ್ಟ ಲೇಖನದಲ್ಲಿ ಅವರ ಸಾಧನೆ ಮತ್ತು ಸಿದ್ಧಿಗಳನ್ನು ಪರಿಚಯಿಸಲಾಗಿದೆ.

■ ಲೇಖಕಿ ಶ್ರೀಮತಿ ಎನ್.ಭಾರತಿ ಅವರು 'ಬದುಕಿಗೊಂದು ಆರ್ಥಕೊಡುವ ಯುಗಾದಿ' ಎನ್ನುವ ಲೇಖನದಲ್ಲಿ ದಕ್ಷಿಣ ಭಾರತ ಮತ್ತು ಇತರ ಕಡೆ ಹೇಗೆ ಯುಗಾದಿ ಆಚರಿಸುತ್ತಾರೆ. ಪ್ರಾಚೀನರು ತಮ್ಮ ಕಾಲವನ್ನು ಹೇಗೆ ನಿರ್ಣಯ ಮಾಡುತ್ತಿದ್ದರು. ಅವರು ಕಂಡುಕೊಂಡ ಕಾಲಮಾನ ರಹಸ್ಯ ಯಾವುದು ಎಂಬುದನ್ನು ಲೇಖನದಲ್ಲಿ ಹೇಳುತ್ತಾರೆ.

■ ಶ್ರೀದೇವಿ ವೈದ್ಯಕೀಯ ಕಾಲೇಜಿನ ಸ್ವಾಗತ ವರಾಂಡದಲ್ಲಿ ಹೊಯ್ಸಳ ವಾಸ್ತುಶಿಲ್ಪ ಶೈಲಿಯ ಅತ್ಯಂತ ಸುಂದರ 'ಶ್ರೀ ವಾಗ್ದೇವಿಮೂರ್ತಿ'ಯನ್ನು ಖ್ಯಾತ ಶಿಲ್ಪಿ ಸುರಾಲ ವೆಂಕಟರಮಣಭಟ್ಟ ಮತ್ತು ಶ್ರೀಮತಿ ರತ್ನ ವೆಂಕಟರಮಣಭಟ್ಟರು ಶ್ರೀದೇವಿ ಸಂಸ್ಥೆಗೆ ಮಾಡಿಕೊಟ್ಟಿದ್ದಾರೆ. ಅದರ ಪ್ರತಿಷ್ಠಾಪನಾ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶ್ರೀಸತ್ಯಸಾಯಿ ಖಾಸಗಿ ವಿಶ್ವವಿದ್ಯಾನಿಲಯದ ಸಹ ಕುಲಪತಿ ಡಾ.ಎ.ಆರ್.ಮಂಜುನಾಥ್ ಅವರು 'ಡಾ.ಎಂ.ಆರ್.ಹುಲಿನಾಯ್ಕರ್ ಅವರು ಸಾಧಿಸಿರುವ ಸಿದ್ಧಿಯನ್ನು ಕೊಂಡಾಡುತ್ತ, ಶ್ರೀದೇವಿ ವಿದ್ಯಾಸಂಸ್ಥೆ ಬೇಗ ಖಾಸಗಿ ವಿಶ್ವವಿದ್ಯಾನಿಲಯವಾಗಬೇಕು' ಎಂದು ಅಭಿಪ್ರಾಯಪಟ್ಟರು.

■ ಕಾರ್ಯನಿರ್ವಾಹಕ ಸಂಪಾದಕರಾದ ಡಾ.ರಮಣ ಎಂ.ಹುಲಿನಾಯ್ಕರ್ ಅವರು 'ವಿಶ್ವ ಕ್ಯಾನ್ಸರ್ ದಿನ'ದ ಅಂಗವಾಗಿ 'ಕ್ಲೋಸ್ ದಿ ಕೇರ್ ಗ್ಯಾಪ್' (CLOSE THE CARE GAP) ಎನ್ನುವ ಲೇಖನದಲ್ಲಿ ಶ್ರೀದೇವಿ ವೈದ್ಯಕೀಯ ಕಾಲೇಜು ಹಮ್ಮಿಕೊಂಡಿದ್ದ ಉಚಿತ ಕ್ಯಾನ್ಸರ್ ಪತ್ತೆ ಕಾರ್ಯಕ್ರಮದ ವಿವರವನ್ನು ಕೊಡುತ್ತಾರೆ. ಕ್ಯಾನ್ಸರ್ ಕಾಯಿಲೆಯ ಬಗ್ಗೆ ಮಾಹಿತಿ ನೀಡುತ್ತಾ ಅದರಿಂದ ಬಿಡುಗಡೆ ಹೇಗೆ ಎಂಬುದನ್ನು ವಿವರಿಸಿದ್ದಾರೆ.

■ ಎಂ.ಬಿ.ಎ. ಪದವೀಧರರಿಗೆ ಸಾಗರದಾಚೆ ಉದ್ಯೋಗದ ಅವಕಾಶಗಳನ್ನು ಡಾ.ಎಂ.ಎನ್.ನರಸಿಂಹನ್ ಅವರು ಶ್ರೀದೇವಿ ಕಾಲೇಜ್‌ನ ಸಮಾರಂಭದಲ್ಲಿ ಹೇಳಿದ್ದರು. ಆ ಸಮಾರಂಭ ವರದಿಯನ್ನು ಸಂಚಿಕೆಯಲ್ಲಿ ಕೊಡಲಾಗಿದೆ.

■ ಎಂ.ಬಿ.ಬಿ.ಎಸ್.ಗೆ ಬರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷದ ಆರಂಭದಲ್ಲೇ 'ಬಿಳಿ ವರ್ಣದ ಸಮವಸ್ತ್ರ ಸಮಾರಂಭ'ವನ್ನು ಹಮ್ಮಿಕೊಳ್ಳಲಾಗುತ್ತದೆ. ಅದರ ಪ್ರಾಮುಖ್ಯತೆಯನ್ನು ಶ್ರೀದೇವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರ ಕುಮಾರ್ ಅವರು ತಿಳಿಸುತ್ತಾ, ವೈದ್ಯಕೀಯ ವೃತ್ತಿಯ ಮಹತ್ವವನ್ನು ನೂತನ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟಿದ್ದಾರೆ.

■ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಇನ್ನು ಮುಂದೆ ತಾವು ಚುನಾವಣಾ ರಾಜಕೀಯದಲ್ಲಿರುವುದಿಲ್ಲ ಎಂದು ವಿಧಾನಸಭೆಯಲ್ಲೇ ಘೋಷಣೆ ಮಾಡಿದರು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಡಾ.ಹುಲಿನಾಯ್ಕರ್ ಅವರು ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಿಗೆ ಬಿ.ಎಸ್.ಯಡಿಯೂರಪ್ಪ ಅವರ ಕೊಡುಗೆಯನ್ನು ಪ್ರೀತಿಯಿಂದ ದಾಖಲು ಮಾಡಿದ್ದಾದೆ.

■ ಶಿವರಾತ್ರಿ ಸಂದರ್ಭದಲ್ಲಿ ಶ್ರೀ ಶಂಭುಲಿಂಗೇಶ್ವರಸ್ವಾಮಿಗೆ ನಡೆದ ವಿಶೇಷ ಪೂಜಾ ಕಾರ್ಯಗಳ ವರದಿಯನ್ನು ಕೊಡಲಾಗಿದೆ.

■ ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸ್ಥಾಪಿತವಾಗಿರುವ ಶ್ರೀ ದುರ್ಗಾಂಬಿಕಾ ದೇವಿಯ ಪ್ರತಿಷ್ಠಾಪನೆಯ ನಾಲ್ಕನೆಯ ವರ್ಷದ ಪ್ರತಿಷ್ಠಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ, ಗುಲ್ಬರ್ಗ ವಿಭಾಗದ ತಿಂತಿಣಿ ಕನಕ ಗುರುಪೀಠದ ಪೀಠಾಧಿಪತಿಗಳಾಗಿರುವ ಪೂಜ್ಯ ಶ್ರೀ ಸಿದ್ಧರಾಮಾನಂದಪುರಿ ಮಹಾಸ್ವಾಮಿಗಳು ಭಾಗವಹಿಸಿದ್ದರು. ಡಾ.ಎಂ. ಆರ್.ಹುಲಿನಾಯ್ಕರ್ ಅವರ ಸಂಘಟನಾ ಸಾಮರ್ಥ್ಯವನ್ನು ಅವರು ಪ್ರಶಂಸೆ ಮಾಡಿದರು. ಕಾರ್ಯಕ್ರಮದ ವರದಿಯನ್ನು ಎನ್.ಆನಂದ ನೀಡಿದ್ದಾರೆ.




**ಏಪ್ರಿಲ್ 2023**

■ ಕರ್ನಾಟಕ ರಾಜ್ಯ ವಿಧಾನಸಭೆಗೆ ಮೇ.10 ರಂದು ಮತದಾನ. 13ರಂದು ಫಲಿತಾಂಶ ಎಂದು ಚುನಾವಣಾ ಆಯೋಗ ಪ್ರಕಟಣೆ ನೀಡುತ್ತದೆ. ಅದರ ಹಿನ್ನೆಲೆಯಲ್ಲಿ ಡಾ.ಎಂ.ಆರ್.ಹುಲಿನಾಯ್ಕರ್ ಅವರು, ದೇಶದ ಚುನಾವಣಾ ಪದ್ಧತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ತಂದ ಶ್ರೀ ಟಿ.ಎನ್.ಶೇಷನ್ ಅವರನ್ನು ಅವರ ಕೆಲಸ ಕಾರ್ಯಗಳಿಂದಲೇ ನೆನೆಯುತ್ತಾರೆ. ಪ್ರಸ್ತುತ ಚುನಾವಣಾ ಆಯೋಗ ತುರ್ತಾಗಿ ಮಾಡಬೇಕಾದ ಕೆಲಸಗಳನ್ನು ಪಟ್ಟಿ ಮಾಡುತ್ತಾರೆ. ಪ್ರಜಾಪ್ರಭುತ್ವದ ವಿಚಾರದಲ್ಲಿ ಆಸಕ್ತಿಯುಳ್ಳವರು ಓದಬೇಕಾದ ಲೇಖನ.

■ ಈ ಸಾಲಿನ 'ಶ್ರೀದೇವಿ ವೈದ್ಯಕೀಯ ಮತ್ತು ಸಂಶೋಧನಾ ಕಾಲೇಜಿ'ನ 12 ವಿದ್ಯಾರ್ಥಿಗಳು ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯ ಏರ್ಪಡಿಸಿದ್ದ ಅಂತಿಮ ವರ್ಷದ ಎಂ.ಬಿ.ಬಿ.ಎಸ್. ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದಿದ್ದಾರೆ. ಸುದ್ದಿಯ ಜೊತೆಗೆ ದೀಪು ಎಸ್.ಎ., ಐಶ್ವರ್ಯ ಎಲ್.ಎನ್., ನವ್ಯ ಜಿ., ಪ್ರೇರಣಾ ಮತ್ತು ರಾಕೇಶ್.ಎ ಅವರ ಚಿತ್ರಗಳನ್ನು ಪ್ರಕಟಿಸಲಾಗಿದೆ.

■ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆ ವತಿಯಿಂದ 'ರಕ್ತನಾಳಕ್ಕೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆಯ ತಂತ್ರಗಾರಿಕೆ' (Out Look on Vascular Surgery) ಕುರಿತು ಕಾರ್ಯಾಗಾರ ವ್ಯವಸ್ಥೆಯಾಗಿತ್ತು. ಡಾ.ಎನ್.ಚಂದ್ರಶೇಖರ್, ಡಾ.ಶಾಂತಕುಮಾರ್, ಡಾ.ಪ್ರಶಾಂತ್, ಡಾ.ಪ್ರಭಾಕರ ಮೊದಲಾದ ತಜ್ಞರು ಭಾಗವಹಿಸಿದ್ದರು.

■ 'ವಿಶ್ವ ಕ್ಷಯ ದಿನ'ದ ಸಂದರ್ಭದಲ್ಲಿ ಶ್ರೀದೇವಿ ವೈದ್ಯಕೀಯ ಸಮುದಾಯ ವಿಭಾಗ ಮತ್ತು ತುಮಕೂರಿನ ಜಿಲ್ಲಾ ಕ್ಷಯರೋಗ ಕೇಂದ್ರದಿಂದ Recent Advances in TB Management ಎಂಬ ವಿಷಯದ ಬಗ್ಗೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

■ ಏಪ್ರಿಲ್ 14 ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನ. ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಗಳು ಮತ್ತು 'ಹಾತಿರಾಂ ಬಾವಾಜಿ' ಗ್ರಂಥದ ಲೇಖಕರಾದ ಬಿ.ಹೀರಾನಾಯ್ಕ್ ಅವರು ಡಾ.ಅಂಬೇಡ್ಕರ್ ಕುರಿತು ಚಿಂತಿಸುತ್ತಾ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಅವಲೋಕಿಸಿದ್ದಾರೆ.

■ ಮೈಸೂರಿನ ಖ್ಯಾತ ವಿದ್ವಾಂಸರು ಮತ್ತು ಸ್ವತಃ ಅಧ್ಯಾತ್ಮಜೀವಿಗಳಾದ ಡಾ.ಕೆ.ಅನಂತರಾಮು ಅವರು 'ಶ್ರೀ ರಾಮಕೃಷ್ಣ ಪರಮಹಂಸರ ಮಡದಿ ಮಹಾನ್ ಅಧ್ಯಾತ್ಮಸಾಧಕಿ ಪೂಜ್ಯ ಶ್ರೀ ಶಾರದಾಮಾತೆ' ಅವರ ವ್ಯಕ್ತಿತ್ವ ಮತ್ತು ಅಧ್ಯಾತ್ಮ ಸಾಧನೆ ಕುರಿತು ನಾಲ್ಕು ಸಂಚಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ.




**ಮೇ 2023**

■ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದ ಮತದಾರರು ನೀಡಿದ ಪ್ರಜ್ಞಾಪೂರ್ವಕವಾದ ತೀರ್ಪು ಎಂತಹ ಮಹತ್ವ ಪಡೆದಿದೆ ಎಂಬುದನ್ನು ಡಾ.ಹುಲಿನಾಯ್ಕರ್ ಅವರು ತಮ್ಮ 'ಪ್ರಧಾನ ಸಂಪಾದಕರ ಅಂತರಂಗ' ಕಾಲಂನಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಅಧಿಕಾರದಲ್ಲಿದ್ದ ಬಿಜೆಪಿ ಮತ್ತು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷಗಳ ಶಕ್ತಿ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಚರ್ಚೆ ಮಾಡಿದ್ದಾರೆ. ಕರ್ನಾಟಕದ ಮತದಾರರಿಗೆ ಅಭಿನಂದನೆಗಳನ್ನು ಹೇಳಿದ್ದಾರೆ.

■ ಶ್ರೀದೇವಿ ವಿದ್ಯಾಮಂದಿರದ ವಿದ್ಯಾರ್ಥಿಗಳು ಎಸ್.ಎಸ್. ಎಲ್.ಸಿ. ಪರೀಕ್ಷೆಯಲ್ಲಿ ಅನುಪಮ ಸೇವೆ ಮಾಡಿದ್ದರು. ಈ ಮಕ್ಕಳು ತುಮಕೂರಿನ ಗ್ರಾಮೀಣ ಪ್ರದೇಶದಿಂದ ಬಂದವರು.

■ ಸಂಪಾದಕರಾದ ಶ್ರೀಮತಿ ಅಂಬಿಕಾ ಎಂ.ಹುಲಿನಾಯ್ಕರ್ 'ಬುದ್ಧ ಪೂರ್ಣಿಮೆ' ಹಿನ್ನೆಲೆಯಲ್ಲಿ ಜಗತ್ತಿಗೆ ಪ್ರೀತಿ, ದಯೆ, ಅಹಿಂಸೆ, ತ್ಯಾಗ ಬೋಧಿಸಿದ ಭಗವಾನ್ ಬುದ್ಧನ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ.

■ ಶ್ರೀದೇವಿ ಆಸ್ಪತ್ರೆಗೆ ಎನ್.ಎ.ಬಿ.ಎಚ್.ನ ಮಾನ್ಯತೆ ದೊರಕಿದ ಸಂದರ್ಭದಲ್ಲಿ ಡಾ.ರಮಣ ಎಂ.ಹುಲಿನಾಯ್ಕರ್ ಅವರು National Accreditation Board for Hospital and Health Providers ಸಂಸ್ಥೆಯ ಪರಿಚಯ ಮಾಡಿಕೊಡುತ್ತಾರೆ. ಇಂತಹ ಮಾನ್ಯತೆ ಪಡೆದ ತುಮಕೂರು ಜಿಲ್ಲೆಯ ಮೆಡಿಕಲ್ ಆಸ್ಪತ್ರೆಗಳಲ್ಲಿ ಶ್ರೀದೇವಿಗೆ ಪ್ರಥಮ ಸ್ಥಾನವಿದೆ ಎಂಬುದು ಲೇಖನದ ಮುಖ್ಯಾಂಶ.

■ ಶ್ರೀದೇವಿ ಪದವಿ ಕಾಲೇಜಿನ ಬಿ.ಸಿ.ಎ. ಮತ್ತು ಬಿ.ಕಾಂ. ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ 'ಕ್ಯಾಂಪಸ್ ಇಂಟರ್‌ವ್ಯೂ' ಮೂಲಕ ಕೆಲಸ ಪಡೆದ ವರದಿಯನ್ನು ಎನ್.ಆನಂದ ಮಾಡಿದ್ದಾರೆ.

■ ಶ್ರೀದೇವಿ ವೈದ್ಯಕೀಯ ಕಾಲೇಜಿನ ವಾಕ್ ಮತ್ತು ಶ್ರವಣ ತಜ್ಞರಾದ ಡಾ.ಯದುನಂದನ್ ಅವರು 'ವಿಶ್ವ ಶ್ರವಣ ದಿನಾಚರಣೆ' ಸಂದರ್ಭದಲ್ಲಿ ಕಿವಿಯ ಮಹತ್ವವನ್ನು ಹೇಳುವ ಲೇಖನವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ.

■ ಶ್ರೀದೇವಿ ಪ್ಯಾರಾ ಮೆಡಿಕಲ್ ಅಧ್ಯಯನ ಮಾಡಲು ಇಚ್ಛಿಸುವ ಪ್ರತಿಭಾವಂತ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಕ್ರಮವಾಗಿ 1.20 ಲಕ್ಷ 5 ವಿದ್ಯಾರ್ಥಿ, 60 ಸಾವಿರ 9 ವಿದ್ಯಾರ್ಥಿಗಳಿಗೆ, 15 ಸಾವಿರ 24 ವಿದ್ಯಾರ್ಥಿಗಳಿಗೆ ಹಾಗೂ ಉಳಿಕೆ ವಿದ್ಯಾರ್ಥಿಗಳಿಗೆ 9 ಸಾವಿರ ರೂ ವಿದ್ಯಾರ್ಥಿ ವೇತನ ನೀಡುವ ಪ್ರವೇಶ ಪರೀಕ್ಷೆ ಮತ್ತು ಫಲಿತಾಂಶ ಪ್ರಕಟಿಸಿದ ಸುದ್ದಿಯನ್ನು ಎನ್.ಆನಂದ ವರದಿ ಮಾಡಿದ್ದರು.

■ ಶ್ರೀದೇವಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲು ಘಟಿಕೋತ್ಸವ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಯಾಗಿ ಎಂ.ಎಸ್. ರಾಮಯ್ಯ ಕಾಲೇಜಿನ ಅಧ್ಯಕ್ಷರಾಗಿದ್ದ ಎಂ.ಆರ್.ಜಯರಾಮ್ ಅವರು ಆಗಮಿಸಿದ್ದರು.

■ ಮೆಲ್ಬರ್ನ್ ವಿಶ್ವವಿದ್ಯಾನಿಲಯದ ಕಂಪ್ಯೂಟರ್ ಮತ್ತು ಇನ್‌ಫರ್ಮೇಷನ್ ಸಿಸ್ಟಮ್‌ನ ಪ್ರಾಧ್ಯಾಪಕರಾದ ಡಾ.ರಾಜಕುಮಾರ ಬಯ್ಯ ನೇತೃತ್ವದಲ್ಲಿ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ 'ಇಂಟರ್ ನೆಟ್' ಮಹತ್ವ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ ಜರುಗಿತು.




**ಜೂನ್ 2023**

■ ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತ್ರತ್ವದ ಸರ್ಕಾರ 'ಅನ್ನಭಾಗ್ಯ' ಯೋಜನೆಯನ್ನು ಅನುಷ್ಠಾನ ಮಾಡಿದಾಗ ವೈದ್ಯರಾಗಿ ಡಾ.ಹುಲಿನಾಯ್ಕರ್ ಅವರು ಬಡತನದಿಂದ ಬಳಲುತ್ತಿರುವ ಮಕ್ಕಳಿಗೆ ಆಹಾರ ಧಾನ್ಯ ಒದಗಿಸುವುದರಿಂದ ಹೇಗೆ ಅಪೌಷ್ಟಿಕತೆ ನಿವಾರಣೆಯಾಗುತ್ತದೆ, ಅದರಿಂದ ಅವರ ಆರೋಗ್ಯ ಸುಧಾರಣೆಗೆ ಸಹಾಯವಾಗುತ್ತದೆ ಎಂಬುದನ್ನು ಅಂಕಿ–ಅಂಶಗಳ ಆಧಾರದ ಮೇಲೆ ತಮ್ಮ 'ಪ್ರಧಾನ ಸಂಪಾದಕರ ಅಂತರಂಗ' ಶೀರ್ಷಿಕೆಯಲ್ಲಿ ಸುದೀರ್ಘವಾಗಿ ಪ್ರಸ್ತಾಪಿಸಿದ್ದಾರೆ.

■ ಶ್ರೀದೇವಿ ಆಸ್ಪತ್ರೆಯ ನ್ಯೂರೋ ವಿಭಾಗಕ್ಕೆ ಹೊಸದಾಗಿ ಬಂದಿರುವವರು ಡಾ.ಎಸ್.ಸಂಪತ್. ಇವರು ಹಿಂದೆ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಸರ್ಜನ್ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ. ಅವರ ಜೊತೆಯಿರುವ ಡಾ.ಮಹಮ್ಮದ್ ಆಲಿ ಸುತಾರ್ ಸಹ ಅತ್ಯುತ್ತಮ ನ್ಯೂರೋ ತಜ್ಞರು. ಅವರನ್ನು ಹೇಗೆ ತುಮಕೂರು ಜನತೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ಲೇಖನದಲ್ಲಿ ಹೇಳಲಾಗಿದೆ.

■ ಸಂಪಾದಕರಾದ ಶ್ರೀಮತಿ ಅಂಬಿಕಾ ಎಂ.ಹುಲಿನಾಯ್ಕರ್ ತಮ್ಮ 'ಸಂಪಾದಕರ ವಾಣಿ' ಯಲ್ಲಿ 'ಶಿಕ್ಷಕರು ಆಚಾರ್ಯ ಪದವಿಗೇರಬೇಕು. ಕೇವಲ ಮಕ್ಕಳನ್ನು ಪಠ್ಯ ವಿಷಯದಲ್ಲಿ ಸಿದ್ಧತೆ ಮಾಡಿದರೆ ಸಾಲದು, ಅವರಿಗೆ ಜೀವನಮಾನ ಸ್ಫೂರ್ತಿದಾಯಕರಾಗಿ ಶಿಕ್ಷಕರಿರಬೇಕು' ಎನ್ನುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕ ಪಾತ್ರ ದೊಡ್ಡದು. ಅವರೇ ಮಕ್ಕಳನ್ನು ಶಿಕ್ಷಣದ ಹಾದಿಗೆ ತರುವುದು. ಹಾಗಾಗಿ ಅವರ ಜವಾಬ್ದಾರಿ ಹೆಚ್ಚಿರುತ್ತದೆ.

■ ದಿಢೀರನೆ ನಿಧನರಾದ ಬಸಪ್ಪ ಹುಲಿನಾಯ್ಕರ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಗಿದೆ.

■ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜ್‌ನ ಗಣಕ ವಿಭಾಗದ ಡಾ.ಎಚ್.ಎ.ದಿನೇಶ್ ಅವರು 'ಅಂತರ್ಜಾಲ ಮಾಹಿತಿ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ' ಎನ್ನುವ ವಿಚಾರದ ಮೇಲೆ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು. ಅದೇ ವಿಚಾರವನ್ನು ಕುರಿತು ವಿಶೇಷ ಲೇಖನವೊಂದನ್ನು ಈ ಸಂಚಿಕೆಗೆ ಬರೆದಿದ್ದಾರೆ. 'ಸೈಬರ್ ಸೆಕ್ಯೂರಿಟಿ'ಯ ವಿಚಾರದಲ್ಲಿ ಅವರು ಕೊಟ್ಟಿರುವ ಮಾಹಿತಿ ಜನಸಾಮಾನ್ಯರಿಗೂ ಅನುಕೂಲವಾಗುವಂತಿದೆ.

■ ಶ್ರೀದೇವಿ ಮೆಡಿಕಲ್ ಕಾಲೇಜ್‌ನಿಂದ 'ವಿಶ್ವ ತುರ್ತು ಚಿಕಿತ್ಸಾ ದಿನ' ದ ಅಂಗವಾಗಿ 'ವಾಕಥಾನ್ ರ್‍ಯಾಲಿ' ವ್ಯವಸ್ಥೆ ಮಾಡಲಾಗಿತ್ತು. ವೈದ್ಯಕೀಯ ತುರ್ತು ಸಂದರ್ಭವನ್ನು 'ಗೋಲ್ಡನ್ ಅವರ್' ಎನ್ನುತ್ತಾರೆ. ಈ ಅವಧಿಯನ್ನು ಯಾರೂ ಮೀರಬಾರದು ಎಂಬ ಸಂದೇಶ ಈ ರ್‍ಯಾಲಿಯಲ್ಲಿ ಅಡಕವಾಗಿತ್ತು

■ ಪ್ಯಾರಾ ಮೆಡಿಕಲ್ ಕೋರ್ಸ್‌ಗಳಲ್ಲಿ ಫಾರ್ಮಸಿ ಮತ್ತು ಫಿಜಿಯೋಥೆರಪಿಗಳಿಗಿರುವ ಬೇಡಿಕೆಯನ್ನು ಯುವ ಜನಾಂಗಕ್ಕೆ ತಿಳಿಸಲಾಯಿತು.




**ಜುಲೈ 2023**

■ ಭಾರತದಲ್ಲಿ ಜುಲೈ 7ನೆಯ ದಿನ 'ವೈದ್ಯರ ದಿನವನ್ನಾಗಿ' ಆಚರಿಸಲಾಗುತ್ತಿದೆ. ಅದಕ್ಕೆ ಕಾರಣಗಳೇನು ಎಂಬುದನ್ನು ಡಾ.ಹುಲಿನಾಯ್ಕರ್ ಅವರು ತಮ್ಮ 'ಪ್ರಧಾನ ಅಂತರಂಗ' ಕಾಲಂನಲ್ಲಿ ವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ. 'ಭಾರತರತ್ನ' ಬಿಧಾನ್ ಚಂದ್ರರಾಯ್ ಅರ್ಥಾತ್ ಡಾ.ಬಿ.ಸಿ.ರಾಯ್ (1882ರಿಂದ 1962) ಭಾರತದಲ್ಲಿ ಅಲೋಪಥಿ ವೈದ್ಯಕೀಯ ಪದ್ಧತಿ ಬೇರೂರಲು ಕಾರಣೀಭೂತರು. ಅವರು ಸ್ವಾತಂತ್ರ್ಯ ಹೋರಾಟಗಾರರು. ಇಂಗ್ಲೆಂಡ್‌ನಲ್ಲಿ ಎರಡೆರಡು ವೈದ್ಯಕೀಯ ಪದವಿ ಪಡೆದ ಮೇಲೆ ಭಾರತಕ್ಕೆ ಬಂದು ಕಲ್ಕತ್ತದಲ್ಲಿ ಜನರ ಸೇವೆ ಮಾಡಿದ್ದರು. ಸುಮಾರು 14 ವರ್ಷ ಮುಖ್ಯಮಂತ್ರಿಯಾಗಿದ್ದ ಡಾ.ರಾಯ್ ಪಶ್ಚಿಮ ಬಂಗಾಳಕ್ಕೆ ಹೊಸ ಸ್ವರೂಪ ಕೊಟ್ಟವರು. ಡಾ.ಬಿ.ಸಿ.ರಾಯ್ ಭಾರತದಲ್ಲಿ ಮಹಿಳೆಯರು ನರ್ಸಿಂಗ್ ವೃತ್ತಿಗೆ ಬರಲು ಕಾರಣಕರ್ತರು.

■ ಶ್ರೀದೇವಿ ವೈದ್ಯಕೀಯ ಕಾಲೇಜಿನ ಸ್ತ್ರೀರೋಗ ತಜ್ಞರು ಮತ್ತು ಉಪ ಪ್ರಾಂಶುಪಾಲರಾದ ಡಾ.ರೇಖಾ ಗುರುಮೂರ್ತಿ ಅವರು 'ವಿಶ್ವ ಸ್ತನ್ಯಪಾನ ಸಪ್ತಾಹ'ದ ಅಂಗವಾಗಿ ವಿಶೇಷ ಲೇಖನ ಬರೆದಿದ್ದಾರೆ. ಮಕ್ಕಳ ಬೆಳವಣಿಗೆಯಲ್ಲಿ ಎದೆ ಹಾಲಿನ ಮಹತ್ವವನ್ನು ಸಾರುವ ಲೇಖನವಿದು.

■ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ 'ಕ್ಯಾಂಪಸ್ ಇಂಟರ್‌ವ್ಯೂ'ನಿಂದ ವಿವಿಧ ಕಂಪನಿಗಳಿಗೆ 144 ವಿದ್ಯಾರ್ಥಿಗಳು ಆಯ್ಕೆಯಾಗಿದ್ದರು. ಅವರನ್ನು ಅಭಿನಂದಿಸಲು 'ಪ್ಲೇಸ್‌ಮೆಂಟ್ ಅಪ್ರಿಸಿಯೇಷನ್ ಡೇ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅದರ ವರದಿಯನ್ನು ಎನ್.ಆನಂದ ಮಾಡಿದ್ದರು.

■ ಫ್ರಾನ್ಸ್‌ನ ಲಿಯೋನ್‌ನಲ್ಲಿ ನಡೆದ IHPBA (ಐ.ಎಚ್.ಪಿ.ಬಿ.ಎ.) ಸಮಾವೇಶದಲ್ಲಿ ಶ್ರೀದೇವಿ ವೈದ್ಯಕೀಯ ಕಾಲೇಜ್‌ನ ಸರ್ಜರಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ.ಮನೋನ್ಮಣಿ ಅವರು ಅವರೂಪದ ಪ್ರಬಂಧವನ್ನು ಮಂಡಿಸಿದ್ದರು. ಅದೊಂದು ಶಸ್ತ್ರಚಿಕಿತ್ಸೆಯನ್ನು ತಿಳಿಸುವ ಪ್ರಬಂಧ. "ಎಕ್ಟೋಪಿಕ್ ಥೈರಾಯ್ಡ್ ಪ್ರೆಸೆಂಟಿಂಗ್ ಆ್ಯಸ್ ಎ ಸಿಸ್ಟ್ ಇನ್ ಪೋರ್ಟಾ ಹೆಪಟಿಸ್" ಪ್ರಬಂಧದ ಬಗ್ಗೆ ಸಮ್ಮೇಳನದಲ್ಲಿ ವ್ಯಾಪಕವಾದ ಪ್ರಶಂಸೆ ಬಂದಿತ್ತು.

■ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಪದವಿ ನೀಡುವ 'ದೀಕ್ಷಾಂತಾ' ಸಮಾರಂಭ ಮತ್ತು ಶಸ್ತ್ರಚಿಕಿತ್ಸಕರ ದಿನಾಚರಣೆಯ ಸಂದರ್ಭದಲ್ಲಿ ಹಿರಿಯ ಶಸ್ತ್ರಚಿಕಿತ್ಸಕರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರಿಗೆ ಸನ್ಮಾನ. ಎರಡು ಕಾರ್ಯಕ್ರಮಗಳನ್ನು ಎನ್.ಆನಂದ ವರದಿ ಮಾಡಿದ್ದರು.

■ 'ಅರ್ಚನೆ' ಶೀರ್ಷಿಕೆಯಲ್ಲಿ ಡಾ.ಕೆ.ಅನಂತರಾಮು ಅವರು ಪೂಜ್ಯಶ್ರೀ ರಾಮಕೃಷ್ಣ ಪರಮಹಂಸರ ಪತ್ನಿ ಪೂಜ್ಯ ಶ್ರೀ ಶಾರದಾಮಾತೆ ಅವರ ದೀಕ್ಷಬದ್ಧ ಜೀವನವನ್ನು ಆಕರ್ಷಕವಾಗಿ ಬರೆದಿದ್ದರು. ಶ್ರೀ ಚಾಮುಂಡೇಶ್ವರಿ ತಾಯಿಯ ಜಯಂತಿ ಆಚರಣೆಯ ಅಂಗವಾಗಿ ದೇವಿಯ ಮಹಿಮೆಯನ್ನು ಸಾರುವ ಸುದ್ದಿಯನ್ನು ಪ್ರಕಟಿಸಲಾಗಿತ್ತು.




**ಆಗಸ್ಟ್ 2023**

■ 'ದೇಶದ ಆಡಳಿತದ ಹೊಣೆ ಹೊತ್ತವರು ಜನತೆಗೆ ಉತ್ತರದಾಯಿಗಳಾಗಿರಬೇಕು' ಎನ್ನುವ ಶೀರ್ಷಿಕೆಯಲ್ಲಿ ಪ್ರಧಾನ ಸಂಪಾದಕರು ಭಾರತದಲ್ಲಿನ ಹಸಿವಿನ ಪ್ರಮಾಣವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಭಾರತದಲ್ಲಿ ಹಸಿವಿನಿಂದ ಬಳಲುವವರ ಸಂಖ್ಯೆ ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಿಗಿಂತ ಹೆಚ್ಚಿಗಿದೆ. ಭಾರತದಲ್ಲಿನ ಹಸಿದವರ ಸಂಖ್ಯೆ ಕೆಲವು ದೇಶಗಳ ಜನಸಂಖ್ಯೆಗಿಂತ ಹೆಚ್ಚಿದೆ. ದೇಶದ ಆಡಳಿತ ವ್ಯವಸ್ಥೆ ಏನು ಮಾಡುತ್ತಿದೆ ಎಂದು ಡಾ.ಹುಲಿನಾಯ್ಕರ್ ಖಾರವಾಗಿ ಪ್ರಶ್ನಿಸುತ್ತಾರೆ. ತಮ್ಮ ಮಾತುಗಳಿಗೆ ಉದಾಹರಣೆಯಾಗಿ ದಲಿತ ಕವಿ ಡಾ.ಸಿದ್ದಲಿಂಗಯ್ಯ ಅವರು ಬರೆದ 'ಯಾರಿಗೆ ಬಂತು 47ರ ಸ್ವಾತಂತ್ರ್ಯ' ಎನ್ನುವ ಕವಿತೆಯ ಸಾಲುಗಳನ್ನು ಉದ್ಧರಿಸುತ್ತಾರೆ.

■ ಶ್ರೀದೇವಿ ವೈದ್ಯಕೀಯ ಕಾಲೇಜಿನ ದಂತ ವಿಭಾಗದ ವೈದ್ಯರಾದ ಡಾ.ರವೀಂದ್ರ ಪಿ. ಅವರು "ಹಲ್ಲುಗಳ ಆರೈಕೆ ಮೂಲಕ ಆರೋಗ್ಯ ರಕ್ಷಣೆ ನಿಮ್ಮ ಕೈಯಲ್ಲಿ" ಎನ್ನುವ ಲೇಖನ ಬರೆದು ಸಾಮಾನ್ಯ ಆರೋಗ್ಯ ರಕ್ಷಣೆಯಲ್ಲಿ ಹಲ್ಲುಗಳ ಮಹತ್ವವನ್ನು ಸುಂದರವಾಗಿ ಚಿತ್ರಿಸಿದ್ದಾರೆ.

■ ಡಾ.ಹುಲಿನಾಯ್ಕರ್ ಅವರು ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಮಾಡಿದ ಸ್ಫೂರ್ತಿದಾಯಕ ಭಾಷಣದ ವರದಿಯನ್ನು ಕೊಡಲಾಗಿದೆ.

■ ತುಮಕೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಶ್ರೀಮತಿ ನಹೀದಾ ಜಮ್ ಜಮ್ ಅವರು ಶ್ರೀದೇವಿ ಕಾಲೇಜಿನ 8ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳು ಜೀವನದಲ್ಲಿ ನಿಜವಾದ ಹೀರೋಗಳು ಆಗಬೇಕು ಎಂದು ಕರೆ ಕೊಟ್ಟಿದ್ದಾರೆ. ಅದೇ ಸಮಾರಂಭದಲ್ಲಿ ಗಾಂಧಿಭವನದ ಅಧ್ಯಕ್ಷರಾದ ನಾಡೋಜ ಡಾ.ವೂಡೆ ಕೃಷ್ಣ ಅವರು 'ವಿದ್ಯಾರ್ಥಿಗಳು ಆತ್ಮವಿಶ್ವಾಸ ಮತ್ತು ರಾಷ್ಟ್ರಪ್ರೇಮ ಬೆಳೆಸಿಕೊಳ್ಳುವ ಅಗತ್ಯವಿದೆ" ಎಂದು ಪ್ರತಿಪಾದಿಸಿದರು.

■ ಶ್ರೀಮತಿ ಅರ್ಪಿತಾ ಅವರು ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಾಸೂಟಿಕಲ್ ಸೈನ್ಸ್, ಫಾರ್ಮಾಸೂಟಿಕ್ಸ್ ವಿಭಾಗದಲ್ಲಿ ಸಹ ಪ್ರಾಧ್ಯಾಪಕಿಯಾಗಿದ್ದಾರೆ, ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ ನಿಗದಿ ಮಾಡಿರುವ ಮೊದಲನೆಯ ಡಿ. ಫಾರ್ಮ, ಎರಡನೆಯ ಬಿ.ಫಾರ್ಮ ಕೋರ್ಸ್‌ಗಳ 10 ಪಠ್ಯಪುಸ್ತಕಗಳನ್ನು ರಚಿಸಿದ್ದಾರೆ. ಆ ಪುಸ್ತಕದ ಬಿಡುಗಡೆ ಮತ್ತು ಪರಿಚಯ ಕಾರ್ಯಕ್ರಮ ನಡೆಯಿತು.

■ ಫಿಜಿಯೋಥೆರಪಿ ವಿಭಾಗದಲ್ಲಿ ಪದವಿ ಪ್ರದಾನ ಸಮಾರಂಭ ನಡೆಯಿತು. ಅದರ ವೈಶಿಷ್ಟ್ಯವನ್ನು ವರದಿಯಲ್ಲಿ ಹೇಳಲಾಗಿದೆ.

■ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ವಿಭಾಗದಲ್ಲಿರುವ ಡಾ.ಎಂ.ಗಿರೀಶ್ ಅವರು "ಡೇಟಾ ಅನಲಿಟಿಕ್ಸ್ ಇನ್‌ಲೋಜಿಕಲ್ಲಿ ಕಂಟ್ರೋಲ್ ಪ್ಲೇನ್ ಅಂಡ್ ವರ್ಚುಅಲಿಝ್ಡ್ ನೆಟ್‌ವರ್ಕ್ ಫಿನ್ಷನ್ ಡಿಪ್ಲೋಯ್ಮೆಂಟ್ಸ್" ವಿಷಯದ ಮೇಲೆ ಪಿಹೆಚ್.ಡಿ. ಪಡೆದಿದ್ದಾರೆ. ಅದರ ವಿವರಗಳಿವೆ.

■ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರ ಜನ್ಮದಿನ ಆಗಸ್ಟ್ 29. ಅದರ ಅಂಗವಾಗಿ ಡಾ.ಕೆ.ಆರ್.ಕಮಲೇಶ್ ಅವರು ರಾಮಕೃಷ್ಣ ಹೆಗಡೆ ಅವರ ಬದುಕು ಮತ್ತು ಸಾಧನೆ ಕುರಿತು ವಿಶೇಷ ಲೇಖನ ಬರೆದಿದ್ದಾರೆ.

■ ದಾವಣಗೆರೆ ಜಿಲ್ಲೆ ಚನ್ನಗಿರಿ ಟೌನ್‌ನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ವೃಂದಾವನವನ್ನು ಪಂಚಮ ಮಂತ್ರಾಲಯ ಎಂದು ಭಕ್ತರು ಕರೆಯುತ್ತಾರೆ. ಅಲ್ಲಿಗೆ ಶ್ರೀ ರಾಘವೇಂದ್ರಸ್ವಾಮಿಗಳ ಸನ್ನಿಧಾನ ಯಾವಾಗ ಬಂತು, ಅದಕ್ಕೆ ಕಾರಣಕರ್ತರು ಯಾರು ಮೊದಲಾದ ವಿವರಗಳನ್ನು ಸಿ.ವಿ.ತಿರುಮಲರಾವ್ "ಪಂಚಮ ಮಂತ್ರಾಲಯಕ್ಕೊಮ್ಮೆ ಬನ್ನಿ" ಎನ್ನುವ ಲೇಖನದಲ್ಲಿ ಕೊಡುತ್ತಾರೆ.



ಸೆಪ್ಟೆಂಬರ್ 2023

■ ಪ್ರಧಾನ ಸಂಪಾದಕರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು 'ಪ್ರಧಾನ ಸಂಪಾದಕರ ಅಂತರಂಗ' ಎನ್ನುವ ಶೀರ್ಷಿಕೆಯಲ್ಲಿ, ಭಾರತದಲ್ಲಿ ವೈದ್ಯಕೀಯ ಪ್ರವಾಸೋದ್ಯಮಕ್ಕಿರುವ ಅವಕಾಶಗಳನ್ನು ತೆರೆದಿಡುತ್ತಾರೆ. "2022ರಲ್ಲಿ ಭಾರತದ ಆರೋಗ್ಯವಲಯ 372 ಬಿಲಿಯನ್ ಅಮೆರಿಕನ್ ಡಾಲರ್‌ನಷ್ಟು ಬಂಡವಾಳವನ್ನು ಹೊಂದಿದೆ. ಆರೋಗ್ಯವಲಯದಲ್ಲಿ 4.7 ದಶಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ನವೆಂಬರ್ 2022ಕ್ಕೆ ಭಾರತದಲ್ಲಿ 1.3 ದಶಲಕ್ಷ ವೈದ್ಯರು ಕೆಲಸ ಮಾಡುತ್ತಿದ್ದಾರೆ." ಎನ್ನುವ ಪ್ರಧಾನ ಸಂಪಾದಕರು, ಆರೋಗ್ಯವಲಯ ಇಂದು ದೇಶಕ್ಕೆ ವಿದೇಶಿ ವಿನಿಮಯ ತಂದುಕೊಡಲು ಸಮರ್ಥವಿದೆ ಎಂದು ಅಭಿಪ್ರಾಯಪಡುತ್ತಾರೆ. ವಿದೇಶಿ ಪೇಶೆಂಟ್‌ಗಳು ಡಾಲರ್ ರೂಪದಲ್ಲಿ ಹಣ ಕೊಡುವ ಕಾರಣ ದೇಶದ ಆರ್ಥಿಕ ಚಿತ್ರಣ ಬದಲಾಗುವ ಸಾಧ್ಯತೆಯಿದೆ. ಅದನ್ನು ಉಪಯೋಗಿಸಿಕೊಳ್ಳುವ ಇಚ್ಛಾಶಕ್ತಿ ನಮ್ಮ ಆಡಳಿತ ವ್ಯವಸ್ಥೆಗೆ ಬರಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

■ ಶ್ರೀದೇವಿ ಆಸ್ಪತ್ರೆಯ ನ್ಯೂರೋ ವಿಭಾಗದ ಡಾ.ಎಸ್. ಸಂಪತ್ ಮತ್ತು ಮಹಮ್ಮದ ಆಲಿ ಸುತಾರ ಅವರು ಹೊರಕೆರೆಯ ಹೊನ್ನವಳ್ಳಿ ಗ್ರಾಮದಲ್ಲಿರುವ ಚಂದ್ರಶೇಖರ್ ಅವರಿಗೆ `Pituter gland Tumour' ಆಪರೇಷನ್ ಮಾಡಿ, ಹೋಗಿದ್ದ ದೃಷ್ಟಿಯನ್ನು ದೊರಕಿಸಿ ಕೊಟ್ಟಿದ್ದಾರೆ. ಆಪರೇಷನ್‌ನ ವಿವರಗಳನ್ನು ಕೊಡಲಾಗಿದೆ. ಈ ಆಪರೇಷನ್‌ಗೆ ಬೇರೆ ಕಡೆ 1 ಲಕ್ಷ ವೆಚ್ಚವಾದರೆ ಶ್ರೀದೇವಿ ಆಸ್ಪತ್ರೆಯಲ್ಲಿ 15 ಸಾವಿರ ರೂ.ಗಳು ಮಾತ್ರ ವೆಚ್ಚವಾಗಿದೆ.

■ ಶ್ರೀದೇವಿ ಆಸ್ಪತ್ರೆಯಲ್ಲಿ ನೇತ್ರತಜ್ಞರಾಗಿರುವ ಡಾ.ಲಾವಣ್ಯ ರಮಣ ಅವರು ಆಗಸ್ಟ್ 25ರಿಂದ ಸೆಪ್ಟೆಂಬರ್ 8ರವರೆಗೆ ನಡೆಯುವ 'ನೇತ್ರದಾನ ಜಾಗೃತಿ' ಆಂದೋಲನದ ಅಂಗವಾಗಿ "ದಾನದಲ್ಲಿ ನೇತ್ರದಾನ ಹೆಚ್ಚು ಶ್ರೇಷ್ಠ' ಎನ್ನುವ ವಿಶೇಷ ಲೇಖನ ಬರೆದು ಜನರಲ್ಲಿ ಅರಿವು ಮೂಡಿಸಿದ್ದಾರೆ. ನೇತ್ರದಾನದ ಬಗ್ಗೆ ಅಪರೂಪದ ಮಾಹಿತಿ ಈ ಲೇಖನದಲ್ಲಿದೆ.

■ ಕಾರ್ಯನಿರ್ವಾಹಕ ಸಂಪಾದಕರಾದ ಡಾ.ರಮಣ ಎಂ.ಹುಲಿನಾಯ್ಕರ್ ಅವರು "ಒಳ್ಳೆಯ ಶಿಕ್ಷಕ ಎಂದರೆ ಯಾರು?" ಎಂದು ಪ್ರಶ್ನೆ ಮಾಡಿಕೊಂಡು ತಾವು ಮುಂಬೈನಲ್ಲಿ ಎಂ.ಡಿ.ವ್ಯಾಸಂಗ ಮಾಡುತ್ತಿರುವಾಗ ತಮಗೆ ಮಾರ್ಗದರ್ಶನ ನೀಡಿದ ಡಾ.ಜೈಶ್ರೀ ಘಾಣೇಕರ್ ಅವರ ವಿಚಾರದಲ್ಲಿ ಅತ್ಯಂತ ಅಭಿಮಾನದಿಂದ ಬರೆಯುತ್ತಾರೆ.

■ 'ಶ್ರೀದೇವಿ ರಮಣ ಮಹರ್ಷಿ 2023' ಅನ್ನು ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರಿಗೆ ಕೊಡಲು ತೀರ್ಮಾನವಾಗಿತ್ತು. ಪ್ರಶಸ್ತಿ ಪ್ರದಾನ ಸಮಾರಂಭ ದಿನಾಂಕ 30.9.2023ರಂದು ನಡೆದ ಕಾರಣ ನ್ಯಾಯಮೂರ್ತಿಗಳನ್ನು ಕುರಿತು ವಿಶೇಷ ಸಂಚಿಕೆ ಪ್ರಕಟ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಡಾ.ಕೆ.ಆರ್.ಕಮಲೇಶ್ ಅವರು 'ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ' ಅವರನ್ನು ಕುರಿತು ಕಿರುಹೊತ್ತಿಗೆಯನ್ನು ಪ್ರಕಟಣೆಗೆ ಸಿದ್ಧ ಮಾಡಿದರು. ಈ ಸಮಾರಂಭಕ್ಕೆ ಗಣ್ಯರು ಭಾಗವಹಿಸಿದ್ದರು. ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರ ಬದುಕು ತುಂಬ ಆದರ್ಶ ಮತ್ತು ನಿಷ್ಠೆಯಿಂದ ಕೂಡಿದೆ. ಭಾರತದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಕುರಿತು ಅವರ ಪಾತ್ರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

■ ಪತ್ರಕರ್ತರಾದ ಬಿ.ಎಸ್. ವೆಂಕಟೇಶ ಪ್ರಸಾದ್ ಅವರು, ಭಾರತದ ಇಸ್ರೋ ಚಂದ್ರಯಾನವನ್ನು ಯಶಸ್ವಿಯಾಗಿ ಮುಗಿಸಿದ ಹಿನ್ನೆಲೆಯಲ್ಲಿ, 'ಮೆತ್ತಗೆ ಇಳಿದ ವಿಕ್ರಮ್ ಲ್ಯಾಂಡರ್ ಸರ್ರನೆ ಏರಿದ ಭಾರತದ ಕೀರ್ತಿ' ಎನ್ನುವ ವೈಜ್ಞಾನಿಕ ಲೇಖನವನ್ನು ಬರೆದಿದ್ದಾರೆ. ಇದರಿಂದ ಭಾರತದ ಬಾಹ್ಯಾಕಾಶದ ಸಾಧನೆಯನ್ನು ಕನ್ನಡ ಓದುಗರು ತಿಳಿಯಲು ಸಹಾಯವಾಗುತ್ತದೆ.

■ ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ 'ವರ್ಷಕ್ಕೊಮ್ಮೆ ಬರುವ' ಗೌರಿ ಗಣೇಶ ತರುವ ಹರ್ಷ ಅಗಣಿತ' ಲೇಖನದಲ್ಲಿ ಗೌರಿ–ಗಣೇಶ ವ್ರತದ ಶ್ರೇಷ್ಠತೆ ವಿವರಿಸುತ್ತಾರೆ. ವ್ರತ ಮಾಡಲು ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದನ್ನು ವಿವರವಾಗಿ ಕೊಡುತ್ತಾರೆ. ಸುಮಾರು ಐವತ್ತು ವರ್ಷಗಳ ಹಿಂದೆ ಅವರ ತಾಯಿ ಗೌರಿಪೂಜೆಗೆ ಹೇಗೆ ಅಣಿ ಮಾಡಿಕೊಳ್ಳುತ್ತಿದ್ದರು ಎಂಬುದನ್ನು ವಿವರಿಸಿದ್ದಾರೆ. ಈಗಿನವರಿಗೆ ಅದೊಂದು ಆಶ್ಚರ್ಯದ ಸಂಗತಿಯಾಗಿ ಕಾಣಬಹುದು. ಗಣೇಶನಿಗೆ 21 ನಮಸ್ಕಾರಗಳನ್ನು ಏಕೆ ಅರ್ಪಿಸುತ್ತಾರೆ ಎನ್ನುವುದಕ್ಕೆ ಸಮರ್ಥ ಉತ್ತರವನ್ನು ಕೊಡುತ್ತಾರೆ. ಹೀಗಾಗಿ ಈ ಲೇಖನ ತುಂಬ ವೈಶಿಷ್ಟ್ಯಪೂರ್ಣವಾಗಿದೆ.



ಅಕ್ಟೋಬರ್ 2023

■ ಬೆಳಗಾವಿಯಲ್ಲಿ ನಡೆದ 'ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್' ಸಭೆ ಮತ್ತು ಕುರುಬ ಸಮುದಾಯದ ಸಮಾವೇಶದ ಬಗ್ಗೆ ಡಾ.ಹುಲಿನಾಯ್ಕರ್ 'ನಮ್ಮ ಅಂತರಂಗ'ದ ಶೀರ್ಷಿಕೆಯಲ್ಲಿ ಸವಿಸ್ತಾರವಾಗಿ ಚರ್ಚೆ ಮಾಡುತ್ತಾರೆ. ಇದರಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾಡಿದ ಸನ್ಮಾನ ಅದಕ್ಕೆ ಅವರ ಉತ್ತರ ಎಲ್ಲವನ್ನೂ ಸೊಗಸಾಗಿ ಪ್ರಧಾನ ಸಂಪಾದಕರು ಹೇಳುತ್ತಾರೆ. ಶೋಷಿತ ಸಮುದಾಯ ಇಂತಹ ಸಮಾವೇಶವನ್ನು ಮಾಡಬೇಕಾದ ಅಗತ್ಯದ ಬಗ್ಗೆ ಡಾ.ಲೋಹಿಯಾ ಹೇಳಿದ ಮಾತುಗಳನ್ನು ಜ್ಞಾಪಿಸಿಕೊಳ್ಳಲಾಗಿದೆ.

■ ಶ್ರೀಮತಿ ಎನ್.ಭಾರತಿ ಅವರು, 30.9.2023ರಂದು ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರಿಗೆ ಮಾಡಿದ ಸನ್ಮಾನ ಕಾರ್ಯಕ್ರಮದ ಪ್ರತ್ಯಕ್ಷ ವರದಿಯನ್ನು ಕೊಡುತ್ತಾರೆ. ಸಮಾರಂಭದಲ್ಲಿ ಭಾಗವಹಿಸಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಮತ್ತು ಮಾಜಿ ಕೇಂದ್ರ ಸಚಿವರಾದ ಡಾ.ಎಂ.ವೀರಪ್ಪ ಮೊಯಿಲಿ, ಮಾಜಿ ಶಾಸಕರಾದ ಡಿ.ಆರ್.ಪಾಟೀಲ, ಸನ್ಮಾನಿತರಾದ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ, ಸಮಾರಂಭದ ವ್ಯವಸ್ಥೆ ಮಾಡಿದ್ದ ಡಾ.ಎಂ. ಆರ್.ಹುಲಿನಾಯ್ಕರ್, ಡಾ.ರಮಣ ಎಂ.ಹುಲಿನಾಯ್ಕರ್ ಮತ್ತು ಶ್ರೀಮತಿ ಅಂಬಿಕಾ ಎಂ.ಹುಲಿನಾಯ್ಕರ್ ಅವರ ಭಾಷಣಗಳನ್ನು ಪ್ರತ್ಯೇಕ ಕಾಲಂಗಳಲ್ಲಿ ಪ್ರಕಟಿಸಲಾಗಿದೆ. ಇದರಿಂದ ಓದುಗರಿಗೆ ಸಮಾರಂಭದ ಒಟ್ಟು ಚಿತ್ರಣ ಕಣ್ಮುಂದೆ ಬರುತ್ತದೆ.

■ ಶ್ರೀದೇವಿ ನರ್ಸಿಂಗ್ ಕಾಲೇಜಿನಲ್ಲಿ ಮನೋವೈದ್ಯಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಾ.ಟಿ.ಎಸ್.ಭೀಮರಾಜು ಅವರು 'ಶಾಲಾ ಮಕ್ಕಳಲ್ಲಿ ಆತಂಕ ಮತ್ತು ಖಿನ್ನತೆ' ಕುರಿತು ಲೇಖನ ಬರೆದಿದ್ದಾರೆ. ಇಂದಿನ ಶಿಕ್ಷಣ ವ್ಯವಸ್ಥೆಯ ಭಾಗವಾಗಿರುವ ಪೋಷಕರು ಮತ್ತು ಅಧ್ಯಾಪಕರು ಈ ಲೇಖನ ಓದಲೇಬೇಕಾಗಿದೆ.

■ ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಿದ ಮಕ್ಕಳಿಗೆ ಬೃಹತ್ ಉದ್ಯೋಗ ಮೇಳವನ್ನು ಏರ್ಪಡಿಸಲಾಗಿತ್ತು. ಅನೇಕರಿಗೆ ಇದರಿಂದ ಉದ್ಯೋಗ ಲಭ್ಯವಾಯಿತು. ಅದರ ವರದಿಯನ್ನು ಎನ್.ಆನಂದ ಮಾಡಿದ್ದಾರೆ.

■ ನವರಾತ್ರಿಯ ಹಬ್ಬದ ಸಲುವಾಗಿ ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರು 'ದೇವಿಯ ಅಭಯವೊಂದಿದ್ದರೆ ಸಾಕು' ಎನ್ನುವ ಲೇಖನ ಬರೆದಿದ್ದಾರೆ. ಲೇಖನದ ಪ್ರಾರಂಭದಲ್ಲಿ ದೇವಿ ಭಾಗವತ ಮತ್ತು ದೇವಿ ಪುರಾಣದ ವಿಚಾರಗಳು ಬರುತ್ತವೆ. ಎರಡನೆಯ ವಿಭಾಗದಲ್ಲಿ ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರು ತಾವು ಮದುವೆಯಾದ ದಿನದಿಂದ ಪಾಲಿಸಿಕೊಂಡು ಬಂದಿರುವ ನವರಾತ್ರಿಯ ಸಂದರ್ಭದಲ್ಲಿ ಮಾಡುವ ದೇವಿಯ ಪೂಜೆ ಮತ್ತು ನವರಾತ್ರಿ ಹಬ್ಬದ ಸಂದರ್ಭದಲ್ಲಿ ಶಾಸ್ತ್ರೋಕ್ತವಾಗಿ ಮಾಡುವ ದೇವಿಯ ಆರಾಧನೆಯ ಬಗ್ಗೆ ಮಾಹಿತಿ ಕೊಡುತ್ತಾರೆ.

ಶ್ರೀದೇವಿ ಅಂತರಂಗ ಪತ್ರಿಕೆಗೆ ಮತ್ತಷ್ಟು ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಳ್ಳುವ ಇಚ್ಛೆ ನಮಗಿದೆ. ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿಭಾವಂತ ವ್ಯಕ್ತಿಗಳಿದ್ದಾರೆ. ಅವರ ಚಿಂತನೆಯನ್ನು ಓದುಗರಿಗೆ ಮುಂದಿನ ದಿನಗಳಲ್ಲಿ ತಲುಪಿಸಲಾಗುವುದು.

ಸಂಗ್ರಹ: ಶ್ರೀವತ್ಸ

# ಕೃತಜ್ಞತೆಯ ಸ್ವಭಾವ

■ ಜಗದೀಶ್ ಎಂ. ಕುರಿಯವರ್
ಉಪನ್ಯಾಸಕರು, ಶ್ರೀ ಕಾಳಿದಾಸ ಕಾಲೇಜು, ತುಮಕೂರು



ಪೂಜ್ಯರಾದ ಡಾ.ಎಂ. ಆರ್.ಹುಲಿನಾಯ್ಕರ್ ಅವರ ತಾತನವರ ಊರು ಬಾದಾಮಿ ತಾಲ್ಲೂಕಿನ ಕಾತರಕಿ. ನಮ್ಮೂರು ಸಹ ಅದೇ. ನಮ್ಮ ತಂದೆಯವರು ಹೊಸಳ್ಳಿಗೆ ಹೋಗಿ ಅಲ್ಲೇ ಉಳಿದಿದ್ದರು. ಆದರೂ ಕಾತರಕಿಯ ಸಂಬಂಧ ಬಿಟ್ಟಿರಲಿಲ್ಲ. ನಮ್ಮ ತಾತ ಮತ್ತು ಡಾ. ಹುಲಿನಾಯ್ಕರ್ ಅವರ ತಾತ ಸೋದರ ಸಂಬಂಧಿಗಳು.

ಡಾ.ಎಂ.ಆರ್.ಹುಲಿನಾಯ್ಕರ್ ಅವರಲ್ಲಿ ಕಾಣುವ ಅತ್ಯಂತ ಪ್ರಮುಖವಾದ ಗುಣ ಕೃತಜ್ಞತೆ ಸ್ವಭಾವ. ಇವರು ಬಾಲ್ಯದಲ್ಲಿ ತಾತನ ಜೊತೆ ಕಾತರಕಿಗೆ ಬರುತ್ತಿದ್ದರು. ಅಲ್ಲಿದ್ದ ಗುಡ್ಡದ ರಂಗನಾಥ ಸ್ವಾಮಿ ಅವರ ಮನೆದೇವರು. ಅದಕ್ಕೆ ಪೂಜೆ ಮಾಡಿಸುತ್ತಿದ್ದರು. ಆಗ ತಾತನ ಮಕ್ಕಳು ಇವರಿಗೆ ಊಟೋಪಚಾರ ಮಾಡಿರುತ್ತಾರೆ. ಹೊಳೆ ಆಲೂರಿನಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿದ್ದಾಗ ಒಂದೆರಡು ಸಲ ಕಾತರಕಿಗೆ ಭೇಟಿ ಕೊಟ್ಟಿರಬಹುದು. ಅವರ ಸ್ನೇಹವನ್ನು ಅವರು ಮರೆತಿಲ್ಲ. ಮುಂದೆ ಇವರು ಸರ್ಕಾರಿ ಸೇವೆ ಸೇರಿದ ಮೇಲೆ ತಾತ ಮತ್ತು ತಾಯಿ ನೆನಪಿಗಾಗಿ ಆ ಕುಟುಂಬದ ಹನುಮಂತಪ್ಪ ಅವರಿಗೆ ಧನಸಹಾಯ ಮಾಡಿ, ಆತ ಬೋರ್ ತೆಗೆಸಿ ಉತ್ತಮ ವ್ಯವಸಾಯ ಮಾಡಿ ಪ್ರಗತಿಪರ ರೈತ ಎನಿಸಿಕೊಳ್ಳಲು ಕಾರಣರಾಗಿದ್ದಾರೆ. ನಮ್ಮೂರಿನ ಎಷ್ಟೋ ಜನರಿಗೆ ಅವರ ಹೃದಯ ಮಿಡಿದಿದೆ. ಅಲ್ಲಿನ ಅನೇಕ ಮಕ್ಕಳು ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ವಿವಿಧ ಕೋರ್ಸ್‌ಗಳನ್ನು ಮಾಡಿ ಉತ್ತಮ ಉದ್ಯೋಗ ಪಡೆದು ಜೀವನದಲ್ಲಿ ಯಶಸ್ವಿಯಾಗಿದ್ದಾರೆ.

ನಾನು ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಇತಿಹಾಸದಲ್ಲಿ ಎಂ.ಎ. ಮಾಡಿಕೊಂಡು ನೇರವಾಗಿ ಡಾ. ಹುಲಿನಾಯ್ಕರ್ ಅವರ ಆಶ್ರಯಕ್ಕೆ ಬಂದೆ. ಅಲ್ಲಿಂದ ಅವರು ನಿರಂತರವಾಗಿ ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದಾರೆ. ಮೊದಲಿಗೆ ಶ್ರೀದೇವಿ ಹಾಸ್ಟೆಲ್‌ನ ಉಸ್ತುವಾರಿ ನೋಡಿಕೊಳ್ಳುತ್ತಿದ್ದೆ. ಕಾಲೇಜಿನ ಅನೇಕ ಕಟ್ಟಡಗಳ ನಿರ್ಮಾಣದಲ್ಲಿ ಸಂಸ್ಥೆಗೆ ಸಹಾಯ ಮಾಡಿದೆ.

ದಿವಂಗತ ಸಿ.ಎನ್.ಭಾಸ್ಕರಪ್ಪ ಅವರು ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷರಾಗಿದ್ದಾಗ ನನಗೆ ಕಾಳಿದಾಸ ಪದವಿ ಪೂರ್ವ ಕಾಲೇಜಿನಲ್ಲಿ ಕೆಲಸ ಕೊಡಿಸಿದರು. ನನಗೆ ಅವರ ಮಾರ್ಗದರ್ಶನದಲ್ಲಿ ಮದುವೆಯಾಯಿತು. ನಮ್ಮ ಒಬ್ಬಳೇ ಮಗಳು ಈಗ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ವ್ಯಾಸಂಗ ಮಾಡುತ್ತಿದ್ದಾಳೆ.

ತಮ್ಮ ಅಜ್ಜನ ಬಂಧುವೆಂದು ನನಗೆ ಮತ್ತು ನಮ್ಮ ಕುಟುಂಬಕ್ಕೆ ಡಾ.ಎಂ.ಆರ್. ಹುಲಿನಾಯ್ಕರ್ ನಿರಂತರವಾಗಿ ಸಹಾಯ ಮಾಡುತ್ತಾ ಬಂದಿದ್ದಾರೆ. ಅವರ ಋಣ ತೀರಿಸಲು ಈ ಜನ್ಮದಲ್ಲಿ ಸಾಧ್ಯವಾಗುವುದಿಲ್ಲ.

ಡಾ.ಎಂ.ಆರ್.ಹುಲಿನಾಯ್ಕರ್ ಅವರಂತಹ ಅಪಾದ್ಬಾಂಧವರು ನನಗೆ ದೊರಕಿರುವುದಕ್ಕೆ ದೇವರಿಗೆ ಭಕ್ತಿಪೂರ್ವಕ ನಮಸ್ಕಾರಗಳನ್ನು ಅರ್ಪಿಸಬಯಸುತ್ತೇನೆ.



**ಶಾಂತಾದುರ್ಗಾದೇವಿ ಹುಲಿನಾಯ್ಕರ್**
**ಮ್ಯಾನೇಜಿಂಗ್ ಟ್ರಸ್ಟಿ**
**ಶ್ರೀ ದುರ್ಗಾಂಬಿಕಾದೇವಿ ದೇವಸ್ಥಾನ**

# ಜೊತೆಯಾಗಿ ಹೆಜ್ಜೆ ಹಾಕಿದ್ದೇವೆ

**1992ರಲ್ಲಿ ನರ್ಸಿಂಗ್ ಕಾಲೇಜು ಪ್ರಾರಂಭಿಸಿದರು. ಡಾ.ಹುಲಿನಾಯ್ಕರ್ ಏನು ಮುಟ್ಟಿದರೂ ಚಿನ್ನವಾಗುತ್ತದೆ ಎನ್ನುವ ಖ್ಯಾತಿ ಸಹ ಬಂದು ಬಿಟ್ಟಿತು. ಇವರನ್ನು ಪರೀಕ್ಷೆ ಮಾಡಬೇಕು ಎಂದು ದೇವಿಗೆ ಅನಿಸಿರಬೇಕು. ನಾಲ್ಕು ವರ್ಷ ಬದುಕು ಸವಾಲು ಎನಿಸತೊಡಗಿತು. ನನಗೆ ದೇವಿಯಲ್ಲಿ ಪೂರ್ಣ ವಿಶ್ವಾಸವಿತ್ತು. ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಶ್ರೀ ದುರ್ಗಾಂಬಿಕಾದೇವಿ ಆಲಯ ಕಾರ್ಯ ಪ್ರಾರಂಭವಾಗಿತ್ತು.**

ನಮ್ಮ ಅಪ್ಪಾಜಿ ಭಾರತ ಸರ್ಕಾರದ ಸಚಿವಾಲಯದಲ್ಲಿ ಅಧಿಕಾರಿಯಾಗಿದ್ದರು. ಕರ್ನಾಟಕದಿಂದ ಆಯ್ಕೆಯಾದ ಸಂಸದರು, ಸಚಿವರಾದರೆ ಇವರನ್ನು ತಮ್ಮ ಆಪ್ತಶಾಖೆಗೆ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಆಗವರು ಕೇಂದ್ರ ಸರ್ಕಾರದಲ್ಲಿ ಆರೋಗ್ಯ ಖಾತೆ ರಾಜ್ಯ ಸಚಿವರಾಗಿದ್ದ ಕೊಂಡಜ್ಜಿ ಬಸಪ್ಪ ಅವರ ಆಪ್ತ ಶಾಖೆಯಲ್ಲಿ ಅಧಿಕಾರಿಯಾಗಿದ್ದರು. ಒಮ್ಮೆ ಅವರು ಉತ್ತರ ಕರ್ನಾಟಕಕ್ಕೆ ಸಚಿವರ ಜೊತೆ ಪ್ರವಾಸ ಬಂದಾಗ ಡಾ.ಆಲೂರು ಅವರು ಅಪ್ಪಾಜಿಗೆ ನಮ್ಮವರ (ಡಾ.ಹುಲಿನಾಯ್ಕರ್) ಬಗ್ಗೆ ಹೇಳಿದ್ದರು. ನಾನು ರಜೆಗೆ ಹೊಸಪೇಟೆಯ ಅಜ್ಜಿ ಮನೆಗೆ ಬಂದಿದ್ದೆ. ಅಲ್ಲಿ ನನ್ನನ್ನು ಇವರು ನೋಡಿದರು. ಕೆಲವೇ ತಿಂಗಳುಗಳಲ್ಲಿ ಗದುಗಿನ ಶಿವಾನಂದ ಮಠದಲ್ಲಿ ನಮ್ಮ ವಿವಾಹ ನಡೆಯಿತು.

ನನಗೆ ಎಂ.ಬಿ.ಬಿ.ಎಸ್. ಮಾಡಬೇಕು ಎಂಬ ಆಸೆಯಿತ್ತು. ಇವರು ದೊರೆತ ಮೇಲೆ ಮನೆಯಲ್ಲೇ ಕುಳಿತು ಅಧ್ಯಯನ ಮಾಡುವ ಸೌಲಭ್ಯವಿದ್ದ ಕಾಮರ್ಸ್ ವಿಷಯ ತೆಗೆದುಕೊಂಡೆ. ಮದುವೆಯಾದ ಮೇಲೆ ಪದವಿ, ಮಕ್ಕಳಾದ ಮೇಲೆ ಸ್ನಾತಕೋತ್ತರ ಪದವಿಗಳನ್ನು ಪಡೆದೆ.

ನಮ್ಮ ಮದುವೆಯಾಗಿ 45 ವರ್ಷಗಳು ಕಳೆಯುತ್ತಾ ಬಂದಿದೆ. ನಾವು ಮದುವೆಯಾದಾಗ ಇವರು ನವಲಗುಂದದಲ್ಲಿ ಖಾಸಗಿ ಪ್ರಾಕ್ಟೀಸ್ ಮಾಡುತ್ತಿದ್ದರು. ರಾಯಲ್ ಚಾಲೆಂಜ್ ಮೋಟಾರ್ ಸೈಕಲ್ ಇತ್ತು. ಅದರ ಮೇಲೆ ನಮ್ಮ ಪಯಣ. ಹುರಕಡ್ಲಿ ಅಜ್ಜ ಅವರ ಆಶ್ರಮಕ್ಕೆ ಹೋಗುತ್ತಿದ್ದೆವು. ಅವರಿಗೆ ನಮ್ಮನ್ನು ಕಂಡರೆ ವಿಶೇಷ ಪ್ರೀತಿ. ದೇವಿಯ ಪೂಜೆಯ ದೀಕ್ಷೆ ಕೊಟ್ಟರು. ಇವರಿಗೆ ಹುಬ್ಬಳ್ಳಿ ಕೆ.ಎಂ.ಸಿ.ಯಲ್ಲಿ ಸರ್ಜರಿಯಲ್ಲಿ ಎಂ.ಎಸ್.ಗೆ ಸೀಟು ಸಿಕ್ಕಿತ್ತು. ಅದು ಮುಗಿಯುವ ಹೊತ್ತಿಗೆ ಸರ್ಕಾರಿ ಜಾಬ್ ದೊರಕಿ ಮಡಿಕೇರಿಗೆ ಪೋಸ್ಟಿಂಗ್ ಆಯಿತು. ಅಲ್ಲಿಗೆ ಹೋದೆವು. ಅಲ್ಲೇ ನಮ್ಮ ಎರಡನೆಯ ಮಗಳು ಮನೋನ್ಮಣಿ ಹುಟ್ಟಿದಳು. ಮಡಿಕೇರಿಯಲ್ಲಿ ಇವರು ಸರ್ಜರಿಯನ್ನು ಕರಗತ ಮಾಡಿಕೊಂಡರು. ಬಿಡುವು ಪಡೆಯದೇ ನಿರಂತರವಾಗಿ ಆಪರೇಷನ್ ಮಾಡುತ್ತಿದ್ದರು.

ಎರಡು ವರ್ಷದ ನಂತರ ತುಮಕೂರಿನ ಜಿಲ್ಲಾಸ್ಪತ್ರೆಗೆ ಬಂದೆವು. ಅಲ್ಲಿ ಆರು ವರ್ಷ ಕೆಲಸ ಮಾಡಿದ್ದಾರೆ. ನಮ್ಮಿಬ್ಬರಿಗೂ ತುಮಕೂರು ನಮ್ಮ ನಿಜವಾದ ತಾಯ್ನೆಲ ಎನಿಸಿತು. ನಾಗಪ್ಪಯ್ಯ ಅವರ ಸಹಾಯದಿಂದ ಶ್ರೀದೇವಿ ನರ್ಸಿಂಗ್ ಹೋಂ ಪ್ರಾರಂಭವಾಯಿತು.




ಆಮೇಲೆ 1992ರಲ್ಲಿ ನರ್ಸಿಂಗ್ ಕಾಲೇಜು ಪ್ರಾರಂಭಿಸಿದರು. ಡಾ.ಹುಲಿನಾಯ್ಕರ್ ಏನು ಮುಟ್ಟಿದರೂ ಚಿನ್ನವಾಗುತ್ತದೆ ಎನ್ನುವ ಖ್ಯಾತಿ ಸಹ ಬಂದುಬಿಟ್ಟಿತು. ಇವರನ್ನು ಪರೀಕ್ಷೆ ಮಾಡಬೇಕು ಎಂದು ದೇವಿಗೆ ಅನಿಸಿರಬೇಕು. ನಾಲ್ಕು ವರ್ಷ ಬದುಕು ಸವಾಲು ಎನಿಸತೊಡಗಿತು. ನನಗೆ ದೇವಿಯಲ್ಲಿ ಪೂರ್ಣ ವಿಶ್ವಾಸವಿತ್ತು. ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಶ್ರೀ ದುರ್ಗಾಂಬಿಕಾದೇವಿ ಆಲಯ ಕಾರ್ಯ ಪ್ರಾರಂಭವಾಗಿತ್ತು. ಮನಸ್ಸಿನಲ್ಲಿ ಎಷ್ಟೇ ದುಗಡವಿದ್ದರೂ ಇವರು ಹೆದರಿದವರಲ್ಲ. ಮನೆಯಲ್ಲಿ ಕುಳಿತವರಲ್ಲ. ಮಕ್ಕಳಿಗೆ ಮತ್ತು



ನೌಕರರಿಗೆ ತಾವೇ ಮುಂದೆ ನಿಂತು ಧೈರ್ಯ ತುಂಬಿದರು. ಮಕ್ಕಳು ಮತ್ತು ಸಿಬ್ಬಂದಿ ತುಂಬಾ ಟೆನ್ಷನ್ ಮಾಡಿಕೊಂಡಾಗ ಇವರನ್ನು ನಾನೇ ವಿಚಾರಿಸುತ್ತಿದ್ದೆ. 'ಏನಿಲ್ಲ, ಎಲ್ಲಾ ಸರಿಹೋಗುತ್ತದೆ' ಎನ್ನುತ್ತಿದ್ದರು. ನನಗೂ ನಂಬಿಕೆಯಿತ್ತು. ಇವರು ಯಾರಿಗೂ ನೋವು ಉಂಟು ಮಾಡಿದವರಲ್ಲ. ದುಡಿಮೆ ಮತ್ತು ಪ್ರಾಮಾಣಿಕವಾದ ಜೀವನ ಇವರದು.

ಇವರು ಎಂದೂ ರಜೆಯೆಂದು ಮನೆಯಲ್ಲಿ ಕುಳಿತವರಲ್ಲ. ಸರ್ಕಾರಿ ಉದ್ಯೋಗದಲ್ಲಿದ್ದಾಗಲೂ ಭಾನುವಾರ ಸಂಜೆ ಆಸ್ಪತ್ರೆಗೆ ಹೋಗಿ ತಾವು ಆಪರೇಷನ್ ಮಾಡಿದ್ದ ಪೇಶೆಂಟ್‌ಗಳನ್ನು ನೋಡಿಕೊಂಡು ಬರುತ್ತಿದ್ದರು. ಶ್ರೀದೇವಿ ನರ್ಸಿಂಗ್ ಹೋಂನಲ್ಲಿ ಬೆಳಗಿನ ಜಾವ 5.30ಕ್ಕೆ ಆಪರೇಷನ್ ಮಾಡಿದ್ದಾರೆ. ರಾತ್ರಿ 11ಗಂಟೆಯಾದರೂ ನರ್ಸಿಂಗ್ ಹೋಂನಲ್ಲೇ ಪೇಶೆಂಟ್ ಜೊತೆ ಕಾಲ ಕಳೆದಿದ್ದಾರೆ. ಇಂತಹ ಸೇವೆಯನ್ನು ಸತತ 29 ವರ್ಷ ಮಾಡಿದ್ದಾರೆ. ಈಗಲೂ ಅವರಿಗೆ ಕೆಲಸ ಬಿಟ್ಟರೆ ಏನೂ ಗೊತ್ತಿಲ್ಲ. ಇಂತಹ ಕಾಯಕಜೀವಿಯನ್ನು ದೇವಿ ಆಶೀರ್ವಾದ ಮಾಡದಿರುತ್ತಾಳೆಯೇ? ದೇವಿಯ ಮೇಲಿನ ಶ್ರದ್ಧೆಯಿಂದ ಅನೇಕ ನೈತಿಕ ವಿಚಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಅವರ ಸದಾ ಬಿಳಿ ಬಟ್ಟೆಯನ್ನು ತೊಡುತ್ತಾರೆ. ಹಾಗೇ ಬದುಕು ಸಹ ಸ್ವಚ್ಛವಾಗಿದೆ. ಅವರ ಆಲೋಚನೆಯಲ್ಲಿಯೂ ಇದನ್ನೇ ಕಾಣಬಹುದು.

ನಮ್ಮ ಮದುವೆಯ ಜೊತೆ ಇವರ ಒಬ್ಬ ತಮ್ಮನ ಮದುವೆ ಮಾತ್ರ ಆಗಿತ್ತು. ನಂತರ ಎಲ್ಲ ಮದುವೆ ಕಾರ್ಯಗಳನ್ನು ನಾವೇ ಮಾಡಿದೆವು. ನಮ್ಮ ಕಡೆಯೂ ಅಷ್ಟೆ. ನನ್ನ ಮದುವೆ ಮೊದಲಿನದು. ನಂತರ ಎಲ್ಲಾ ವಿವಾಹಗಳು ನಡೆದವು. ದೆಹಲಿಯಲ್ಲಿದ್ದ ಅಪ್ಪ, ಅಮ್ಮಾ ತುಮಕೂರಿಗೆ ಬಂದು ಪ್ರತ್ಯೇಕವಾಗಿ ಉಳಿದರು. ಶ್ರೀದೇವಿ ನರ್ಸಿಂಗ್ ಹೋಂ ಬೆಳೆಸುವಲ್ಲಿ ನನ್ನ ಅಪ್ಪಾಜಿ ಪಾತ್ರ ಸಹ ಇದೆ. ಇವರಿಗೆ ಈಗಲೂ ತುಪ್ಪದಕುರಹಟ್ಟಿಯ ಜನರೊಡನೆ ಸಂಪರ್ಕವಿದೆ. ಎಲ್ಲದಕ್ಕೂ ತುಮಕೂರಿಗೆ ಬರುತ್ತಾರೆ. ಅವರನ್ನು ಹಿಂದಿನಂತೆ ನೋಡಿಕೊಳ್ಳುತ್ತೇವೆ.

ಮಕ್ಕಳನ್ನು ಹೆಚ್ಚಾಗಿ ನಾನು ಬೆಳೆಸಿದರೂ ಶಿಕ್ಷಣ ಮತ್ತು ವೃತ್ತಿ ಸಂಬಂಧಿಸಿದ ವಿಚಾರದಲ್ಲಿ ಇವರು ಮಾರ್ಗದರ್ಶನ ನೀಡಿದ್ದಾರೆ. ಸದಾ ನಿಮ್ಮನ್ನು ಕೆಲಸದಲ್ಲಿ ತೊಡಗಿಸಿಕೊಳ್ಳಿ. ದೇವರ ಮೇಲೆ ನಿಜವಾದ ಶ್ರದ್ಧೆಯಿದ್ದರೆ, ಉತ್ತಮ ಆಲೋಚನೆಗಳು ನಿಮ್ಮಲ್ಲಿ ಬರುತ್ತವೆ ಎಂದು ಮಕ್ಕಳಿಗೆ ಹೇಳುತ್ತಿದ್ದರು.

ಈ ತನಕ ನಮ್ಮಿಬ್ಬರಲ್ಲಿ ಯಾವುದಕ್ಕೂ ಅಭಿಪ್ರಾಯ ಭೇದ ಬಂದಿಲ್ಲ. ಸಣ್ಣ ಸಣ್ಣ ವಿಚಾರಗಳಿಗೆ ಜೋರಾಗಿ ಮಾತಾಡುತ್ತೇವೆ. ಅದು ಅಲ್ಲಿಗೆ ಮುಗಿದು ಹೋಗುತ್ತದೆ. ಎಲ್ಲ ಸಂದರ್ಭದಲ್ಲೂ ಪರಸ್ಪರ ಜೊತೆಯಾಗಿ ಹೆಜ್ಜೆ ಹಾಕಿದ್ದೇವೆ.

ಮನೆಯ ಕಡೆಯ ವ್ಯವಹಾರವನ್ನು ನಾನು ನೋಡಿಕೊಳ್ಳುತ್ತೇನೆ. ಆಚೆ ಕಡೆಗೆ ಅವರು ನೋಡಿಕೊಳ್ಳುತ್ತಾರೆ. ಇಬ್ಬರೂ ನಮ್ಮ ಕೆಲಸಗಳನ್ನು ಪರಸ್ಪರ ಹೇಳಿಕೊಳ್ಳುತ್ತೇವೆ.

ನಮ್ಮ ಬದುಕು ಎಷ್ಟು ಪಾರದರ್ಶಕವಾಗಿದೆ ಎಂದರೆ ಅದರಲ್ಲಿ ಯಾವುದೇ ಮುಚ್ಚಟೆಯಿಲ್ಲ. ಮಕ್ಕಳು ಸಹ ಹಾಗೇ ನಮ್ಮ ಜೊತೆಯಿದ್ದಾರೆ. ಮಕ್ಕಳು, ಬಂಧುಗಳು, ಮಿತ್ರರು ಹಾಗೂ ಸಂಸ್ಥೆಯ ಸಿಬ್ಬಂದಿ ನಮ್ಮ ಬದುಕಿನ ಭಾಗವಾಗಿದ್ದಾರೆ. ಹಾಗಾಗಿ ಶ್ರೀದೇವಿ ಕುಟುಂಬ ನಿಜವಾದ ಅರ್ಥದಲ್ಲಿ ವಿಶ್ವ ಕುಟುಂಬಿಯಾಗಿದೆ. ಶ್ರೀ ದುರ್ಗಾಂಬಿಕಾದೇವಿ ಮತ್ತು ಶ್ರೀ ಶಂಭುಲಿಂಗೇಶ್ವರ ಸ್ವಾಮಿಯ ಆಶೀರ್ವಾದ ಸದಾ 'ಶ್ರೀದೇವಿ ಕುಟುಂಬದ' ಮೇಲಿರಲಿ ಎಂದು ಪ್ರಾರ್ಥಿಸುತ್ತೇನೆ.

# ಭಕ್ತಿಗೆ ಮಿಗಿಲಾದ ಚೇತನಗಳು

**▪ ಚಂದ್ರಶೇಖರ್ ಪನೇರು**
**ಅರ್ಚಕರು, ಶ್ರೀದುರ್ಗಾಂಬಿಕಾ ದೇವಸ್ಥಾನ**



ನಾನು ಉತ್ತರಾಖಂಡದಲ್ಲಿ ಹುಟ್ಟಿದ್ದರೂ, ವೇದ ಮತ್ತು ಆಗಮಗಳ ಅಧ್ಯಯನಕ್ಕಾಗಿ ಹದಿನೈದು ವರ್ಷಕ್ಕೂ ಹೆಚ್ಚಿನ ಕಾಲವನ್ನು ಶೃಂಗೇರಿ ಮಠದಲ್ಲಿ ಕಳೆದಿದ್ದೇನೆ. 2020ರಲ್ಲಿ ಕೋವಿಡ್ ಸಂದರ್ಭದಲ್ಲಿ ನಾನೇ ಪೂಜಾವೃತ್ತಿ ಹುಡುಕಿಕೊಂಡು ಇಲ್ಲಿಗೆ ಬಂದು ಶ್ರೀ ದುರ್ಗಾಂಬಿಕಾದೇವಿ ಮತ್ತು ಶ್ರೀ ಶಂಭುಲಿಂಗೇಶ್ವರಸ್ವಾಮಿಯ ಅರ್ಚನೆ ಮಾಡುತ್ತಿದ್ದೇನೆ.

ಹಿರಿಯರಾದ ಡಾ.ಹುಲಿನಾಯ್ಕರ್ ಮತ್ತು ಪೂಜ್ಯ ಶಾಂತಾದುರ್ಗಾದೇವಿ ಅಮ್ಮ ಅವರು ದೇವಿ ವಿಚಾರದಲ್ಲಿ ನಡೆದುಕೊಳ್ಳುವ ರೀತಿಯನ್ನು ಮಾತಿನಲ್ಲಿ ಹೇಳಲು ಸಾಧ್ಯವಿಲ್ಲ. "ಇಲ್ಲಿ ಶ್ರೀ ದುರ್ಗಾಂಬಿಕಾದೇವಿ ನೆಲೆಸಿದ್ದಾಳೆ, ಆಕೆ ಪ್ರತಿಯೊಂದನ್ನೂ ನೋಡುತ್ತಿದ್ದಾಳೆ, ನಮಗೆ ಮಾರ್ಗದರ್ಶನ ಮಾಡುತ್ತಿದ್ದಾಳೆ" ಎನ್ನುವ ಅಚಲ ನಂಬಿಕೆ ಅವರಲ್ಲಿದೆ. ಅದಕ್ಕನುಗುಣವಾಗಿ ಅವರು ನಡೆದುಕೊಳ್ಳುತ್ತಾರೆ.

ದೇವಸ್ಥಾನ ನಿರ್ಮಾಣ ಮಾಡಿದ ಮೇಲೆ ಪೂಜೆ ಕಾರ್ಯಗಳಿಗೆ ವ್ಯವಸ್ಥೆಯನ್ನು ಎಲ್ಲರೂ ಮಾಡುತ್ತಾರೆ. ಆದರೆ ಇಲ್ಲಿ ಹಾಗಲ್ಲ. ನಾವು ಏನನ್ನೂ ಕೇಳದಿದ್ದರೂ ಅದನ್ನು ಅವರೇ ಒದಗಿಸುತ್ತಾರೆ. ಮೂರು ವರ್ಷದಿಂದ ದೇವರ ಪೂಜಾ ಕಾರ್ಯಕ್ಕೆ ಒಂದಿಷ್ಟೂ ಲೋಪವಾಗಿಲ್ಲ. ಡಾ.ಲಾವಣ್ಯ ಮೇಡಂ ಎಲ್ಲವನ್ನೂ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡುತ್ತಾರೆ. ಅಂತಹ ಮಾರ್ಗದರ್ಶನವನ್ನು ಅಮ್ಮ ಮತ್ತು ಸಾಹೇಬ್ರು ನೀಡಿರುತ್ತಾರೆ.

ಡಾ.ಹುಲಿನಾಯ್ಕರ್ ಅವರು ಎಂದೂ ದೇವಸ್ಥಾನಕ್ಕೆ ಬರುವುದನ್ನು ತಪ್ಪಿಸುವುದಿಲ್ಲ. ಅದೊಂದು ಅವರ ದಿನಚರಿ. ಒಮ್ಮೆ ಅವರು ಬಂದು ಹೋದರೆ ಸಾಕು, ದೇವಸ್ಥಾನಕ್ಕೆ ಏನು ಬೇಕೋ ಅದನ್ನು ವ್ಯವಸ್ಥೆ ಮಾಡಿಬಿಡುತ್ತಾರೆ. ಇನ್ನು ಪೂಜ್ಯ ಶಾಂತಾದುರ್ಗಾದೇವಿ ಅಮ್ಮ ಅವರು ಮಂಗಳವಾರ ಮತ್ತು ಶುಕ್ರವಾರ ಬರುತ್ತಾರೆ. ದೇವಿ ದರ್ಶನ ಪಡೆದು ಗರ್ಭಗುಡಿಯ ಮುಂದೆ ಹಾಕಿರುವ ಕುರ್ಚಿಯಲ್ಲಿ ಕುಳಿತು ಧ್ಯಾನಸ್ಥರಾದರೆ ಅವರಿಗೆ ಸಮಯ ಗೊತ್ತಾಗುವುದಿಲ್ಲ. ಕೆಲವೊಮ್ಮೆ ಎರಡು, ಮೂರು ಗಂಟೆ ಹೀಗೆ ಧ್ಯಾನದಲ್ಲಿರುತ್ತಾರೆ. ಬೆಳಗಿನಿಂದ ಏನನ್ನೂ ಅವರು ತೆಗೆದುಕೊಂಡಿರುವುದಿಲ್ಲ. ಸಂಕಲ್ಪಶಕ್ತಿಯಿಂದಲೇ ಹಸಿವು, ನೀರಡಿಕೆಯನ್ನು ಗೆದ್ದಿರುತ್ತಾರೆ. ಅವರಲ್ಲಿ ಲೌಕಿಕ ವಿಚಾರಗಳನ್ನು ಹೇಳುವುದಾದರೂ ಹೇಗೆ?

ಈ ದಂಪತಿಯನ್ನು ಕಾಣುವುದೇ ಪುಣ್ಯ. ಇವರ ತಪಃಶಕ್ತಿಯ ಅನುಭವ ದೇವಿಯ ಪೂಜಾ ಕಾರ್ಯದಲ್ಲಿ ನಿರತನಾದಾಗ ನನಗೆ ಅನುಭವವಾಗುತ್ತದೆ. ಈ ಸ್ಥಿತಿ ಭಕ್ತಿಗೆ ಮೀರಿದ್ದು. ವಿಶ್ವದ ನಿಯಂತ್ರಣ ಶಕ್ತಿಗೆ ತನು, ಮನವನ್ನೆಲ್ಲಾ ಅರ್ಪಿಸಿ ಶರಣಾಗುವುದಕ್ಕೆ ಉದಾಹರಣೆಯಂತಿದ್ದಾರೆ ಪೂಜ್ಯ ಹುಲಿನಾಯ್ಕರ್ ದಂಪತಿ.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor in Chief: **Dr M R Hulinaykar**